Question of Privilege against the Mayor, Bangalore City Corporation

ಶ್ರೀ ವಾಟಾಳ್ ನಾಗರಾಜ್.—ಕಾರ್ಪೊರೇಷನ್ ಮೇಯರ್ ಬಗ್ಗೆ ನಾನು 8-9 ದಿವಸಗಳ ಹಿಂದೆ ಒಂದು ಪ್ರಿವಿಲೇಜ್ ಮೋಷನ್ ಕಳುಹಿಸಿದ್ದೆ. ತಾವು ನೋಡುತ್ತೇನೆ ಎಂದು ಹೇಳಿದ್ದಿರಿ. ಇನ್ನೂವರೆಗೆ ಅದನ್ನು ತೆಗೆದುಕೊಂಡಿಲ್ಲ. ದಯವಿಟ್ಟು ಅದರ ಬಗ್ಗೆ ಏನಾಗಿದೆ ಎನ್ನುವುದನ್ನು ತಿಳಿಸುತ್ತೀರಾ ?

ಅಧ್ಯಕ್ಷರು.—ಹೆಲ್ತ್ ಸೆಕ್ರೆಟೆರಿಯವರಿಗೆ ಕಳುಹಿಸಿಕೊಡಿ ಎಂದು ನಾನು ಹೇಳಿದ್ದೇನೆ ಮತ್ತು ನಮ್ಮ ಸೆಕ್ರೆಟರಿಯವರೂ ಕೂಡ ಕಾಗದ ಬರೆದಿದ್ದಾರೆ. ಅಲ್ಲಿಂದ ಉತ್ತರ ಬಂದಮೇಲೆ ಅದನ್ನು ಈ ಸಭೆಯಲ್ಲಿ ಪ್ಲೇಸ್ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ನಾವು ಇಷ್ಟು ಹೇಳಿದರೂ ಇನ್ನೂ ತರಿಸಿಲ್ಲ ಎಂದರೆ ನಾವು ಏನು ತಿಳಿದುಕೊಳ್ಳಬೇಕು ? ಮೇಯರ್, ಕಮೀಷನರ್ ಎಲ್ಲರೂ ಇಲ್ಲೇ ಇದ್ದಾರೆ. ಇಷ್ಟು ಹತ್ತಿರ ಇದ್ದರೂ ಇನ್ನೂವರೆಗೆ ತಾವು ತರಿಸಿಕೊಡುವುದಕ್ಕಾಗುವುದಿಲ್ಲವೇ ಎಂದರೆ ನಿಮಗೆ ಸಿಟ್ಟು ಬರುತ್ತದೆ.

ಅಧ್ಯಕ್ಷರು.—ನಿಮ್ಮ ಮೇಲೆ ನನಗೆ ಸಿಟ್ಟು ಏನು ಇಲ್ಲ. ಪ್ರೊಸೀಜರ್ ಪ್ರಕಾರ ನಮ್ಮ ಸೆಕ್ರೆಟರಿಯವರು, ಹೆಲ್ತ್ ಸೆಕ್ರೆಟರಿಯವರಿಗೂ, ಮುನಿಸಿಪಲ್ ಸೆಕ್ರೆಟೆರಿಯವರಿಗೂ, ಕಾಗದ ಬರೆದಿದ್ದಾರೆ. ಅಲ್ಲಿಂದ ಬಂದ ಮೇಲೆ ಇಡುತ್ತೇನೆ. ಇಷ್ಟು ಹೇಳಿದರೂ ನೀವು ನನ್ನನ್ನು ತರಿಸಿಲ್ಲ, ತರಿಸಿಲ್ಲ ಎಂದು ಹೇಳಿ ಛಾರ್ಜು ಮಾಡುತ್ತೀರಾ.

ಶ್ರೀ ವಾಟಾಳ್ ನಾಗರಾಜ್.—ನೀವು ಕೋಪ ಏತಕ್ಕೆ ಮಾಡಿಕೊಳ್ಳುತ್ತೀರಿ ? ಈವೊತ್ತೇ ಬರೆದು ಅವರಿಂದ ತರಿಸಿಕೊಳ್ಳುವ ಕೆಲಸ ಮಾಡಿ ಎಂದು ಹೇಳಿದೆ.

ಅಧ್ಯಕ್ಷರು.—ನಾನೂ ಅದೇ ಹೇಳಿದ್ದು. ಅವರಿಗೆ ಬರೆದಿದ್ದೇನೆ ಉತ್ತರ ಬರುತ್ತದೆ ಎಂದು.

ಶ್ರೀ ಹೆಚ್. ಡಿ. ದೇವೆಗೌಡ (ಹೊಳೆನರಸೀಪುರ).—ಮಾನ್ಯ ಸಿದ್ದಪ್ಪನವರು ಹೇಳತಕ್ಕಂಥ ವಿಷಯ ಈವೊತ್ತೆ ಕೊನೆ ದಿವಸವಾಗಿರುವುದರಿಂದ ಈ ಸಭೆಯ ಕಾರ್ಯಕಲಾಪಗಳಲ್ಲಿ ಯಾವುದಾದರೂ ಒಂದು ವೇಳೆಯಲ್ಲಿ ತಮ್ಮ ಅನುಮತಿ ಪಡೆದು ವಿದ್ಯಾ ಮಂತ್ರಿಗಳು ಇದರ ಬಗ್ಗೆ ಹೇಳಬೇಕು.

ಇನ್ನೊಂದು ವಿಷಯ. ಕಾರ್ಪೊರೇಷನ್‌ಗೆ ಸಂಬಂಧಪಟ್ಟ ದಾಖಲೆಗಳನ್ನು ತರಿಸಬೇಕು ಎನ್ನುವ ಬಗ್ಗೆ ಶ್ರೀಮಾನ್ ವಾಟಾಳ್ ನಾಗರಾಜ್‌ರವರು ಹೇಳಿದ್ದಾರೆ. ಬಹುಶಃ ಈ ಡಿಮ್ಯಾಂಡ್‌ಗಳ ಮೇಲೇನೇ ಈಗ ಮಾತನಾಡಲು ಸಾಕಷ್ಟು ಕಾಲಾವಕಾಶ ಇಲ್ಲದೇ ಇರುವುದರಿಂದ, ಡಿಮ್ಯಾಂಡ್ ಮುಗಿದ ಮೇಲೆ ಆ ಸಬ್ಜೆಕ್ಟನ್ನು ತೆಗೆದುಕೊಳ್ಳೋಣ.

ಇನ್ನೊಂದು ವಿಷಯ ಏನೆಂದರೆ ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಮಂತ್ರಿಗಳ ಮೇಲೆ ನಾನು ಎರಡು ಹಕ್ಕುಭಾದ್ಯತೆ ಸೂಚನೆಗಳನ್ನು ಕಳುಹಿಸಿಕೊಟ್ಟಿದ್ದೇನೆ. ಇದು ಮತ್ತು ಶ್ರೀ ವಾಟಾಳ್ ನಾಗರಾಜ್‌ರವರು ಹೇಳಿದಂಥ ದಾಖಲೆಗಳು ತರಿಸಿಕೊಂಡರೆ 15ನೇ ತಾರೀಖು ಆದಮೇಲೆ ತಮ್ಮ ಅನುಮತಿ ಪಡೆದೇನೇ ಯಾವತ್ತಾದರೂ ಒಂದು ದಿನ ಇದನ್ನು ಇಟ್ಟುಕೊಳ್ಳೋಣ.

Question of Privilege motion against the Engineer-in-Chief and Additional Secretary to Government, P.W.D.

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಮಾನ್ಯ ಶ್ರೀ ಚೆನ್ನಬಸಪ್ಪನವರು ಒಂದು ಆಶ್ವಾಸನೆ ಕೊಟ್ಟಿದ್ದರು. ಆ ಆಶ್ವಾಸನೆಯನ್ನು ಪೂರ್ತಿ ಮಾಡುತ್ತೀರಾ ? ಮಾಡಿದರೆ ಯಾವತ್ತು ಮಾಡುತ್ತೀರಾ ಎನ್ನುವುದನ್ನು ತಿಳಿಸಬೇಕು.

ಅಧ್ಯಕ್ಷರು.—ನಿನ್ನೆ ದಿವಸ ಅಲ್ಲಿ ನಡೆದಂಥ ಪ್ರಸಂಗವುದಲ್ಲಿ ಶ್ರೀವರ್ಾ ಹೆಚ್. ಡಿ. ದೇವೇಗೌಡರು, ಆರ್ಮುಗಂರವರು, ಕೃಷ್ಣನ್‌ನವರು, ನಾಗಣ್ಣನವರು ಮತ್ತು ಬಂಗಾರಪ್ಪನವರು ಇವರೆಲ್ಲರೂ ಒಬ್ಬ ಆಫೀಸರ್ ಮೇಲೆ ಚಾರ್ಜು ಮಾಡಿದ್ದಾರೆ. ಇಲ್ಲಿಯ ಹಕ್ಕುಭಾದ್ಯತೆಗೆ ಧಕ್ಕೆ ಆಗಿದೆಯೆಂದು ಹೇಳಿದರು. ಆ ಆಫೀಸರು ನಮ್ಮ ಆಫೀಸರ್‌ಗೆ ಕಾಗದ ಬರೆದು ನಾನು ಹಾಗೆ ಮಾತೇ ಆಡಿಲ್ಲ ಎಂದು ಹೇಳಿದ್ದಾರೆ. ಅವರು ಬರೆದಿರುವ ರಿಪ್ಲೈ ಬಹಳ ದೊಡ್ಡದಾಗಿದೆ.

On the other hand the Officer has explained that he has cautioned the Engineers against interesting themselves in politics as it was commonly understood. I am quite satisfied with this explanation. I therefore feel that no question of privilege arises in this matter. In view of denial of this statement attributed to him, I think, the matter relating to contempt should be closed.

ಶ್ರೀ ಹೆಚ್. ಡಿ. ದೇವೇಗೌಡ.—ಈಗ ತಾವು ರೂಲಿಂಗ್ ಕೊಟ್ಟಿದ್ದೀರಿ. ತಮ್ಮ ರೂಲಿಂಗನ್ನು ಪ್ರಶ್ನೆ ಮಾಡುವುದಿಲ್ಲ. ಏತಕ್ಕೆಂದರೆ ಅದು ನನ್ನ ವ್ಯಾಪ್ತಿಗೆ ಮೀರಿದ್ದು ಅಲ್ಲದೆ ಈ ಸಭೆಯ ವ್ಯಾಪ್ತಿಗೂ ಮೀರಿದ್ದು. ಆದರೆ ವೇದರೇ ನಿಮ್ಮ ಉತ್ತರವನ್ನು ಆಂಟಿಸಿಪೇಟ್ ಮಾಡಿದ್ದೆ. ಈ ವಿಚಾರವನ್ನು ಸರ್ಕಾರದ ಗಮನಕ್ಕೆ ತಂದ ಕಾಲದಲ್ಲಿ ನಾಳೆ ಈ ರೀತಿ ಆಗಬಹುದು ಎಂದು ತಿಳಿಸಿದ್ದೇನೆ. ಬಹುಶಃ ಅವಾದ ಮೇಲೆ ತಾವು ಬರೆದಿದ್ದೀರಿ, ಅದಕ್ಕೆ ತಮಗೆ ಉತ್ತರ ಬರೆದಿದ್ದಾರೆ. ಅದರ ವಿವರಣೆಯನ್ನು ಕೊಟ್ಟಿದ್ದಾರೆ ಎಂದು ಈ ಸಭೆಗೆ ತಿಳಿಸಿದ್ದೀರಿ. ನಾನಾದರೂ ಕೇಳುತ್ತೇನೆ. ಆ ದಿವಸದಿಂದ ಇಲ್ಲಿಯವರೆಗೂ ಅವರು ಪತ್ರಿಕೆಗಳಲ್ಲಿ ಅವರ ಹೇಳಿಕೆಗಳನ್ನು ಕಾಂಟ್ರಡಿಕ್ಟ್ ಮಾಡಿಲ್ಲ. ಶನಿವಾರದ ಡೆಕನ್ ಹೆರಾಲ್ಡ್‌ನಲ್ಲೂ ಬಂದಿಲ್ಲ. ನಾನು ಈ ರೀತಿ ಹೇಳಿಲ್ಲ ಎಂದು ಕಾಂಟ್ರಡಿಕ್ಟರಿಯಾಗಿ ಕೂಡ ಹೇಳಿಲ್ಲ, ನನಗೆ ಗೊತ್ತಿದ್ದಮಟ್ಟಿಗೆ ನಿನ್ನೆ ಪತ್ರಿಕೆಯಲ್ಲಿ ಈವೊತ್ತಿನ ಪತ್ರಿಕೆಯಲ್ಲಿ ಬಂದಿಲ್ಲ. ಇದರ ಜೊತೆಗೆ ಆ ಅಧಿಕಾರಿ ಸ್ವಭಾವ ಏನು ಇದೆ ಎಂದರೆ ಆವೊತ್ತಿನ ಪತ್ರಿಕೆಯಲ್ಲಿ ಅವರು ಹಿಂದೆ ಒಬ್ಬ ಸದಸ್ಯರಾಗಿದ್ದಾಗ ಮಂಚಗಯ್ಯ ಅವರ ಬಗ್ಗೆ ಮಾತನಾಡಿದ್ದನ್ನು ನೋಡಿದರೆ ಅವರ ಸ್ವಭಾವ ಏನು ಎನ್ನುವುದು ಗೊತ್ತಾಗುತ್ತದೆ. ಜಲಮಂಡಲಿಯಲ್ಲಿ ಕೆಲಸ ಮಾಡಿರತಕ್ಕ ಸದಸ್ಯ, ಅಲ್ಲಿಯ ಕೆಲಸದ ಬಗ್ಗೆ ಒಂದು ಹೇಳಿಕೆಯನ್ನು ಕೊಟ್ಟಿದ್ದರ ಪ್ರತಿಕ್ರಿಯೆ ಮಂಚಿಗಯ್ಯನವರು ಕನಿಷ್ಠ ಅರ್ಹತೆಯ ವ್ಯಕ್ತಿ, ಈಗ ಅವರು ಬಾಯಿಮುಚ್ಚಿಕೊಂಡಿದ್ದು ಬೆಂಗಳೂರಿನ ನಾಗರಿಕರು ಅತ್ಯಂತ ಶೀಘ್ರವಾಗಿ ನೀರನ್ನು ಪಡೆಯಲು ಅವಕಾಶ ಮಾಡಿಕೊಡಬೇಕಾದ ಕಾಲ ಬಂದಿದೆ ಎಂದು ಹೇಳಿದ್ದಾರೆ. ಬಹುಶಃ ನಮ್ಮ ರಾಜ್ಯಾಂಗದ ಪರಿಮಿತಿಯಲ್ಲಿ ಫ್ರೀಡಂ ಆಫ್ ಸ್ಪೀಚ್‌ಗೆ ಅವಕಾಶವಿದ್ದರೂ, ಇವರು ಬಾಯಿ ಮುಚ್ಚಿಸುವುದಕ್ಕೆ ಹೊರಟಿದ್ದಾರೆ. ಇವರ ಧಾಟಿ, ಇವರ ನಡವಳಿಕೆ ಏನು ಎನ್ನುವುದು ಇದರಿಂದ ವ್ಯಕ್ತವಾಗುತ್ತದೆ. ಇದನ್ನು ಪತ್ರಿಕೆಯವರು ಉತ್ಪ್ರೇಕ್ಷೆ ಮಾಡಿ ಬರೆದಿದ್ದಾರೆ ಎಂದು ಹೇಳುವುದಿಲ್ಲ. ಅವರು ಏನು ಹೇಳಿಕೆ ತಯಾರು ಮಾಡಿ ಕೊಟ್ಟಿದ್ದಾರೆ, ಅದರ ಕಾಪಿ ನನ್ನ ಹತ್ತಿರ ಇದೆ. ಇದರಿಂದ ಅವರ ನಡತೆ ಹೇಗಿದೆ, ಅವರ ಮನೋಭಾವ ಹೇಗಿದೆ ಎನ್ನುವುದು ವ್ಯಕ್ತವಾಗುತ್ತದೆ. ಮೊನ್ನೆ ಅವರು ಹೇಳಿರುವುದು ಸತ್ಯಾಂಶ ಎನ್ನುವುದಕ್ಕೆ ಈ ಒಂದು ಹೇಳಿಕೆಯನ್ನು ಅವಲೋಕಿಸಿದರೆ ಅವರ ಮಾತಿನ ಧಾಟಿ, ಹೇಳತಕ್ಕ ರೀತಿ ಇವುಗಳನ್ನು ನೋಡಿದರೆ ಗೊತ್ತಾಗುತ್ತದೆ.

1-30 P.M.

ಡೆಕ್ಕನ್ ಹೆರಾಲ್ಡ್, ಪ್ರಜಾವಾಣಿ, ಇಂಡಿಯನ್ ಎಕ್ಸ್‌ಪ್ರೆಸ್ ಈ ಪತ್ರಿಕೆಗಳು ಯೆಲ್ಲೋ ಜರ್ನಲ್ಸ್ ಅಲ್ಲ. ಆ ಪತ್ರಿಕೆಯಲ್ಲಿ ವರದಿಯಾಗಿರುವುದು ಸರಿಯಿಲ್ಲ ಎಂದು ಕಾಂಟ್ರಡಿಕ್ಟ್ ಮಾಡಬಹುದಾಗಿತ್ತು. ತಮ್ಮಿಂದ ತಿಳಿದಮೇಲೆ ಇದರಿಂದ ತೊಂದರೆಯಾಗುತ್ತದೆ ಎನ್ನುವ ದೃಷ್ಟಿಯಿಂದ ಡಿನೈ ಮಾಡಿರಬಹುದು. ಅದನ್ನು ಇಷ್ಟು ಲಘುವಾಗಿ ತೆಗೆದುಕೊಳ್ಳುವುದು ಕಷ್ಟವಾಗುತ್ತದೆ. ಏಕೆಂದರೆ ಈಗಾಗಲೇ ತಾವು ನಿರ್ಣಯ ಕೊಟ್ಟಿದ್ದೀರಿ, ಅದರ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಅವರ ಸ್ವಭಾವ ಏನು ಎನ್ನುವುದು ಗೊತ್ತಾಗುತ್ತದೆ. ದಯಮಾಡಿ ರೂಲಿಂಗ್ ಬಗ್ಗೆ ಪುನರ್ಪರಿಶೀಲನೆ ಮಾಡುವುದು ಸೂಕ್ತವೆಂದು ಮನವಿ ಮಾಡುತ್ತಿದ್ದೇನೆ.

ಶ್ರೀ ಎಂ. ಎಸ್. ಕೃಷ್ಣನ್.—ನಾನು ತಮ್ಮ ರೂಲಿಂಗನ್ನು ಪ್ರಶ್ನೆ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ತಾವು ತಪ್ಪು ತಿಳಿಯಬಾರದೆಂದು ವಿನಯಪೂರ್ವಕವಾಗಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಮೊನ್ನೆ ದಿವಸ ನಾವು ಈ ಪ್ರಶ್ನೆಯನ್ನು ಎತ್ತಿದಾಗ ಮಾನ್ಯ ಚನ್ನಬಸಪ್ಪನವರು ಅದರ ಬಗ್ಗೆ ವಿಚಾರಣೆ ನಡೆಸಿ ಎಲ್ಲ ವಿಷಯಗಳನ್ನೂ ತಿಳಿಸುವುದಾಗಿ ಹೇಳಿದ್ದರು.

ಅಧ್ಯಕ್ಷರು.—ನಮ್ಮ ಆಫೀಸಿನಿಂದ ಏನೂ ಬರೆಯಬಾರದಾಗಿತ್ತೇ!

ಶ್ರೀ ಎಂ. ಎಸ್. ಕೃಷ್ಣನ್.—ತಮ್ಮ ಆಫೀಸಿನಿಂದ ಹೋಗುವುದಕ್ಕೆ ಅಧಿಕಾರವಿದೆ, ಹೋಗಬೇಕು. ಈ ವಿಚಾರದಲ್ಲಿ ಮಾನ್ಯ ಮಂತ್ರಿಗಳು ಏನು ಹೇಳುತ್ತಾರೆ ಎನ್ನುವುದನ್ನು ಕೇಳುವುದಕ್ಕೆ ನಾವು ಬಹಳ ಕಾತುರರಾಗಿದ್ದೇವೆ.

ಅಧ್ಯಕ್ಷರು.—ಆ ಹೊತ್ತು ಏನಾಯಿತು ಎಂದು ಸ್ವಲ್ಪ ಜ್ಞಾಪಿಸಿಕೊಳ್ಳಿ. ಸಭೆಯಲ್ಲಿ ವಿಷಯವನ್ನು ತೆಗೆದುಕೊಂಡು ಬಂದಾಗ ನೋಟೀಸ್ ಕೊಟ್ಟಿರಲಿಲ್ಲ. ಕಂಟೆಂಪ್ಟ್ ಎಂದು ತೆಗೆದುಕೊಂಡು ಬಂದಿರಿ. ಅದು ಹೌದೇ ಅಲ್ಲವೇ ಎಂದು ಕೇಳಬೇಕಾದ್ದು, ನಿಜಾಂಶವೇನು ಎಂದು ತಿಳಿದುಕೊಳ್ಳಬೇಕಾದ್ದು ನನ್ನ ಕರ್ತವ್ಯ. ನೋಟೀಸ್ ಕೊಡದೇ ಇದ್ದರೂ ಒಬ್ಬರಾದ ಮೇಲೆ ಒಬ್ಬರು ಮಾತನಾಡುತ್ತ ಬಂದಿರಿ.

ಶ್ರೀ ಎಂ. ಎಸ್. ಕೃಷ್ಣನ್.—ನಾನು ತಮ್ಮ ರೂಲಿಂಗ್ ಪ್ರಶ್ನೆ ಮಾಡಲಿಲ್ಲ; ತಾವು ತೆಗೆದುಕೊಂಡಿರುವ ಕ್ರಮದ ಬಗ್ಗೆಯೂ ಪ್ರಶ್ನೆ ಮಾಡಲಿಲ್ಲ. ಮಾನ್ಯ ಚನ್ನಬಸಪ್ಪನವರು ಸಭೆಗೆ ವಿಷಯಗಳು ಗೊತ್ತಾಗುವ ದೃಷ್ಟಿಯಿಂದ ಏನು ಹೇಳುತ್ತಾರೆಂಬುದನ್ನು ಕೇಳಬೇಕು ಎನ್ನುವ ವಿಚಾರದಲ್ಲಿ ಕಾತುರರಾಗಿದ್ದೇವೆ. ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್‌ನಲ್ಲಿ ಶ್ರೀ ಮಗ್ದುಂ ಅವರು ಭಾಷಣ ಮಾಡಿದ್ದಾರೆ. ಇನ್‌ಸ್ಟಿಟ್ಯೂಷನ್ನಿನ ಕಾರ್ಯದರ್ಶಿಗಳು ಸರ್ಕಾರದ ಡೆಪ್ಯುಟಿ ಸೆಕ್ರೆಟರಿಗಳಾದ ಮುರಾರಪ್ಪನವರು. ಅವರೂ ಆ ದಿನ ಅಲ್ಲಿದ್ದರು ಎಂದು ಗೊತ್ತಾಗಿದೆ. ಅಲ್ಲದೆ ಬೇರೆ ಪತ್ರಿಕಾ ಪ್ರತಿನಿಧಿಗಳೂ ಇದ್ದರು. ಆದ್ದರಿಂದ ಮಾನ್ಯ ಮಂತ್ರಿಗಳು ಏನು ಹೇಳುತ್ತಾರೆ ಎನ್ನುವುದರ ಬಗ್ಗೆ ನಾವು ಕಾತುರರಾಗಿದ್ದೇವೆ.

ಅಧ್ಯಕ್ಷರು.—ನಮ್ಮ ಆಫೀಸಿನಿಂದ ಹೋಗಿರುವ ಕಾಗದಕ್ಕೆ ಉತ್ತರವಾಗಿ ಚೀಫ್ ಸೆಕ್ರೆಟರಿಯವರಿಗೆ ಕಾಗದ ಬರೆದು ಅದರ ಕಾಪಿಯನ್ನು ನಮಗೆ ಕಳುಹಿಸಿದ್ದಾರೆ.

ಶ್ರೀ ಎಚ್. ಡಿ. ದೇವೇಗೌಡ.—ನಾಳೆ ಈ ಸಭೆಯ ಕಾರ್ಯಕಲಾಪದ ಬಗ್ಗೆ ಯಾರು ಏನು ಬೇಕಾದರೂ ಮಾತನಾಡಿ ಪತ್ರಿಕೆಗಳಲ್ಲಿ ಹೇಳಿಕೆಯನ್ನು ಕೊಡಬಹುದು. ಅದಾದಮೇಲೆ ತಮ್ಮಿಂದ ಹಕ್ಕುಬಾಧ್ಯತೆಯ ಸೂಚನೆಯ ಬಗ್ಗೆ ಪತ್ರ ಹೋಗಿ ಈ ರೀತಿ ಪತ್ರಿಕೆಗಳಲ್ಲಿ ಹೇಳಿಕೆ ಬಂದಿದೆಯಲ್ಲವೇ ಎಂದು ಕೇಳಿದರೆ ಅವರು ಇಲ್ಲ ಎಂದು ಹೇಳಬಹುದು; ಸುಲಭವಾಗಿ ಡಿನೈ ಮಾಡಬಹುದು. ಅವರು ಹೇಳುವುದರ ಆಧಾರದ ಮೇಲೆ ಸಭೆಯಲ್ಲಿ ಆ ವಿಷಯವನ್ನು ಕೊನೆಗಾಣಿಸಬಹುದು. ಇದು ಬಹಳ ಸಲಭವಾಗುತ್ತದೆ. ಇನ್ನು ಮುಂದೆ ಈ ಸಭೆಯಲ್ಲಿ ಯಾವುದೇ ಕಾರ್ಯಕಲಾಪದ ಬಗ್ಗೆ, ಸಭೆಯ ಕಾರ್ಯಕಲಾಪವನ್ನು ಹೀಯಾಳಿಸಿ, ಸಭೆಯ ಗೌರವಕ್ಕೆ ಧಕ್ಕೆ ತರತಕ್ಕ ರೀತಿಯಲ್ಲಿ ಯಾರಾದರೂ ಮಾತನಾಡಿದರೆ ಆ ನಂತರ ಅವರು ಹಾಗೆ ಹೇಳಲಿಲ್ಲವೆಂದು ಹೇಳಿದುದನ್ನು ಇಷ್ಟು ಸುಲಭವಾಗಿ ಒಪ್ಪಿಕೊಂಡರೆ ಬಹಳ ಕಷ್ಟವಾಗುತ್ತದೆ. ದಯಮಾಡಿ ತಮ್ಮ ರೂಲಿಂಗನ್ನು ಪುನರ್ಪರಿಶೀಲಿಸಬೇಕು ಎಂದು ಹೇಳುತ್ತೇನೆ.

Sri D. DEVARAJ URS (Chief Minister).—When the Ruling is given and when the Leader of the Opposition as well as other hon. members of this House say that it is not their intention to question, it is alright. The dignitary of the House, namely, the Speaker is the authority to safeguard what is called the dignity of the House. This is provided in the Constitution and also in the Rules of Procedure. So, I would appeal that when once a ruling is given, we shall not make reference of it in any manner directly or indirectly reflecting on the capacity of the Hon. Speaker.

Sri M. S. KRISHNAN.—I am very sorry. The Hon. Chief Minister is straight way saying something. It is a sort of insinuation.

Sri D. DEVARAJ URS.—I am here to safeguard the interest of the House and also if any insinuation is made against the Hon. Speaker it is our duty to safeguard...

Sri H. D. DEVE GOWDA.—It is the duty of everybody here to safeguard the interest of the House and also to safeguard the office of the Speaker.

Sri D. DEVARAJ URS.—I appeal to the House that we shall not make reference of the ruling of the Hon. Speaker and in case if it is done, it would amount to questioning the capacity of the Hon. Speaker. In that case it is our duty to uphold and safeguard the dignity as well as the privilege of either the House or the Hon. Members of this House.

ಶ್ರೀ ಎಂ. ಎಸ್. ಕೃಷ್ಣನ್.—ಹಿತ್ತಲ ಬಾಗಿಲಿನಿಂದ ತಮ್ಮ ರೂಲಿಂಗನ್ನು ಪ್ರಶ್ನೆ ಮಾಡಬೇಕು ಎನ್ನುವ ಅಭಿಪ್ರಾಯವೂ ನಮಗೆ ಇರಲಿಲ್ಲ, ಅಂಥ ಅಭಿಪ್ರಾಯ ಇಲ್ಲವೂ ಇಲ್ಲ. ಇನ್‌ಸಿನ್ಯುಯೇಷನ್ ಮಾಡುತ್ತಿದ್ದೇವೆಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿರುವುದರಲ್ಲಿ ತಿರುಳಿಲ್ಲ ಎಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಮಾನ್ಯ ಚನ್ನಬಸಪ್ಪನವರು ಸಂಬಂಧಪಟ್ಟ ಮಂತ್ರಿಗಳಾಗಿರುವುದರಿಂದ ಇದರ ಬಗ್ಗೆ ಏನಾದರೂ ಹೇಳುತ್ತಾರೆಯೇ ಎಂದು ಕೇಳಿದೆ. ಸರ್ಕಾರದ ಡೆಪ್ಯುಟಿ ಸೆಕ್ರೆಟರಿಯವರು ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಂಸ್ಥೆಯ ಕಾರ್ಯದರ್ಶಿಯಾಗಿದ್ದಾರೆ. ಅವರನ್ನೇನಾದರೂ ವಿಚಾರಿಸಿದಿರಾ? ಅಲ್ಲಿ ಬೇರೆ ಪತ್ರಿಕೋದ್ಯಮಿಗಳಿದ್ದರು. ಅವರನ್ನು ಏನಾದರು ವಿಚಾರಿಸಿದಿರಾ? ನನಗೆ ತಿಳಿದಮಟ್ಟಿಗೆ ಮತ್ತು ಶ್ರೀಮಾನ್ ದೇವೇಗೌಡರಿಗೆ ತಿಳಿದಮಟ್ಟಿಗೆ ಅವರು ಏನು ಹೇಳಿದರು ಎಂಬ ಬಗ್ಗೆ ಒಂದು ಕಾಪಿ ಸಹ ನಮ್ಮ ಹತ್ತಿರ ಇದೆ. That officer threatened Mr. Manchagiah. When he says 'shut up', and hurls threats at the House and Members, it amounts to maligning. I do not know why the Government is anxious to shield him.

Sri D. DEVARAJ URS.—I do not know why the hon. Member is so much against the officer.

Sri M. S. KRISHNAN.—I am against an officer who is corrupt and bureaucratic. You are shielding him.

Sri D. DEVARAJ URS.—If you have the capacity to prove that he is corrupt, even now, you can prove it. An hon. Member, should not, in my opinion, talk anything and everything he likes without giving evidence.

Sri M. S. KRISHNAN.—Suspend that person and conduct an enquiry. We are not such irresponsible people.

Sri D. DEVARAJ URS.—Now only the hon. Member is making the statement. If there is evidence, I am prepared to get it verified. The hon. Member is saying 'corrupt' every time. I am afraid that is not the way.

Sri M. S. KRISHNAN.—The hon. Chief Minister cannot go on talking in this fashion, just because he is the Chief Minister.

Sri D. DEVARAJ URS.—I am here to say what I have got to say; when a charge has been made against an officer.

Sri M. S. KRISHNAN.—I request the Chair to protect the rights of the Members. I am not prepared to yield. I am really very sorry that the Hon. Chief Minister should have got so much annoyed.

Sri D. DEVARAJ URS.—The hon. Member is saying something which he cannot substantiate.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಮುಖ್ಯಮಂತ್ರಿಗಳ ವರ್ತನೆ ತೀರ ಅತಿರೇಕವಾಯಿತು.

* * * *

ಅಧ್ಯಕ್ಷರು.—ರೆಕಾರ್ಡ್ ಮಾಡಬೇಡಿ.

* * * *

ಈಗ ಶ್ರೀ ನಂಜೇಗೌಡರು ಏನು ಹೇಳುವುದು ಇದೆ ಅದನ್ನು ಜಾಗ್ರತೆ ಹೇಳಬಹುದು.

SRI H. N. NANJE GOWDA.—Madam Speaker, I rise on a Point of Order. I wish to draw the attention of the House to Rule 289 of the Rules of Procedure which says: "No allegation of a defamatory or incriminatory nature shall be made by a member against any person unless the member has given previous intimation to the Speaker and also to the Minister concerned so that the Minister may be able to make an investigation into the matter for the purpose of reply."

ಈ ರೂಲ್ ಪ್ರಕಾರ ಮಾನ್ಯ ಕೃಷ್ಣನ್ ಅವರು ಮತ್ತು ಇತರೇ ಮಾನ್ಯ ಸದಸ್ಯರುಗಳು ಈಗ ಯಾವ ಅಧಿಕಾರಿಯ ಮೇಲೆ ಅಪಾದನೆ ಮಾಡುತ್ತಿದ್ದಾರೆ, ಅದರ ಬಗ್ಗೆ ನೋಟೀಸ್‌ನ್ನು ತಮಗೆ ಮುಂಚಿತ ವಾಗಿ ಕೊಟ್ಟಿಲ್ಲ. ಮತ್ತು ಅದರ ಒಂದು ಕಾಪಿ ಸರ್ಕಾರಕ್ಕೆ ಕೂಡ ತಲುಪಿಲ್ಲ. ಸುಮ್ಮನೆ ಇಲ್ಲಿಗೆ ಬಂದು ನೇರವಾಗಿ ಇದ್ದಕ್ಕಿದ್ದಂತೆ ಒಬ್ಬ ಅಧಿಕಾರಿ ಮೇಲೆ ಅಪಾದನೆ ಮಾಡುವುದು ಸಭೆಯ ನಡೆವಳಿ ಕೆಗೆ ಅನುಗುಣವಾಗಿರುವುದಿಲ್ಲವೆಂದು ನನ್ನ ಕ್ರಿಯಾಲೋಪವಾಗಿದೆ. ಆ ರೀತಿ ಮಾನ್ಯ ಸದಸ್ಯರು ಏನಾದರೂ ಒಬ್ಬ ಅಧಿಕಾರಿ ಮೇಲೆ ಹೇಳುವುದಿದ್ದರೆ ಅದರ ಬಗ್ಗೆ ಮೊದಲು ತಮಗೆ ನೋಟೀಸ್ ಕೊಡಬೇಕು. ನಂತರ ತಾವು ಅದರ ಒಂದು ಕಾಪಿಯನ್ನು ಸರ್ಕಾರಕ್ಕೆ ಕಳುಹಿಸಿಕೊಟ್ಟು ಅದರ ಬಗ್ಗೆ ಸರ್ಕಾರದವರು ಏನಾದರು ಹೇಳುವುದಕ್ಕೆ ರಕ್ಷಣೆ ಕೊಡುತ್ತೀರಾ ಎಂದು ನಾನು ನಂಬಿದ್ದೇನೆ.

* * * *

MADAM SPEAKER.—I have understood it. please sit down.

* * * *

ಶ್ರೀ ಡಿ. ದೇವರಾಜ್ ಅರಸ್.—ಮಾನ್ಯ ಸದಸ್ಯರು ಏನು ಹೇಳಿದ್ದಾರೆ, ಯಾವುದರ ಬಗ್ಗೆ ಕ್ರಿಯಾಲೋಪ ಎತ್ತಿದ್ದಾರೆ, ಅದರ ಮೇಲೆ ತಮ್ಮ ರೂಲಿಂಗ್ ಕೊಡಬೇಕು. ಅದು ಪ್ರೂವ್ ಆಗ ಬೇಕು ಇಲ್ಲದೆ ಇದ್ದರೆ ಅದನ್ನು ಹಾಗೆ ಇಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಪ್ರೂವ್ ಆಗಬೇಕು ಎಂದು ಹೇಳುತ್ತಿದ್ದಾರೆ. ನೀವು ಕಮಿಟಿ ಮಾಡಿ, ಅವರನ್ನು ಕರೆಸಿ ಪ್ರೂವ್ ಮಾಡೋಣ. ಪ್ರೂವ್ ಮಾಡುವ ಕಡೆ ಮಾಡೋಣ.

SRI D. DEVARAJ URS.—I am only asking for a ruling.

ಶ್ರೀ ಎಂ. ಎಸ್. ಕೃಷ್ಣನ್.—ನಾನು ಕೆಲವು ಗುರುತರವಾದ ಆರೋಪಣೆಗಳನ್ನು ಮಾಡಿದ್ದು ಉಂಟು. ಅವರು ವಿಚಾರಣೆ ನಡೆಸಲಿ, ಮೊನ್ನೆ ದಿವಸ ಏನು ಚರ್ಚೆ ಮಾಡಿದ್ದೇವೆ ಅದಕ್ಕೆ ಶ್ರೀಮಾನ್ ಚನ್ನಬಸಪ್ಪನವರು ಏನಾದರೂ ಹೇಳುವುದು ಇದೆಯೇ ?

ಅಧ್ಯಕ್ಷರು.—ಈ ಚಾಪ್ಟರ್ ಮುಗಿದು ಹೋಯಿತು. ಮತ್ತೆ ಅದನ್ನೇ ಎತ್ತಿದರೇ ಹೇಗೆ ?

ಶ್ರೀ ಎಂ. ಎಸ್. ಕೃಷ್ಣನ್.—ಕೆಲವು ವಿಷಯಗಳನ್ನು ತಮ್ಮ ಗಮನಕ್ಕೆ ತಂದಿದ್ದೇನೆ. ತಾವು ರೂಲಿಂಗ್ ಕೊಟ್ಟಿರಿ. ಅದನ್ನು ಪುನರ್ ಪರಿಶೀಲನೆ ಮಾಡುವುದಕ್ಕೆ ತಮಗೆ ಅಧಿಕಾರವಿದೆ.

MADAM SPEAKER.—I have finished with it. I am not at all interested in the ruling.

ಶ್ರೀ ಎಂ. ಎಸ್. ಕೃಷ್ಣನ್.—ಪುನಃ ಪರಿಶೀಲನೆ ಮಾಡದೆ ಇದ್ದರೆ ನಾಳೆ ನಮಗೆ ಅವಕಾಶ ಕೊಡಬೇಕು. ಇವತ್ತು ಶ್ರೀಮಾನ್ ಚನ್ನಬಸಪ್ಪನವರು ಈ ವಿಷಯದಲ್ಲಿ ಇನ್ನು ಏನು ಹೇಳು ತ್ತಾರೋ ನನಗೆ ಗೊತ್ತಿಲ್ಲ. ಅವರು ಏತಕ್ಕೆ ಹೇಳುವುದಿಲ್ಲವೋ ಗೊತ್ತಿಲ್ಲ.

*** Matter expuned as ordered by the Chair.

ಅಧ್ಯಕ್ಷರು.—ಅವರನ್ನು ಬಲವಂತ ಮಾಡುವುದಕ್ಕೆ ನನಗೆ ಇಷ್ಟವಿಲ್ಲ. ಅವರು ಹೇಳಿದರೆ ನನ್ನ ಅಭ್ಯಂತರವಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ತಾವು ಚನ್ನಬಸಪ್ಪನವರನ್ನು ಏತಕ್ಕೆ ಶೀಲ್ಡ್ ಮಾಡುತ್ತಿರೋ ಗೊತ್ತಿಲ್ಲ.

Sri H. M. CHANNABASAPPA (Minister for Public Works).—Madam Speaker, I am sorry that my name is being brought about a number of times. I did make a promise that I would make a statement on behalf of the Government after considering all aspects of the question and in fact I am ready with the statement.

Sri C. M. ARUMUGAM.—We welcome it.

Sri H. M. CHANNABASAPPA.—In the mean time, the question of privilege was the point at issue and the ruling has been given by the Hon'ble Speaker and my statement is not contrary to the ruling given by the Speaker. Therefore I do not traverse that area.

The other points made out by the hon. Members on the other side is about Governmental action in regard to the statement made. I will therefore only read that portion which pertains to Governmental action.

In regard to the other aspects namely to what extent the statement attracts the provisions of the Mysore Civil Service Conduct Rules 1968, Government will examine them on merits separately.

Sri C. M. ARUMUGAM.—Madam Speaker, the Members of the House are there to abide by the Ruling of the Speaker. We are not questioning the ruling. We only want to submit to you about the letter. I was told I have this information that on the day of meeting they have also recorded his speech. His speech was recorded. That is one thing. Secondly, if he says that he has not said it, I only submit to you to send for the concerned Press people and ask them how they have reported. Why I am submitting this is, there was a reference like this in a paper about a parliamentary speech. A certain word was mentioned about the Member and for that they wrote to the paper. The Editor of the paper was summoned and he was questioned whether this was correct or not. He said yes. Therefore, now two things arise. As Mr. Deve Gowda said, DECCAN HERALD which has a circulation of more than 80,000 in the State, if they publish words which are not mentioned, naturally the Speaker can call for the editor of the paper and ask him. Any way we leave it to the Speaker. We are there only to submit.

2-00 P.M.

Sri S. BANGARAPPA.—That point is not there. You send for the records or the tape record must be summoned.

MADAM SPEAKER.—I have already given a ruling. It is closed. Why does the hon. Member take up the subject again?...... He is again committing the same mistake......It is closed. Let us go to the next subject.

Sri H. M. CHANNABASAPPA.—When Government has stated that it will be examined on merits, I think that should satisfy the hon. Member. What are all the things to be done is a matter of procedure; it is left to the Government. He must trust the Government to that extent.

ಶ್ರೀ ಎಚ್. ಡಿ. ದೇವೇಗೌಡ.—ಅಧಿಕಾರಿಗಳ ಬಗ್ಗೆ ನಾವು ಮಾತನಾಡಬೇಕಾದರೆ ನಾವು ಬರವಣಿಗೆಯಲ್ಲಿ ಕೊಡಬೇಕು ?

ಶ್ರೀ ದೇವರಾಜ ಅರಸ್.—ನಾನು ಬರವಣಿಗೆಯಲ್ಲಿ ಕೊಡಬೇಕು ಎಂದು ಹೇಳಲಿಲ್ಲ.

Sri C. M. ARUMUGAM.—We will not give it in writing.

ಶ್ರೀ ಎಚ್. ಡಿ. ದೇವೇಗೌಡ.—ಈ ಸಭೆಯಲ್ಲಿ ಅಧಿಕಾರಿಗಳ ಬಗ್ಗೆ ಮಾತನಾಡಬೇಕಾದರೆ ನಾವು ಅಪಾದನೆ ಮಾಡಬೇಕಾದರೆ ಬರವಣಿಗೆಯಲ್ಲಿ ಕೊಡಬೇಕು ಎಂದು ಮುಖ್ಯಮಂತ್ರಿಗಳು ಪದೇ ಪದೇ ಎಚ್ಚರಿಕೆ ಕೊಡುತ್ತಿದ್ದಾರೆ. Does the Chief Minister expect me to give it in writing? We know the way in which business is conducted in this House. In all these matters we know the convention and to what extent our speech should be limited. Or please let us know how we should transact business in this House.

ಶ್ರೀ ಡಿ. ದೇವರಾಜ ಅರಸ್.—ನಾನು ಬರವಣಿಗೆಯಲ್ಲಿ ಕೊಡಬೇಕೆಂದು ಹೇಳುತ್ತಾ ಇಲ್ಲ. ರೂಲ್ ಆರೀತಿ ಹೇಳುತ್ತದೆ ಎಂದು ಹೇಳಿದೆ.

ಶ್ರೀ ಎಚ್. ಡಿ. ದೇವೇಗೌಡ.—ಈಗ ನಾವು ಈ ಸಭೆಯಲ್ಲಿ ಚರ್ಚೆ ಮಾಡತಕ್ಕ ಇತಿಮಿತಿಯ ಬಗ್ಗೆ ತಾವು ರೂಲಿಂಗ್ ಕೊಡಬೇಕು. ಇವೊತ್ತು ಲೇಬರ್ ಡಿಪಾರ್ಟ್‌ಮೆಂಟ್ ಬಗ್ಗೆ ಚರ್ಚೆ ಮಾಡುವಾಗ, ಈ ಯಾರೋ ಒಬ್ಬ ಆಫೀಸರ್ ಟಿ. ಬಿ. ಯಲ್ಲಿ ಹೆಂಡ ಕುಡಿದ ಎಂದು ಹೇಳಿದರೆ will the Chief Minister expect me to give it in writing? We know the way in which the business is conducted in this House all these years. We know the conventions regarding the extent to which our speech should be limited. Please let us know how we should transact in this House. ಇವೊತ್ತು ಯಾವುದೇ ಅಧಿಕಾರಿಮೇಲೆ ಅಪಾದನೆ ಮಾಡುವುದಕ್ಕೆ ನಮಗೆ ಹಕ್ಕು ಇಲ್ಲ, ಹಾಗೆ ಮಾಡಬೇಕಾದರೆ ಬರವಣಿಗೆಯಲ್ಲಿ ಕೊಡಬೇಕು ಎಂದರೆ ಯಾರಿಗೆ ಬರವಣಿಗೆಯಲ್ಲಿ ಕೊಡಬೇಕು? ನಿಮ್ಮ ಕೈಯಲ್ಲಿ ಕೊಟ್ಟರೆ, ವಿಚಾರಣೆ ಎಷ್ಟರಮಟ್ಟಿಗೆ ನಿಷ್ಪಕ್ಷಪಾತದಿಂದ ಆಗುತ್ತದೆ ಎಂದು ಆಲೋಚನೆ ಮಾಡಬೇಕಾಗುತ್ತದೆ. ಸದಸ್ಯರು ಈ ಸಭೆಯಲ್ಲಿ ಚರ್ಚೆ ಮಾಡತಕ್ಕ ಕಾಲದಲ್ಲಿ ಯಾವ ರೀತಿ ಚರ್ಚೆ ಮಾಡಬೇಕು, ಮಂತ್ರಿಗಳನ್ನು ಆರೋಪಣೆ ಮಾಡಬೇಕೇ ಅಥವಾ ಆಡಳಿತದಲ್ಲಿ ಇರತಕ್ಕ ಅಧಿಕಾರಿಗಳು ತಪ್ಪಾಗಿ ನಡೆದರೆ, ಅವರನ್ನು ಆರೋಪಣೆ ಮಾಡಬೇಕೇ? ನಿಮ್ಮ ಇಲಾಖೆಯಲ್ಲಿ 28 ಜನ ಆಫೀಸರ್ಸ್ ಇರುತ್ತಾರೆ, ಇಂಥ ಆಫೀಸರ್ಸ್ ಡೆಪ್ಯುಟಿ ಕಮಿಷನರ್ ಅಥವಾ ಡೆಪ್ಯುಟಿ ಡೈರೆಕ್ಟರ್ ಎಂದು ಏನಾದರೂ ಹೇಳುವುದಕ್ಕೆ ಅವಕಾಶವಿಲ್ಲ ಎಂದರೆ, ಒಬ್ಬ ವ್ಯಕ್ತಿಯ ಹೆಸರು ಹೇಳುವುದು ಸಾಧುವಾದುದು ಅಲ್ಲ ಎಂದರೆ ನಮ್ಮ ಇತಿಮಿತಿ ಏನು ಎನ್ನುವ ಬಗ್ಗೆ ತಾವು ರೂಲಿಂಗ್ ಕೊಡಬೇಕಾಗುತ್ತದೆ. ನಿಮ್ಮ ಪಕ್ಷದ ಸದಸ್ಯರು ಮಾತನಾಡತಕ್ಕ ಕಾಲದಲ್ಲಿ ಹಿಂದಿನ ಮಾಜಿ ಮುಖ್ಯಮಂತ್ರಿಗಳ ಹೆಸರು ಹಿಡಿದು ಎರಡು ಲಕ್ಷ ರೂಪಾಯಿಗಳ ಮನೆ ಕಟ್ಟಿದ್ದಾರೆ ಎಂದು ಹೇಳಿದರು. ಅವರು ಈ ಸಭೆಯ ಸದಸ್ಯರು ಆಗಿಲ್ಲ. ಒಂದು ಪಾರ್ಟಿಗೆ ಸಂಬಂಧಪಟ್ಟ ಲೀಡರ್ ಮೇಲೆ ಅಪಾದನೆ ಮಾಡುವಾಗ, ಡಿಫೆಂಡ್ ಮಾಡುವುದಕ್ಕೆ ಹೊರಟರು ಎನ್ನುವ ಭಾವನೆ ಬರಬಹುದು ಎಂದು ಸುಮ್ಮನೆ ಇದ್ದೆ. ಒಬ್ಬ ಸದಸ್ಯರು ಈ ಮನೆಯಲ್ಲಿ ಇಲ್ಲ, ಅವರ ಹೆಸರು ಹಿಡಿದು ಎರಡು ಲಕ್ಷ ರೂಪಾಯಿ ಮಾಡಿದ್ದಾರೆ, ಮೂರು ಲಕ್ಷ ರೂಪಾಯಿ ಬೆಲೆಬಾಳುವ ಮನೆ ಮಾಡಿದ್ದಾರೆ ಎಂದು ಹೇಳುವಾಗ ಅದು ತಪ್ಪು ಎಂದು ಸ್ಪೀಕರ್ ರೂಲಿಂಗ್ ಕೊಡಲಿಲ್ಲ, ಅದು ಎಕ್ಸ್‌ಪಂಜ್ ಮಾಡಬೇಕೆಂದು ಹೇಳಲಿಲ್ಲ. ಇದು ಒನ್ ವೇ ಟ್ರಾಫಿಕ್ ಆಗಬಾರದು. ಹಿಂದೆ ಶ್ರೀಮಾನ್ ನಂಜೇಗೌಡರು ಮನಸ್ಸಿನ ಆವೇಗದಲ್ಲಿ ಈ ಸಭೆಯಲ್ಲಿ ವಾಟರ್‌ಬೋರ್ಡ್ ಚೇರ್‌ಮನ್ ಮೇಲೆ ಅಪಾದನೆ ಮಾಡಬೇಕಾದಷ್ಟು ಹೇಳಿದ್ದಾರೆ. ಪ್ರೊಸೀಡಿಂಗ್ಸ್ ತಿರುವಿಹಾಕಿ ನೋಡಿ ಗೊತ್ತಾಗುತ್ತದೆ. ಆವೊತ್ತು ರೂಲ್ 289 ಅಬ್‌ಸರ್ವ್ ಮಾಡಿದ್ದಾರೆ? ಅವರು ಕರಪ್ಟ್ ಎಂದು ಹೇಳಿದ್ದಾರೆ. ಶ್ರೀ ಎನ್.ಡಿ.ಎಂ. ಅಪ್ಪ ಅವರು ಅನ್‌ಸ್ಕ್ರೂಪಲ್‌ಸ್ ಆಫೀಸರ್ ಎಂದು ಹೇಳಿದ್ದಾರೆ. ಇತಿಮಿತಿ ಎಷ್ಟರಮಟ್ಟಿಗೆ ಇರ

(ಶ್ರೀ ಎಚ್. ಡಿ. ದೇವೇಗೌಡ)

ಬೇಕೆಂದು ದಯಮಾಡಿ ಹೇಳಿ. ಆ ರೀತಿ ಕನ್‌ವೆನ್‌ಷನ್ ನಡೆದುಕೊಂಡು ಬಂದಿದೆ. ನಿಯಮಾವಳಿ ಏನು ಇದೆ ಅದನ್ನು ದಯವಿಟ್ಟು ಆಲೋಚನೆ ಮಾಡಿ ತಮ್ಮ ಕನ್ಸಿಡರ್ಡ್ ರೂಲಿಂಗ್ ಕೊಡಬೇಕು ಎಂದು ಪ್ರಾರ್ಥನೆ ಮಾಡುತ್ತೇನೆ.

† ಶ್ರೀ ಡಿ. ದೇವರಾಜ ಅರಸ್.—ವಿರೋಧ ಪಕ್ಷದ ನಾಯಕರು ಹೇಳಿದ್ದನ್ನು ಕೇಳುತ್ತಾ ಇದ್ದೇನೆ. ರೂಲ್ ಇರತಕ್ಕದ್ದನ್ನು ಹೇಳಿದ್ದೇನೇ ಹೊರತು, ನಾವು ಹೊದಾಗಿ ಏನು ಮಾಡಿಲ್ಲ. ಈ Rules of Procedure and conduct of Business in the Mysore Legislative Assembly ನಮಗೆ ಎಲ್ಲರಿಗೂ ಅನ್ವಯಿಸತಕ್ಕದ್ದು. ನಮ್ಮ ನಡವಳಿಕೆಗಳು ಯಾವರೀತಿ ನಡೆಯಬೇಕು ಎಂದು ರೂಲ್ಸ್‌ನಲ್ಲಿ ಇದೆ ಅದರ ಪ್ರಕಾರ ನಾವು ನಡೆಯಬೇಕಾಗುತ್ತದೆ. ಇದರ ಬಗ್ಗೆ ಬಹುಶಃ ಮಾನ್ಯ ವಿರೋಧಪಕ್ಷದ ನಾಯಕರಿಗೆ ತರಕಾರು ಏನು ಇಲ್ಲ ಎಂದು ನನ್ನ ನಂಬಿಕೆ. ಒಂದುವೇಳೆ ಯಾವುದಾದರೂ ರೂಲ್‌ನಿಂದ ನಮ್ಮ ಕಾರ್ಯಕ್ರಮಗಳಿಗೆ, ನಮ್ಮ ಮಾತಿಗೆ ಮೊಟಕು ಆಗಿ ತೊಂದರೆಯಾಗುತ್ತಿದೆ ಎಂದು ಕಂಡುಬಂದರೆ ಅದನ್ನು ಬದಲಾವಣೆ ಮಾಡುವುದಕ್ಕೆ ಈ ಸಭೆಗೆ ಹಕ್ಕು ಇದೆ. ಎಲ್ಲಿಯವರೆಗೆ ಈ ಕಾನೂನನ್ನು, ಈ ರೂಲ್ಸಿನ ಚೌಕಟ್ಟಿನಲ್ಲಿ ಕೆಲಸಮಾಡಬೇಕೆಂದು ಇಟ್ಟುಕೊಂಡಿದ್ದೇವೋ ಅಲ್ಲಿಯವರೆಗೆ ಅದೇ ರೀತಿ ಮಾಡಬೇಕಾಗುತ್ತದ. ನಾವು ಯಾವರೀತಿ ಯಾವಯಾವ ಸಂದರ್ಭದಲ್ಲಿ ಎಷ್ಟು ಮಾತನಾಡಬೇಕು, ಹೇಗೆ ಮಾತನಾಡಬೇಕು ಎಂಬುದು ಕೂಡ ಇದೆ. ನಾವು ಮನಸ್ಸಿಗೆ ಬಂದ ಹಾಗೆ ಮಾತನಾಡುತ್ತೇವೆ. ಅಧಿಕಾರಿಗಳ ಹೆಸರು ಹಿಡಿದು ಲಂಚ ಕೋರರು ಎಂದು ಮಾನ್ಯ ಸದಸ್ಯರು ಹೇಳಿದರೆ ಅದನ್ನು ಅವರು ಸಾಬೀತು ಮಾಡುವಂತಿರಬೇಕು. ಕಾನೂನಿನ ಚೌಕಟ್ಟಿನಲ್ಲಿ ಏನು ಬೇಕಾದರೂ ಹೇಳಲಿ ನನ್ನ ಅಭ್ಯಂತರ ಇಲ್ಲ. ಚೌಕಟ್ಟು ಮೀರಿ/ ಹೇಳುವಾಗ ಇಂಥ ಮಾತ ಗಳಿದ್ದರೆ ಅದನ್ನು ಎತ್ತಿ ತೋರಿಸತಕ್ಕದ್ದು ನಮ್ಮ ಕರ್ತವ್ಯ. ವಿರೋಧ ಪಕ್ಷದ ನಾಯಕರು ಹೇಳಿದರು ಒಬ್ಬ ಸದಸ್ಯರು ಈ ಸಭೆಯಲ್ಲಿ ಇರದೆ ಇರತಕ್ಕ ಮಾಜಿ ಮುಖ್ಯ ಮಂತ್ರಿಗಳ ಮೇಲೆ ಕೆಲವು ಆಪಾದನೆಗಳನ್ನು ಮಾಡಿದರು ಎಂದು. ಆ ಆಪಾದನೆ ಮಾಡಿದ್ದು ಸರಿಯೋ ಅಥವಾ ತಪ್ಪೋ ಎಂದು ಹೇಳುವುದಕ್ಕೆ ನಾನು ಹೋಗುವುದಿಲ್ಲ. ಒಂದುವೇಳೆ ಅಪಾದನೆ ಮಾಡಿದರೆ, ತಪ್ಪು ಆಗಿದ್ದರೆ ವಿರೋಧ ಪಕ್ಷದ ನಾಯಕರು ಯಾರೇ ಆಗಿರಲಿ ಎದ್ದು ನಿಂತು ತಪ್ಪಾಗಿ ಹೇಳಿದ್ದಾರೆ ಎಂದು ಹೇಳಿದ್ದರೆ ನಮ್ಮದು ಅಭ್ಯಂತರ ಇರಲಿಲ್ಲ. ಯಾವ ಮಾನ್ಯ ಸದಸ್ಯರು ಆಪಾದನೆ ಮಾಡಿದವರು ಎಂದು ಅವರು ಹೇಳಿದ್ದಾರೆ ಅದನ್ನು ಸಾಬೀತು ಮಾಡುವುದಕ್ಕೆ ಆಗುವುದಿಲ್ಲ ಎಂದರೆ ಅದು ತಪ್ಪಾಗುತ್ತದೆ, ಅದನ್ನು ನಾನು ಒಪ್ಪುತ್ತೇನೆ. ಒಬ್ಬ ಆಫೀಸರ್ ಅಡ್ಮಿನಿಸ್ಟ್ರೇಟೀವ್ ಕೆಪ್ಯಾಸಿಟಿಯಲ್ಲಿ ಏನು ತಪ್ಪು ಮಾಡಿದ್ದಾರೆ ಎಂದು ಹೇಳುವ ಅಧಿಕಾರ ಎಲ್ಲರಿಗೂ ಇದೆ. ಅದು ಹೊಸದಾಗಿ ಮಾಡಿದ್ದು ಅಲ್ಲ, ಮೊದಲಿನಿಂದಲೂ ಇದೆ. ರೂಲ್ 289 ಏನಿದೆ ಆ ರೂಲ್‌ನ್ನೂ ಮತ್ತೆ ಓದುತ್ತೇನೆ:

> "No allegation of a defamatory or incriminatory nature shall be made by a member against any person unless the member has given previous intimation to the Speaker and also to the Minister concerned........."

ಎಂದು ಇದೆ. ಹೀಗಿರುವಾಗ ಅವರು ಒಂದು ಪ್ರಕರಣದಲ್ಲಿ ತಮ್ಮ ಅಧಿಕಾರವನ್ನು ಚಲಾಯಿಸಿ ಹೇಳಿದ್ದಾರೆ. ಅವರು ಹೇಳಿದ್ದು ಸರಿಯಿಲ್ಲ ಎಂದು ನಾನು ಅದರ ಬಗ್ಗೆ ಜಗಳ ಮಾಡುವುದಕ್ಕಾಗುವುದಿಲ್ಲ. ಇಂಥಾ ವಿಷಯಗಳ ಬಗ್ಗೆ ಮಾತನಾಡುವಾಗ ಕಾನೂನು ಪ್ರಕಾರ ಮಾತನಾಡಬೇಕು. ಮಾನ್ಯಸದಸ್ಯರು ಯಾರೇ ಆಗಲೀ ಇಂಥಾ ಚಾರ್ಜುಗಳನ್ನು ಮಾಡುವಾಗ ಯಾವ ಒಬ್ಬ ವ್ಯಕ್ತಿ ಈ ಸಭೆಯಲ್ಲಿ ಇಲ್ಲವೋ ಅವರ ಬಗ್ಗೆ ಚಾರ್ಜ್ ಮಾಡುವುದು ರೂಲ್ಸ್ ಪ್ರಕಾರ ಸರಿಹೋಗುವುದಿಲ್ಲ. ಎಲ್ಲಿಯವರೆಗೆ ರೂಲ್ಸ್ ಆಫ್ ಪ್ರೊಸೀಜರ್ ಇರುತ್ತದೆಯೋ ಅಲ್ಲಿಯವರೆಗೆ ನಾವು ಅವನ್ನು ಅನುಸರಿಸಲೇ ಬೇಕು. The rules say that the Minister shall be informed. Since the rules mention, I am pointing it out.

> "........so that the Minister may be able to make an investigation into the matter for the purpose of reply."

If the hon. the Leader of the Opposition does not want the Minister concerned to investigate or this Government to investigate, I cannot help it. He may seek other ways of getting it investigated. If there

are really charges of the nature which they are trying to make out, we will investigate. There are so many charges made against officers and they are being investigated. Some officers have been suspended for which the Hon. Minister was called 'Suspension Minister,' by the Leader of the Opposition. There are instances where charges have been made and allegations have been brought to the notice of the Government either through this House or elsewhere and they are being looked into and wherever Government has found that a particular officer is guilty of certain charge, suitable punishment is being given. Rule 289 further says :

> "so that the Minister may be able to make an investigation into the matter for the purpose of reply : Provided that the Speaker may at any time prohibit any member from making any such allegation if he is of opinion that such allegation is derogatory to the dignity of the Assembly or that no public interest is served by making such allegation."

ಶ್ರೀ ಎಚ್. ಡಿ. ದೇವೇಗೌಡ.—ಈ ವಿಷಯದಲ್ಲಿ ಅಧ್ಯಕ್ಷರು ಒಂದು ಗೈಡ್‌ಲೈನ್ ಹಾಕಿ ಕೊಟ್ಟರೆ ಒಳ್ಳೆಯದು. ಇದುವರೆಗೂ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದನ್ನು ನಾನು ಕೇಳಿದ್ದೇನೆ. ಬಹುಶಃ ಹೆಸರು ಹಿಡಿದು ಮಾತನಾಡುವುದು ತಪ್ಪು ಎಂದು ನಾನು ಒಪ್ಪಿ ಕೊಳ್ಳುತ್ತೇನೆ. ಮತ್ತು ಈ ಸಭೆಯಲ್ಲಿ ಇಲ್ಲದೇ ಇರತಕ್ಕ ವ್ಯಕ್ತಿಗಳ ಹೆಸರನ್ನು ಹೇಳುವುದು ಸರಿಯಲ್ಲ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಈಗ ಒಬ್ಬರು ಚೀಫ್ ಇಂಜಿನಿಯರು, ಒಬ್ಬರು ಮೇಜರ್ ಇರಿಗೇಷನ್ ಇಂಜಿನಿಯರು ಎರಡು ಮನೆಗಳನ್ನು ಕಟ್ಟಿಕೊಂಡಿದ್ದಾರೆ ಎಂದು ಹೇಳಿದರೆ ಅದು ವ್ಯಕ್ತಿಯ ಘನತೆಗೆ ಕುಂದಾಗುತ್ತದೆ ಎಂದು ಹೇಳಿದರು. ಈಗ ಒಬ್ಬ ಅಧಿಕಾರಿ ಎರಡು ಮನೆಗಳನ್ನು ಕಟ್ಟಿಕೊಂಡಿದ್ದಾರೆ, ಎರಡು ಮೂರು ಲಕ್ಷ ರೂಪಾಯಿಗಳನ್ನು ಹೊಡೆದಿದ್ದಾನೆ ಎಂದು ಹೇಳಿದರೆ ಅದು ಆ ವ್ಯಕ್ತಿಯಘನತೆಗೆ ಕುಂದು ಬರುತ್ತದೆ, ಈ ಸಭೆಯ ಘನತೆಗೆ ಕುಂದು ಬರುತ್ತದೆ ಎಂದು ಹೇಳುವುದಾದರೆ ಅದನ್ನು ಬರವಣಿಗೆಯಲ್ಲಿ ಕೊಡಬೇಕೇ, ಆ ರೀತಿ ಬರವಣಿಗೆಯಲ್ಲಿ ಕೊಟ್ಟರೆ ಆ ಬಗ್ಗೆ ವಿಚಾರಣೆ ನಡೆಸುತ್ತೀರಾ ಹೇಗೆ? ಇಂಥಾ ಸಂದರ್ಭದಲ್ಲಿ ಯಾವರೀತಿ ಮಾಡಬೇಕು ಎನ್ನುವುದರ ಬಗ್ಗೆ ವಿವರಣೆ, ನಿರ್ದೇಶನ ಕೊಡಬೇಕೆಂದು ನಾನು ಹೇಳುತ್ತೇನೆ.

SrI K. PUTTASWAMY (Chamundeshwari).—Madam, I seek a clarification from the hon. Minister Sri Channabasappa with reference to the statement that he made just now. I am not referring to the portion that refers to the question of privilege. The hon. Minister stated that he would enquire and take action under the Mysore Civil Service Conduct Rules against the officer. I would like to know on what issues he is going to make an enquiry and take action.

SrI H. M. CHANNABASAPPA.—I thought the hon. Member Sri Puttaswamy, a very well known figure in this House and a person with wide experience, knew very clearly what it means. Government will examine to what extent the statement attracts the provisions of the Mysore Civil Service Conduct Rules. There are components of the statement and we have to take into account all aspects of the question and then see to what extent these things attract these rules. That will be examined separately.

SrI K. PUTTASWAMY.—That is the very point I wanted the Hon. Minister to clarify. This news item which has appeared only in Deccan Herald and in no other news paper has been denied by the

(SRI K. PUTTASWAMY)

person concerned. I therefore just want to know what are the other portions of the news item not pertaining to the point of privilege on which the Hon. Minister is going to enquire and take action.

SRI H. M. CHANNABASAPPA.—The Hon. Speaker applied her mind only to the limited aspect of the question of breach of privilege and gave her ruling. There are other aspects which have got to be looked into. I cannot straightaway spell out what are those other aspects into which I am going to make an enquiry.

SRI K. PUTTASWAMY.—Which are the items pertaining to the news item on which he is going to make an enquiry? I am not asking the hon. Minister to state other matters which may or may not be pending before him.

SRI H. M. CHANNABASAPPA.—The matters are very clear. I do not know why the hon. Member Sri Puttaswamy has not been able to apply his mind and see through.

SRI C. M. ARUMUGAM.—It is not only Sri Puttaswamy who feel so. We also want to know what are the other aspects. You made a reference to many other aspects.

SRI H. M. CHANNABASAPPA.—I have made it clear to what extent the statement attracts the provisions of the Mysore Civil Service Conduct Rules, 1968. When things are so clear, I do not see why Sri Puttaswamy has not been able to appreciate my statement.

SRI K. PUTTASWAMY.—Leaving out the portion which was referred to as a point of privilege, I would like to know from the hon. Minister what are statements that the officer has made on which he wants to take action.

† SRI H. M. CHANNABASAPPA.—The Hon. Speaker in her wisdom has appreciated that not merely he has denied the fact but even on the face of the statement itself there is no prima facie case of breach of privilege. Now there are so many other aspects which the hon. members know and they have made statements also in this House in regard to the concerned officer. The mere fact that the officer has denied the statement is a different matter. Even the veracity of that will have to be verified.

SRI K. PUTTASWAMY.—The Hon. Speaker has said that what he has said is true and she has accepted it.

SRI H. M. CHANNABASAPPA.—That is the statement of fact the Hon. Speaker made. We wrote to the officer and that officer has replied. So, yesterday the hon. member was witness to a number of things which the hon. members have made in this House. We have to verify what are the facts that are there in the statement and what are all the facts he has denied. All these things will have to be gone through and the Government cannot close its eyes and ears to

all matters that take place in this country. We are meant to take cognisance of everything that takes place and the Government in its wisdom will do what is best. I would tell the hon. members that the statement which I have made though crisp and pointed, it is full of imports and the hon. members must kindly be satisfied for the time being.

† SRI M. S. KRISHNAN.—Madam, I want to speak on two points. The first point is about the subject which was just now discussed and about which the hon. Minister Sri H. M. Channabasappa said that he will enquire into it in accordance with the rules. I have nothing to say; let the enquiry be made and let us know what the enquiry is. I should say that it is good that he has stated that an enquiry would be conducted and I do not think it is in contravention of the ruling given. It is in accordance with the procedure which the Government has to follow.

The other point is about the point made by the Hon. Chief Minister, namely, that in accordance with rule 289 there should be previous intimation or notice to the Speaker. Rule 289 says:

> "No allegation of a defamatory or incriminatory nature shall be made by a member against any person..."

There is also proviso to this rule. It says:

> "Provided that the Speaker may at any time prohibit any member from making any such allegation if he is of opinion that such allegation is derogatory to the dignity of the Assembly or that no public interest is served by making such allegation."

No such prohibition was made when I was on my legs and speaking on this particular aspect. I took it that the Hon. Speaker has given permission to speak. So the question of prohibition by the Hon. Speaker does not arise. The only other aspect is whether I should have made or I could make the remark which I made. First of all I would like to know what are the remarks I made. In the heat of discussions between myself and the Chief Minister what are the words that have been used have to be found out. Even taking for granted that worse is said in respect of that officer, namely the Chairman of the Water Supply and Sewerage Board that does not in any way contravene these rules. We should read this rule in conjunction with the procedure that is being followed by this Assembly ever since the Assembly was constituted, I do not think it has been construded by any Speaker that remarks like "the officer is corrupt, bureaucrat, is not doing his duties properly" attract this particular rule. Therefore if any ruling is given that it will attract this rule, then it will impinge on the freedom of speech of the members of this House. I would like to submit that when we come to know of certain aspects in respect of certain officers, we place them before the House. It is not a new thing We speak of facts that are in our possession and it is not a new thing. Secondly I

(SRI M. S. KRISHNAN)

would like to bring to the notice of this House the speech made by the Hon. Minister of State Sri H. N. Nanje Gowda on 14th March 1970 when he was on this side of the House. It consists of quite a number of insinuations against officers. In fact he attacks some of the ministers like this :

"ಇನ್ನು ಈ ದಿವಸ ನಮ್ಮ ಮುಂದೆ ಚರ್ಚೆಗೆ ಬಂದಿರತಕ್ಕ ಲೋಕೋಪಯೋಗಿ ಇಲಾಖೆಯ ವಿಚಾರದಲ್ಲಿ ಮಾತನಾಡುವುದಕ್ಕೆ ಮುನ್ನ ನನಗೆ ಒಂದು ವಿಷಯ ಜ್ಞಾಪಕಕ್ಕೆ ಬರುತ್ತಿದೆ. ಅದೇನೆಂದರೆ ನಾನು ಈ ಪಿ ಡಬ್ಲ್ಯು ಡಿಗೆ ಒಂದು ಟೈಟಲ್‌ನ್ನು ಕೊಡಬೇಕೆಂದಿದ್ದೇನೆ. ಅದು ಯಾವುದು ಎಂದರೆ ಈ ಇಲಾಖೆಗೆ ದ್ರೌಪತಿ ಎಂಬ ಹೆಸರನ್ನು ಇಟ್ಟು ಕರೆಯಬೇಕು ಎಂದು. ಏಕೆಂದರೆ ದ್ರೌಪತಿಗೆ 5 ಜನ ಗಂಡಂದಿರು ಇದ್ದ ಹಾಗೆ.ಈ ಪಿ ಡಬ್ಲ್ಯು ಡಿಗೂ 5 ಜನ ಮಂತ್ರಿಗಳು ಇದ್ದಾರೆ"

Again on March 16, 1970, Sri H. Siddaveerappa speaking about Electricity Board said "it is a curse of Mysore to have Electricity Board headed by the unscrupulous Chairman." When this was said the Chief Minister was on this side and he did not take objection nor did he point out any ruling. There was no necessity. So when strong words are used to criticise there is no point in raising point of order. Secondly the Chief Minister said that he knows and he will make an enquiry. I am happy about it. He is seized of the matter and he will make an enquiry and there the matter ends and we will be happy to co-operate with him.

† SRI D. DEVARAJ URS.—The hon. member has tried very cleverly and very intelligently to make out a case in favour of the statement or the allegations he has made. He fundamentally wants this House to overlook or to keep aside the rules of procedure that is before us just for the purpose of allowing an hon. member to say what he wants in the name of freedom of speech.

2-30 P.M.

Anyway I admire the way in which he has tried to argue the case. I am afraid inspite of this intelligence none of his arguments hold water so far as rules are concerned. Our freedom of speech is controlled by the rules of procedure. We have freedom of speech. But that has certain limitations and those limitations are defined in the rules of procedure. Secondly, the hon. member was quoting Mr. Nanjegowda and Mr. Siddaveerappa. If Mr. Siddaveerappa or Mr. Nanje Gowda, when they were in opposition, made such speech and at that time if nobody raised any objection then it is not my fault. If it was against the rules of procedure they should have raised objection and I don't know what the Speaker would have said at that time. Lastly, he was saying that I have already ordered for enquiry. Even now I say if there are allegations and if the hon. member could give me I am prepared to enquire into it. Don't think there is somebody or the other to make allegations against anybody. Can we take cognizanse of

it and go on making enquiries ? If there are specific Charges certainly Government is going to hold enquiry, but in the absence of it I am helpless. Then whether corruption, nepotism, bureaucracy all these words could be used, and generally they are being used. I know, I am in this Assembly for at least more than 25 years and I know the procedure. I am not shy of hearing such words generally. But when it is specifically mentioned with respect to a particular office then I say it is objectionable. Then the Hon. Member was good enough to say yesterday that we have received money from this officer.

SRI M. S. KRISHNAN.—No, have not said that. Somebody else might have said it.

SRI D. DEVARAJ URS.—If you have not said I will be happy. But if you have said it I regret it. But anyway let the Speaker look into what has been stated day-before yesterday and also what has appeared in the press. I would like to point out here particularly ಮಾನ್ಯ ಶ್ರೀ ಆರ್ಮುಗಂರವರು ಆಕ್ಷೇಪಣೆ ಮಾಡಿದ್ದಾರೆಂದು what has appeared in Prajavani. That is :

> "ಅವರೇ ನಿಮ್ಮ ಪಕ್ಷಕ್ಕೆ ದುಡ್ಡು ಕೊಟ್ಟಿದ್ದಾರೆ. ಕಾಂಗ್ರೆಸ್ ಸರ್ಕಾರವನ್ನು ನಾವು ಒಬ್ಬರೂ ಒಪ್ಪುವುದಿಲ್ಲ."

I wish to submit I got this verified. On verification it is found that it is not Mr. Armugum who has made the statement but it is hon. member Mr. Krishnan who has made this statement. Lastly, I submit that this is a matter to be looked into by the Speaker and it will take some time to ponder over the matter and give a ruling.

Further the hon. member Mr. Krishnan was pleased to mention that nowhere in the history of this Assembly there appeared to be an instance where a ruling has been given on this subject. I might point out to him that there have been instances where such things have been brought before this House during the distinguished Speaker Mr. Baliga's time and a ruling has also been given by him. I have a copy of the parliamentary journal also in which the Speaker of the Lok Sabha has given a ruling in connection with the allegations of the type made against a person who is not in the House. All these things I am submitting to the Speaker and she may kindly go through them and give her considered ruling on this.

SRI H. M. CHANNABASAPPA.—Madam Speaker, I rise only to point out that what hon. member Sri Krishnan said is not correct. I will read out the extract from the speech made by the hon. member Sri Krishnan day before yesterday wherein he has stated :

> "The second point is about his participation in politics. Many of us are Engineers; I am also an Engineer, but we did not become Engineers and create politics in the manner this officer is indulging. We know why he is indulging in such things. He is supported by a party. He has given them election funds. He has collected money from the contractors and he is himself a

(SRI H. M. CHANNABASAPPA)

highly corrupt officer. Such officer wants to enter into politics. Let him enter into politics. He will not exist there even for two days."

I think this portion is relevant and sufficient for the purpose of our discussion.

†SRI C. M. ARUMUGAM.—Madam Speaker, regarding the issue raised on Saturday, you have given the Ruling that there is no breach of privilege and that the matter be dropped. After the Ruling is given, now the Government comes forward and say that they want to conduct an enquiry, they will look into the aspect and take action as per C.C.A. Rules. When the Chair has given a decision it is final. Now that the Government says that they will enquire into the matter, that means your decision is not final the matter continues. When they probe into the matter, it may become a breach of privilege of the House. To question the Ruling of the Chair, one has to give a Substantive Motion. You were good enough to say that you are not going to revise your decision. I would like to know what happens to your Ruling? Ultimately, when the Government probes into the matter and decides to take action against the officer, then what will happen? The Hon'ble Ministers should not take the responsibility of protecting all the officers—all the officers cannot be compared to Sita or Droupadi. These officers have themselves acted as Ministers during the president's Rule, they were worst than dictators and all of us know how they have behaved. Therefore, all officers are not bad, all are not good. We know what they have done during the last 25 years, and if the Hon'ble Chief Minister wants to shield such officers, I leave it to him. The Hon'ble Minister for Public Works Sri H. M. Channabasappa gave a beautiful reply—I was very much enamoured. Can we vouchsafe that Sri Nijalingappa is competent to hold the Chief Ministership? The Hon'ble Minister Sri Channabasappa has himself stated when he was on this side that he is too old. The issue has been divided. What happens to the Ruling given by the Chair? Madam Speaker, I want your Ruling on this.

MADAM SPEAKER.—I will consider all the aspects and give a considered Ruling later.

ಶ್ರೀ ಕೆ. ಎಂ. ನಾಗಣ್ಣ (ಚಿಕ್ಕಪೇಟೆ).—ಒಂದು ಪತ್ರಿಕಾ ವರದಿಯಲ್ಲಿ ಬಂದ ಒಬ್ಬ ಅಧಿಕಾರಿಗಳ ಹೇಳಿಕೆಯ ಬಗ್ಗೆ ನಾವೆಲ್ಲರೂ ಇಲ್ಲಿ ಕಳೆದ ಶನಿವಾರ ಬೆಳಿಗ್ಗೆ ಚರ್ಚೆ ನಡೆಸಿದೆವು. ಆ ಹೇಳಿಕೆ ಅಧ್ಯಕ್ಷರ ಕಛೇರಿಯವರು ಅಧಿಕಾರಿಗೆ ಬರೆದು ಅವರಿಂದ ತರಿಸಿಕೊಂಡದ್ದೇನೂ ಅಲ್ಲ. ನಾವು ಇಲ್ಲಿ ಶನಿವಾರ ಆ ಹೇಳಿಕೆಯ ಬಗ್ಗೆ ಚರ್ಚೆ ನಡೆಸಿದ್ದರ ಮೇಲೆ, ಅದೇ ಅಧಿಕಾರಿಗಳು ಇನ್ನೊಂದು ಪ್ರೆಸ್ ಕಾನ್‌ಫರೆನ್ಸನ್ನು ಕರೆದು ಇಲ್ಲಿ ಏನು ಚರ್ಚೆ ನಡೆಯಿತೋ ಅದನ್ನು ಪ್ರತಿಭಟಿಸಿ ಅವರೇನೂ ಮತ್ತೆ ಬರೆಯಲಿಲ್ಲ. ಈ ದಿವಸ ತಾವು ಕೊಟ್ಟ ರೂಲಿಂಗಿಗೆ ನಾವು ತಲೆಬಾಗಿ ನಡೆಯುತ್ತೇವೆ. ಆದರೆ ತಮ್ಮ ರೂಲಿಂಗ್ ಕೊಟ್ಟ ನಂತರ ಮತ್ತೆ ಅದೇ ವಿಚಾರದಲ್ಲಿ ಶ್ರೀಮಾನ್ ಚನ್ನಬಸಪ್ಪನವರು ಆ ಅಧಿಕಾರಿಯ ಮೇಲೆ ಸಿ.ಸಿ.ಎ. ರೂಲ್ಸ್ ಪ್ರಕಾರ ವಿಚಾರಣೆ ನಡೆಸುತ್ತೇವೆಂದು ಹೇಳುತ್ತಿದ್ದಾರೆ. ಅದಕ್ಕಾಗಿ ಅವರಿಗೆ ನಮ್ಮ ವಂದನೆಗಳು. ಇನ್ನು ಆ ಶನಿವಾರ ಇಲ್ಲಿ ಚರ್ಚೆಯಾದ ವರದಿ ಏನಿದೆ

ಅದರ ಬಗ್ಗೆ ಪತ್ರಿಕಾ ವರದಿಯೇ ತಪ್ಪಾಗಿದ್ದರೆ ಅವರ ಬಗ್ಗೆ ಏನು ಕಾರ್ಯಕ್ರಮ ಕೈಗೊಳ್ಳುತ್ತೀರೆಂದು ನಾವು ಆ ದಿವಸವೇ ಈ ಪ್ರಶ್ನೆಯನ್ನು ಎತ್ತಿದ್ದೆವು. ಆದ್ದರಿಂದ ಈಗ ಮುಖ್ಯಮಂತ್ರಿಗಳು ಅವರ ಬಗ್ಗೆ ಏನು ಕ್ರಮ ಕೈಗೊಳ್ಳುತ್ತಾರೆಂಬುದನ್ನು ತಿಳಿಸಬೇಕು.

Sri D. DEVARAJ URS.—Again and again fresh points are raised. I am sorry I have to rise again and say what I have got to say.

Sri H. D. DEVE GOWDA.—The Hon'ble Speaker is capable enough to give her Ruling on this point.

ಶ್ರೀ ಡಿ. ದೇವರಾಜ ಅರಸ್.—ಇಲ್ಲಿ ಪ್ರತಿಕೆಯವರನ್ನು ಕೇಳತಕ್ಕ ಪ್ರಶ್ನೆಯೇ ಉದ್ಭವಿಸುವುದಿಲ್ಲ.

Sri H. D. DEVE GOWDA.—If the Hon'ble Chief Minister wants to raise a Point of Order, he can do so.

Sri D. DEVARAJ URS.—As the Leader of the House, I have every right to explain things.

Sri H. D. DEVE GOWDA.—For each and every comment, if the Hon'ble Chief Minister is to rise up, where will it end ?

ಶ್ರೀ ಡಿ. ದೇವರಾಜ ಅರಸ್.—ಈ ವಿಚಾರ ಉದ್ಭವಿಸಿರತಕ್ಕದ್ದು ಹೊರಗಡೆಯಲ್ಲ. ಪತ್ರಿಕೆಯಲ್ಲಿ ಏನು ಬರೆದಿದ್ದಾರೆಂಬುದು ಬೇರೆ ವಿಚಾರ. ಆದರೆ ನಮ್ಮ ಅಸೆಂಬ್ಲಿಯಲ್ಲಿ ನಡೆದ ಕಾರ್ಯಕಲಾಪಗಳ ಬಗ್ಗೆ ಪತ್ರಿಕೆಯಲ್ಲಿ ವರದಿಯಾಗಿರತಕ್ಕದ್ದು ಸರಿಯಾಗಿದೆಯೇ ಇಲ್ಲವೆ ಎಂಬುದನ್ನು ನಾವು ಗಮನಿಸಬೇಕಾದ್ದು ಮುಖ್ಯ. ಉದಾಹರಣೆಗೆ ಮೊನ್ನೆ ಇಲ್ಲಿ ಶ್ರೀ ಎಂ. ಎಸ್. ಕೃಷ್ಣನ್ ಅವರು ಒಂದು ಹೇಳಿಕೆಯನ್ನು ಕೊಟ್ಟರು. ಆ ಹೇಳಿಕೆಯನ್ನು ಶ್ರೀ ಆರ್ಮುಗಂ ಅವರು ಹೇಳಿದ್ದರೆಂದು ತಪ್ಪಾಗಿ ವರದಿ ಮಾಡಿದ್ದಾರೆ, ಪತ್ರಿಕೆಯಲ್ಲಿ ಅದು ತಪ್ಪಾಗಿ ಮುದ್ರಿತವಾಗಿದೆ.

That is a matter which requires the Hon'ble Speaker to look into. It is a wrong reporting, a thing which has been put to the mouth of an hon. Member which has not been told by him at all !

ಶ್ರೀ ವಾಟಾಳ್ ನಾಗರಾಜ್.—ಹೀಗೆ ಕೆಲವು ರಾಜಕಾರಣಿಗಳು ಮೊದಲು ಹೇಳಿಕೆ ಕೊಟ್ಟು ಆ ನಂತರ ಹಾಗೆ ಹೇಳಲಿಲ್ಲ ಎನ್ನುವುದು ಒಂದು ಫ್ಯಾಷನ್ನಾಗಿದೆ. ಆದರೆ ಈಗೇನು ಶ್ರೀ ಚನ್ನಬಸಪ್ಪನವರು ಸಿ. ಸಿ. ಎ. ರೂಲ್ಸ್ ಪ್ರಕಾರ ಎನ್‌ಕ್ವೈರಿ ಮಾಡುತ್ತೇವೆಂದು ಹೇಳುತ್ತಿದ್ದಾರೆ ಅದಕ್ಕೆ ಮುಖ್ಯಮಂತ್ರಿಗಳು ಒಪ್ಪಿದಂತೆ ಕಂಡುಬರುತ್ತಿಲ್ಲ ......

ಶ್ರೀ ಡಿ. ದೇವರಾಜ ಅರಸ್.—ನಾನು ಹೇಳಿದ ವಿಚಾರ ಶ್ರೀ ಎಂ. ಎಸ್. ಕೃಷ್ಣನ್ ಅವರ ಹೇಳಿಕೆಗೆ ಸಂಬಂಧಪಟ್ಟಿದ್ದು. ಇನ್ನು ಲೋಕೋಪಯೋಗಿ ಸಚಿವರು ಹೇಳಿದ್ದು

"whether it attracts C. C. A. rules will be examined into" ಎಂದು ಏನಿದೆ ಅದು it stands.

Sri M. S. KRISHNAN.—The Statement which was read out by the Hon. Minister Sri Channabasappa as being an extract of the proceedings of this House refers to something which I am supposed to have spoken. My remembrance regarding the speech is that I had referred that I am an Engineering Graduate and one of the hon. Ministers of State is also an Engineering Graduate. They have left out engineering and entered into politics. I do not remember to have stated about party, contractors and all those things. My remembrance is that the Press have reported properly but your Reporters might not have reported properly.

SRI H. M. CHANNABASAPPA.—This is a report which I got from the Legislature Secretariat for purposes of verifying so many other things and it is only from that report I have read out.

SRI H. S. SIDDAPPA.—Hon. Education Minister is present in the House. I request the Hon. Speaker kindly permit me to move my adjournment motion. If today is lost, no useful purpose would be served by my motion.

SRI A. R. BADARINARAYANA (Minister for Education).—We shall take it up tomorrow.

SRI C. M. ARUMUGAM.—For everying, the Hon. Minister of State for Major Irrigation gets up and raises a point of order. Does he want to become a cabinet Minister ?

SRI H. N. NANJEGOWDA (Minister of State for Major Irrigation).—I have got an explanation to offer to the House. ಮಾನ್ಯ ಸದಸ್ಯರಾದ ಶ್ರೀ ಅರುಮುಗಂರವರು ರಾಜ್ಯ ಸಚಿವರು ಮಾತನಾಡುವಾಗ ಅನಾವಶ್ಯಕವಾಗಿ ಎದ್ದು ನಿಂತುಕೊಂಡು ಮಾತನಾಡಲು ಪ್ರಯತ್ನ ಮಾಡುವರು, ಕ್ಯಾಬಿನೆಟ್ ಮಿನಿಸ್ಟರ್ ಆಗಲು ಹೀಗೆ ಮಾಡುತ್ತಿದ್ದಾರೋ ಏನೋ ಎಂದು ಹೇಳಿದರು.

I want to submit this impression is not correct.

Revised Budget Estimates for 1972-73 Demands for Grants—Demand Nos. 3, 4, 26, 50A, 15 and 53.

SRI D. DEVARAJ URS (Chief Minister).—Madam, on the recommendation of the Governor, I beg to move :

> "That a sum not exceeding Rs. 1,98,00,000 inclusive of the sum granted 'on account', be granted to the Government to defray the charges which will come in course of payment during the financial year for the period ending 31st day of March 1973, in respect of Demand No. 3, 'State Excise Duties ".

MADAM SPEAKER.—Motion moved :

> "That a sum not exceeding Rs. 1,98,00,000 inclusive of the sum granted 'on account', be granted to the Government to defray the charges which will come in course of payment during the financial year for the period ending 31st day of March 1973, in respect of Demand No. 3 State Excise Duties'."

SRI AZEEZ SAIT (Minister for Labour).—Madam, on the recommendation of the Governor, I beg to move.

> "That a sum not exceeding Rs. 42,99,000, inclusive of the sum granted 'on account', be granted to the Government to defray the charges which will come in course of payment during the financial year for the period ending 31st day of March 1973, in respect of Demand No. 4 'Taxes on Vehicles".'

MADAM SPEAKER.—Motion moved :

> "That a sum not exceeding Rs. 42,99,000, inclusive of the sum granted 'on account', be granted to the Government to defray the charges which will come in course of payment during the financial year for the period ending 31st day of March 1973, in respect of Demand No. 4 'Taxes on Vehicles'."

With this, Demand No. 26 and No. 50A are also deemed to have been moved.

Smt. E. E. VAZ (Minister of State for Food).—Madam, on the recommendation of the Governor, I beg move :

> "That a sum not exceeding Rs. 2,52,23,000, inclusive of the sum granted 'on account', be granted to the Government to defray the charges which will come in course of payment during the financial year for the period ending 31st day of March 1973, in respect of Demand No. 15 'Miscellaneous Departments'."

MADAM SPEAKER.—Motion moved :

> "That a sum not exceeding Rs. 2,52,23,000, inclusive of the sum granted 'on account', be granted to the Government to defray the charges which will come in course of payment during the financial year for the period ending 31st day of March 1973, in respect of Demand No. 15 'Miscellaneous Departments'."

With this Demand No. 53 is also deemed to have been moved.

† ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಮಾನ್ಯ ಸಭಾಧ್ಯಕ್ಷಣಿಯವರೇ, ಸಭೆಯ ಮುಂದಿಟ್ಟಿರುವ ಕಾರ್ಮಿಕರು, ಉದ್ಯೋಗ, ಸಾರಿಗೆ ವ್ಯವಸ್ಥೆ ಮುಂತಾದುವುಗಳಿಗೆ ಸಂಬಂಧಪಟ್ಟ ಬೇಡಿಕೆಗಳನ್ನು ವಿರೋಧಿಸುತ್ತಾ ಎರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಹಿಂದೆ ಕಾರ್ಮಿಕರ ಬಗ್ಗೆ ಮಾತನಾಡುವಾಗ ಈ ಸಭೆಯಲ್ಲಿ ಇದಕ್ಕೆ ಸಂಬಂಧಪಟ್ಟ ಇಲಾಖೆಯನ್ನು ಟೀಕಿಸಿರುವುದುಂಟು. ಇಲಾಖೆ ಸರಿಯಾಗಿ ನಡೆಯುತ್ತಿಲ್ಲ ಎಂದು ಹೇಳಿದ್ದೇವೆ. ಹಿಂದೆ ಶ್ರೀ ಪುಟ್ಟಸ್ವಾಮಿಯವರು ಕಾರ್ಮಿಕರ ಇಲಾಖೆ ಮಂತ್ರಿಗಳಾಗಿದ್ದರು. ಅವರನ್ನು ಕಟುವಾಗಿ ಟೀಕಿಸಿದ್ದುಂಟು. ಈ ದಿವಸ ಅದೇ ಧಾಟಿಯಲ್ಲಿ ನಾನು ಮಾತನಾಡುತ್ತೇನೆಂದು ಯಾರೂ ಭಾವಿಸಬಾರದು. ಹಿಂದೆ ಶ್ರೀ ಪುಟ್ಟಸ್ವಾಮಿಯವರು ಹಿಂದೆ ಹೇಳಿದ್ದನ್ನೇ ಹೇಳುತ್ತಿದ್ದಾರೆ ಎಂದು ಆ ಅರ್ಥ ಬರುವ ರೀತಿಯಲ್ಲಿ ಹೇಳುತ್ತಿದ್ದರು. ಆದುದರಿಂದ ಇದನ್ನು ಗಮನಕ್ಕೆ ತರಬೇಕಾಗಿದೆ. ಕಾಂಗ್ರೆಸ್ ಪಕ್ಷವು ಸಮತವಾದವನ್ನು ಒಪ್ಪಿಕೊಂಡಿದೆ. ಸಮತಾವಾದಿ ಸಮಾಜವನ್ನು ರಚಿಸುತ್ತಿರುವುದಾಗಿ ಸರಕಾರ ಹೇಳಿದೆ. ಕಾರ್ಮಿಕ ವರ್ಗದ ನಾಯಕತ್ವವಿದ್ದು ಕಾರ್ಮಿಕ ವರ್ಗದ ಸರಕಾರ ಬಂದರೆ ನಿಜವಾಗಿಯೂ ಸಮತಾವಾದ ಬರುವುದಕ್ಕೆ ಸಾಧ್ಯ. ಆದರೂ ಸಹ ಸಮತಾವಾದವನ್ನು ಜಾರಿಗೆ ತರುತ್ತೇವೆಂದು ಹೇಳಿರುವುದರಿಂದ ಕಾರ್ಮಿಕ ವರ್ಗದ ನಾಯಕತ್ವವನ್ನು ಒಪ್ಪದಿರುವುದರಿಂದ ಸಮತಾವಾದವನ್ನು ಮತ್ತು ಅದರ ತತ್ವವನ್ನು ಎಷ್ಟು ಪ್ರತಿಪಾದಿಸುತ್ತಿದ್ದಾರೆಂಬುದನ್ನು ಯೋಚನೆಮಾಡಬೇಕಾಗಿದೆ. ಸಮತವಾದದ ಸಮಾಜದಲ್ಲಿ ಕಾರ್ಮಿಕವರ್ಗದ ಪಾತ್ರ ಮಹತ್ವವುಳ್ಳದ್ದು. ಅದೇ ರೀತಿಯಲ್ಲಿ ಸರಕಾರದ ಪಾತ್ರವೂ ಇರುವುದು. ಸರಕಾರ ಸರಿಯಾದ ಧೋರಣೆಯನ್ನು ಈ ಬಗ್ಗೆ ತಾಳಬೇಕು, ಪ್ರಗತಿಪರವಾದ ಧೋರಣೆಯನ್ನು ಕಾರ್ಮಿಕರ ಬಗ್ಗೆ ಸರಕಾರ ತಾಳಬೇಕು. ಇದರಲ್ಲಿ ಸರಕಾರಿ ಪಾತ್ರ ಕೂಡ ಅತಿ ಮುಖ್ಯವಾದದು. ಇಂದು ಕಾರ್ಮಿಕ ಇಲಾಖೆ ಮೂಲಭೂತವಾದ ಸಮತಾವಾದದ ತತ್ವಗಳಿಗನುಗುಣವಾಗಿ ಸೂಕ್ತ ಕಾರ್ಯಕ್ರಮ ಅಳವಡಿಸಿ ಈ ಧೋರಣೆಯನ್ನು ಒಪ್ಪಿ ಅದರ ಹಾದಿಯಲ್ಲಿ ಸರಿಯಾದ ಹೆಜ್ಜೆ ಇಡಬೇಕು. ಹೀಗೆ ಮಾಡಲಾಗುತ್ತಿದೆಯೋ ಎಂಬುದನ್ನು ಪರಿಶೀಲಿಸಬೇಕಾಗಿದೆ. ಈಗ ಕಾರ್ಮಿಕ ಇಲಾಖೆ ಮಂತ್ರಿ

(ಶ್ರೀ ಎಂ. ಎಸ್. ಕೃಷ್ಣನ್)

ಗಳಾಗಿರುವವರಿಗೆ ಟ್ರೇಡ್ ಯೂನಿಯನ್ನಿನ ಅನುಭವ ಕೂಡ ಇದೆ, ಇಂಥವರು ಈ ಇಲಾಖೆ ಮಂತ್ರಿಗಳಾಗಿರುವುದು ಸಂತೋಷದ ವಿಷಯವಾಗಿದೆ. ಹಿಂದೆ ಈ ಇಲಾಖೆ ಮಂತ್ರಿಗಳಾಗಿದ್ದ ಪುಟ್ಟಸ್ವಾಮಿಯವರಿಗೂ ಮತ್ತು ಈಗಿನ ಮಂತ್ರಿಗಳಿಗೂ ಸ್ವಲ್ಪ ಅನುಭವವಿದೆ. ಈಗಿನ ಧೋರಣೆಗೂ ಹಿಂದಿದ್ದ ಧೋರಣೆಗೂ ವ್ಯತ್ಯಾಸವಿದೆ. ಈಗಿನ ಮಂತ್ರಿಗಳು ಎರಡು ಮೂರು ವಿಷಯಗಳಲ್ಲಿ ದಿಟ್ಟ ಕಾರ್ಯಕ್ರಮ ಕೈಗೊಂಡಿದ್ದಾರೆ. ಆಗಾಗ್ಯೆ ಮಾಲೀಕರು ಮತ್ತು ಕಾರ್ಮಿಕರಿಗೆ ತಿಕ್ಕಾಟ ಬರುವುದುಂಟು. ಆ ಸಂದರ್ಭದಲ್ಲಿ ನನ್ನ ಅನುಭವದ ಪ್ರಕಾರ ಯಾವಾಗಲೂ ಮಂತ್ರಿಗಳು ಮಧ್ಯೆ ಪ್ರವೇಶಿಸುವ ಪ್ರವೃತ್ತಿ ಅವರಲ್ಲಿದೆ. ಹಿಂದಿನ ಮಂತ್ರಿಮಂಡಲದಲ್ಲಿ ಈ ಕೆಲಸವನ್ನು ಅಧಿಕಾರಿಗಳಿಗೆ ಬಿಡುತ್ತಿದ್ದರು. ಹಿಂದೆ ಕನ್‌ಸಿಲಿಯೇಷನ್ ಆಫೀಸರು. ಲೇಬರ್ ಕಮೀಷನರು ತೀರ್ಮಾನಮಾಡುತ್ತಿದ್ದರು. ಆದಾದಮೇಲೆ ಮಂತ್ರಿಗಳು ಒಂದು ನಿರ್ಣಯ ತೆಗೆದುಕೊಳ್ಳುತ್ತಿದ್ದರು. ಕಾರ್ಮಿಕರ ಸಂಬಂಧ ಅಷ್ಟಾಗಿ ಹಿಂದೆ ಮಂತ್ರಿಗಳಿಗೆ ಇರಲಿಲ್ಲ. ಇದರಿಂದ ಸರಿಯಾದ ತೀರ್ಮಾನವಾಗುತ್ತಿರಲಿಲ್ಲ. ಹೀಗಾದರೆ ಅಶಾಂತಿ ಹರಡಲು ಅವಕಾಶವಾಗುವುದು, ಹಿಂದೆ ಆ ರೀತಿ ಆಗುತ್ತಿತು.

3-00 P.M.

ಕಾರ್ಮಿಕರಿಗೂ ಮಾಲೀಕರಿಗೂ ವಿವಾದಗಳು ಎದ್ದಾಗ, ತೊಂದರೆಗಳು ಸಂಭವಿಸಿದಾಗ ಸರ್ಕಾರದ ಮಂತ್ರಿಗಳು ಮುಂದೆ ಬಂದು ಮಾಲೀಕರನ್ನೂ ಕಾರ್ಮಿಕರನ್ನೂ ಕರೆಸಿ ಮಾತನಾಡಿದ್ದು ಉಂಟು. ಈ ಒಂದು ಕಾರ್ಯವನ್ನು ಮಾನ್ಯ ಮಂತ್ರಿಗಳು ಮಾಡುತ್ತಿದ್ದಾರೆ, ಅದಕ್ಕಾಗಿ ನಾನು ಅವರಿಗೆ ವಂದನೆಗಳನ್ನು ಸಲ್ಲಿಸುತ್ತೇನೆ. ಇದರಲ್ಲಿ ಮುಖ್ಯವಾಗಿ ಮೈಸೂರು ಮಿಷನರಿ ಕಾರ್ಖಾನೆ ಕಾರ್ಮಿಕರ ಪ್ರಶ್ನೆ ಈಗ ಬಂದಿದೆ. ಬೆಂಗಳೂರಿನಲ್ಲಿರುವ ಈ ಒಂದು ಕಾರ್ಖಾನೆಯಲ್ಲಿ 380 ಜನರನ್ನು ಕಿತ್ತು ಹಾಕಿಬಿಟ್ಟಿದ್ದಾರೆ. ಈ ದಿವಸ ಅವರು ಬಹಳ ತೊಂದರೆಪಡುತ್ತಿದ್ದಾರೆ. ಇದರಲ್ಲೂ ಕೂಡ ಆ ಕಾರ್ಖಾನೆಯ ಮಾಲೀಕರನ್ನೂ ಕಾರ್ಮಿಕರನ್ನೂ ಕರೆಸಿ ಮಾತನಾಡಿದರು. ಈ ವಿಷಯವನ್ನು ಇತ್ಯರ್ಥ ಮಾಡುವುದಕ್ಕೆ ಪ್ರಯತ್ನ ಮಾಡಿದರೂ ಪೂರ್ತಿ ಇತ್ಯರ್ಥವಾಗಲಿಲ್ಲ. ಆ ಮಾಲೀಕ ಮಾನ್ಯ ಮಂತ್ರಿಗಳಿಗೆ ಆಶ್ವಾಸನೆ ಕೊಟ್ಟನು. ಮಾನ್ಯ ಮಂತ್ರಿಗಳು ಆ ಮಾಲೀಕನಿಗೆ ಹೇಳಿದರು. ಕಾರ್ಖಾನೆಯಲ್ಲಿರುವ ಎಲ್ಲ ಕೆಲಸಗಾರರನ್ನು ತೆಗೆದುಕೊಳ್ಳಬೇಕು, ಮುಚ್ಚಿದ ಫ್ಯಾಕ್ಟರಿಯನ್ನು ತೆಗೆಯಬೇಕು, ವಿನಾ ಕಾರಣ ಯಾರನ್ನೂ ತೆಗೆಯಕೂಡದು ಎಂದು ಹೇಳಿದ್ದಕ್ಕೆ ಆ ಮಾಲೀಕ ಭರವಸೆ ಕೊಟ್ಟನು. ಆ ಭರವಸೆ ಲಿಖಿತಮೂಲಕವಾಗಿ ನಮಗೂ ಕೊಟ್ಟರು. ಆದರೆ ಆ ಭರವಸೆ ಕಾರ್ಯಗತವಾಗಲಿಲ್ಲ. ಆದುದರಿಂದ ಈವೊತ್ತು ಮೈಸೂರು ಮೆಷಿನರಿ ಕಾರ್ಖಾನೆ ಕಾರ್ಮಿಕರು ವಿಧಾನಸೌಧದ ಹತ್ತಿರ ಉಪವಾಸ ಮಾಡುವ ಪರಿಸ್ಥಿತಿ ಬಂದಿದೆ. ಇದು ಮಾನ್ಯ ಮಂತ್ರಿಗಳ ಗಮನಕ್ಕೆ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ಈಗಲೂ ಸಹ ಮಂತ್ರಿಗಳು ಆ ಮಾಲೀಕನನ್ನು ಕರೆದು ನೀನು ತಪ್ಪಿ ನಡೆದಿದ್ದೀಯೇ ನೀನು ಕೊಟ್ಟ ಭರವಸೆ ಕಾರ್ಯಗತ ಮಾಡಿಲ್ಲ ಎಂದು ಹೇಳಿ ಇದನ್ನು ಕಾರ್ಯಗತ ಮಾಡಿಸುವ ಜವಾಬ್ದಾರಿ, ಮತ್ತು ಎದೆಗಾರಿಕೆ ತಮ್ಮಲ್ಲಿದೆ. ಇದರಲ್ಲಿ ಸರ್ಕಾರವೂ ಸಹಾಯ ಮಾಡಬೇಕು. ಅದರಲ್ಲೂ ಮಾನ್ಯ ಮುಖ್ಯಮಂತ್ರಿಗಳೂ ಮತ್ತು ಕೈಗಾರಿಕಾ ಮಂತ್ರಿಗಳೂ ಕೂಡ ಸಹಾಯ ಮಾಡಬೇಕು. ಯಾವನೇ ಮಾಲೀಕನಾಗಲಿ, ಅದು ಸರ್ಕಾರಿ ಕ್ಷೇತ್ರವೇ ಆಗಿರಲಿ, ಸಾರ್ವಜನಿಕ ಕ್ಷೇತ್ರವೇ ಆಗಿರಲಿ ತಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಸರ್ಕಾರ ಹಿಂಜರಿಯಬಾರದು. ಯಾವ ಮಾಲೀಕನೇ ಆಗಲಿ ಕೊಟ್ಟ ಭರವಸೆಯನ್ನು ಕಾರ್ಯರೂಪಕ್ಕೆ ತರದೇ ಹೋದರೆ ಆತನನ್ನು ಸರಿಯಾದ ಹದ್‌ಬಸ್ತಿನಲ್ಲಿ ತರುವ ಹತೋಟಿ ನಿಮ್ಮ ಹತ್ತಿರ ಇದೆ. ಕಾರ್ಮಿಕರಿಂದ ವಸೂಲ್ಮಾಡುವ ಪ್ರಾವಿಡೆಂಟ್ ಫಂಡ್ ಹಣ ತಿಂದು ಹಾಕಿದ್ದಾರೆ, ಜನಗಳ ಹಣ ತಿಂದು ಹಾಕಿ ಎಲ್ಲರಿಗೂ ಮೋಸ ಮಾಡಿದ್ದರೆ ಅವನ ಬಗ್ಗೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಿ. ಇದರ ಬಗ್ಗೆ ನೀವು ದಿಟ್ಟತನದಿಂದ ಕಾರ್ಯಕ್ರಮ ತೆಗೆದುಕೊಳ್ಳಬೇಕು. ಇದರ ಬಗ್ಗೆ ತಾವು ಸಹಾಯ ಮಾಡುವ ರಾಮೆಟೀರಿಯಲ್ಸ್ ಕೊಡುವುದಿಲ್ಲ ಎಂದು ಹೇಳಿ, ಪೋಲೀಸಿನವರ ರಕ್ಷಣೆ ಕೊಡುವುದಿಲ್ಲ ಎಂದು ಹೇಳಿ, ಎಲೆಕ್ಟ್ರಿಸಿಟಿ ಕೊಡುವುದಿಲ್ಲ ಎಂದು ಹೇಳಿ ಆವಾಗ ಮಾಲೀಕ ತನ್ನಷ್ಟಕ್ಕೆ ತಾನೆ ನಿಮ್ಮ ದಾರಿಗೇ ಬರುತ್ತಾನೆ. ಇದೇ ರೀತಿ ಮೈಸೂರು ರಾಜ್ಯದಲ್ಲಿರುವ ದೀಪಕ್ ಕೇಬಲ್ಸ್, ಎನ್.ಜಿ.ಇ.ಎಫ್. ಈ ಕಾರ್ಮಿಕರ ಬಗ್ಗೆ ಇರುವ ವಿವಾದಗಳು ಇತ್ಯರ್ಥವಾಗಲಿಲ್ಲ. ಇನ್ನು ಮಹದೇಶ್ವರ ಮಿಲ್ಸ್ ಕಾರ್ಖಾನೆಯದು ನಿನ್ನೆ ತಾನೇ ಇತ್ಯರ್ಥವಾಗಿದೆ ಎಂದು ಪತ್ರಿಕೆಯಲ್ಲಿ ಬಂದಿದೆ, ಆದುದರಿಂದ ಮಾಲೀಕರ ಅವ್ಯವಹಾರಗಳನ್ನು ಇತ್ಯರ್ಥ

ಮಾಡುವ ಮನೋಭಾವನೆಯನ್ನು ಮಾನ್ಯ ಮಂತ್ರಿಗಳು ಇಟ್ಟುಕೊಳ್ಳಬೇಕು. ತಾವು ಇದರ ಬಗ್ಗೆ ಯೋಜನೆ ಮಾಡಬೇಕು. ಈರೀತಿ ಮಾಡಿದರೆ ಬಂಡವಾಳಗಾರರು ತಮ್ಮ ಮೇಲೆ ಬೇಕಾದಷ್ಟು ಒತ್ತಡ ತರುತ್ತಾರೆ ಮತ್ತು ಪಾರ್ಟಿಯ ಮೇಲೆ ಕೂಡ ಒತ್ತಡ ತರುತ್ತಾರೆ. ಅದು ಒಂದಕ್ಕೂ ತಾವು ಮಣಿಯಬಾರದು. ನೀವು ಸರಿಯಾದ ದಾರಿಯಲ್ಲಿ ನಡೆದರೆ ನಿಮ್ಮ ಗುರಿಯನ್ನು ಮುಟ್ಟಬಹುದು. ಇಂತಹ ಕಠಿಣ ಸಮಸ್ಯೆಯನ್ನು ತಾವು ಎದುರಿಸಬೇಕು. ಈ ಒಂದು ಹಾದಿಯಲ್ಲಿ ಹೋಗಬೇಕೆಂದು ತಮ್ಮ ಗಮನವನ್ನು ಸೆಳೆಯಬಯಸುತ್ತೇನೆ. ಈವೊತ್ತಿನ ದಿವಸ ರಾಜಕೀಯ ಪರಿಸ್ಥಿತಿ ಹಿಂದೆ ಇದ್ದ ಹಾಗೆ ಇಲ್ಲ. ಸ್ವಲ್ಪಮಟ್ಟಿಗೆ ಬದಲಾವಣೆಯಾಗಿದೆ. ಹಿಂದೆ ತಮಗೆ ಗೊತ್ತಿರುವ ಹಾಗೆ ಇಂತಹ ಪ್ರಶ್ನೆಗಳನ್ನು ಇತ್ಯರ್ಥಮಾಡುವ ಮನೋಭಾವ ಕೇಂದ್ರ ಸರ್ಕಾರದಲ್ಲೂ ಕಡಿಮೆ ಇತ್ತು. ಹಿಂದೆ ಕಾರ್ಮಿಕರಿಗೆ ಅಷ್ಟೊಂದು ಬೆಂಬಲ ಕೊಡುತ್ತಾ ಇರಲಿಲ್ಲ. ಈಗ ಸ್ವಲ್ಪ ಮಟ್ಟಿಗೆ ಬದಲಾವಣೆಯಾಗಿದೆ. ಹಿಂದೆ ಮಾಲೀಕರ ಪರವಾಗಿದ್ದರು ಅಲ್ಲದೆ ತಮಗೆ ಬೇಕಾದ ಸಂಘಗಳಿಗೆ ಸಂಸ್ಥೆಗಳಿಗೆ ಮಾತ್ರ ಮಾನ್ಯತೆ ಸಿಕ್ಕುತ್ತಿತ್ತು. ಬೇರೆಯವರಿಗೆ ಮಾನ್ಯತೆ ಸಿಕ್ಕುತ್ತಿರಲಿಲ್ಲ. ಕೇಂದ್ರದಲ್ಲೂ ರಾಜ್ಯದಲ್ಲೂ ಈ ರೀತಿ ನಡೆಯುತ್ತಾ ಇತ್ತು ಎಂದು ಕೇಳಿದ್ದೇನೆ. ಆದರೆ ಕಳೆದ ಚುನಾವಣೆಯಿಂದೀಚೆಗೆ ಸ್ವಲ್ಪ ಬದಲಾವಣೆಯಾಗಿದೆ. ಕೇಂದ್ರ ಸರ್ಕಾರದ ಮಂತ್ರಿಗಳಾದ ಶ್ರೀ ಖಂಡಿಲ್ಕರ್‌ರವರು ಹೊಸ ದೃಷ್ಟಿಕೋನವನ್ನು ಹೊಂದಿದ್ದಾರೆ. ನಮ್ಮ ದೇಶದಲ್ಲಿರುವ ಅನೇಕ ಸಂಸ್ಥೆಗಳು ಅಂದರೆ ಐ. ಎನ್. ಟಿ. ಯು. ಸಿ. ಹಿಂದ್ ಮಜ್ದೂರ್ ಸಭಾ ಮತ್ತು ಇನ್ನು ಯಾವ ಯಾವ ಸಂಸ್ಥೆಗಳು ಇವೆ. ಅವನ್ನೆಲ್ಲಾ ಒಂದುಗೂಡಿಸಬೇಕು ಎಂದು ನ್ಯಾಷನಲ್ ಕೌನ್ಸಿಲ್ ಕೂಡ ಅಭಿಪ್ರಾಯಪಟ್ಟಿದೆ ಎಂದು ತಿಳಿದು ಬಂದಿದೆ. ಈರೀತಿ ಮಾಡಿದರೆ ಕೆಲವು ಸಮಸ್ಯೆಗಳನ್ನು ಬಗೆ ಹರಿಸುವುದಕ್ಕೆ ಅನುಕೂಲವಾಗುತ್ತದೆ. ಮುಖ್ಯವಾಗಿ 2-3 ವಿಷಯಗಳಲ್ಲಿ ಮಾತ್ರ ಕೈಗಾರಿಕಾ ಸಂಬಂಧವಾಗಿ ಹೇಳಬೇಕಾಗಿದೆ. ಕೇಂದ್ರ ಸರ್ಕಾರದವರು ಮತ್ತು ರಾಜ್ಯ ಸರ್ಕಾರದವರೂ ಕಾರ್ಮಿಕರ ಸಮಸ್ಯೆಗಳನ್ನು ಬಗೆಹರಿಸಬೇಕು ಎನ್ನುವ ದೃಷ್ಟಿಯಿಂದ ಒಂದು ವಿಷಯವನ್ನು ತಮ್ಮ ಗಮನಕ್ಕೆ ತರುತ್ತೇನೆ.

ಮೊಟ್ಟಮೊದಲನೆಯದಾಗಿ ಕಾರ್ಮಿಕರಿಗೂ ಮಾಲೀಕರಿಗೂ ಕೈಗಾರಿಕಾ ವಿವಾದಗಳು ಬಂದರೆ ಕಾರ್ಮಿಕರ ಹಿತದೃಷ್ಟಿಯನ್ನು ಇಟ್ಟುಕೊಂಡು ಕನ್‌ಸಿಲಿಯೇಟ್ ಮಾಡಬೇಕು. ಯಾವಾಗಲೂ ಇಂಥಾ ಸಂದರ್ಭದಲ್ಲಿ ಲೇಬರ್ ಕಮಿಷನರ್ ಸರಿಯಾದ ತೀರ್ಮಾನ ಕೊಡಬೇಕು. ಒಂದು ವೇಳೆ ತೀರ್ಮಾನ ಸರಿಯಾಗಿಲ್ಲದೇ ಹೋದರೆ ಆವಾಗ ಕಾರ್ಮಿಕರಿಗೆ ಅಶಾಂತಿ ಮತ್ತು ಅತೃಪ್ತಿ ಉಂಟಾಗಿ ಕೈಗಾರಿಕಾ ರಂಗದಲ್ಲಿ ಅಶಾಂತಿ ಹೆಚ್ಚಾಗುವುದಕ್ಕೆ ಅವಕಾಶವಾಗುತ್ತದೆ. ಈ ರೀತಿ ಅಶಾಂತಿ ಉಂಟಾದರೆ ಆವಾಗ ಟ್ರೇಡ್ ಯೂನಿಯನ್ ಚಳುವಳಿ ಮಾಡಬೇಕಾಗಿ ಬರುತ್ತದೆ. ಈ ವೊತ್ತಿನ ದಿವಸ ಯಾವ ವಿಧದಲ್ಲೂ ಕೈಗಾರಿಕಾ ಕಾರ್ಮಿಕರಿಗೆ ಅತೃಪ್ತಿಯನ್ನು ಉಂಟುಮಾಡಬಾರದು. ಈವೊತ್ತು ಯಾವ ಟೆಕ್ಸ್‌ಟೈಲ್ ಕೈಗಾರಿಕೆಯಲ್ಲೇ ಆಗಲಿ, ಪೇಪರ್ ಕಾರ್ಖಾನೆಯಲ್ಲೇ ಆಗಲೀ, ಸಿಮೆಂಟ್ ಕಾರ್ಖಾನೆಯಲ್ಲೇ ಆಗಲಿ, ಷುಗರ್ ಫ್ಯಾಕ್ಟರಿಯಲ್ಲೇ ಆಗಲಿ, ಇಂತಹ ವಿವಾದಗಳು ಬಂದರೆ ಅಲ್ಲಿಯ ಮಾಲೀಕರನ್ನೂ ಕಾರ್ಮಿಕರನ್ನೂ ಕರೆಸಿಕೊಂಡು ತೀರ್ಮಾನ ಮಾಡಬೇಕು. ಆ ಕಾರ್ಮಿಕರಿಗೆ ಯಾವ ವಿಧದಲ್ಲೂ ಅತೃಪ್ತಿಯನ್ನು ಬೆಳೆಸುವುದಕ್ಕೆ ಅವಕಾಶ ಕೊಡಬಾರದು. ಈವೊತ್ತಿನ ದಿವಸ ಕಾರ್ಮಿಕರಿಗೆ ಆರ್ಬಿಟ್ರೇಷನ್‌ನಲ್ಲಿ ನಂಬಿಕೆ ಇಲ್ಲ, ಅಡ್ಜುಡಿಕೇಷನ್‌ನಲ್ಲಿ ನಂಬಿಕೆ ಇಲ್ಲ. ಮಾನ್ಯ ರಾಷ್ಟ್ರಾಧ್ಯಕ್ಷರಾದ ಗಿರಿಯವರೇ ಅವು ಎನಿಮಿ ನಂಬರ್ ಒನ್ ಎಂದು ಹೇಳಿದ್ದಾರೆ. ಏತಕ್ಕೆಂದರೆ ಈ ಕಾರ್ಮಿಕರ ವಿವಾದಗಳು ಆರ್ಬಿಟ್ರೇಷನ್‌ಗೆ ಹಾಕಿದರೆ ಈ ಸಣ್ಣ ಕೈಗಾರಿಕೆಗಳ ಬಗ್ಗೆ ತೀರ್ಮಾನಕೊಡಬೇಕಾದರೆ ಒಂದು ವರ್ಷವಾದರೂ ಆಯಿತು ಎರಡೂ ವರ್ಷವಾದರೂ ಆಯಿತು. ಬೇಗನೆ ತೀರ್ಮಾನವಾಗುವುದಿಲ್ಲ. ಆದುದರಿಂದ ಇಂಡಸ್ಟ್ರಿಯಲ್ ರಿಲೇಷನ್ ಮೆಷಿನರಿ ಸರಿಯಾಗಿ ಕೆಲಸ ಮಾಡಬೇಕು. ಈಗ ಅಡ್ಜುಡಿಕೇಷನ್‌ಗೆ ಹೆಚ್ಚಿನ ಪ್ರಾಮುಖ್ಯತೆ ಕೊಡುತ್ತಾ ಇಲ್ಲ. ಈಗ ಅದಕ್ಕೆ ಸರಿಯಾದ ಸ್ಥಾನವಿಲ್ಲ. ನ್ಯಾಷನಲ್ ಕೌನ್ಸಿಲ್‌ನವರು ಇದರ ಬಗ್ಗೆ ಚರ್ಚೆ ಮಾಡಿ ಹಲವಾರು ಸೂಚನೆಗಳನ್ನು ಕೊಟ್ಟಿದ್ದಾರೆ. ಅದರಲ್ಲಿ ನನಗೆ ತಿಳಿದಮಟ್ಟಿಗೆ ಹೊಸ ಮೆಷಿನರಿ ಟ್ರೈಪಾರ್ಟಿಯೇಟ್ ಇಂಡಸ್ಟ್ರಿಯಲಿಸ್ಟ್ಸ್ ಕಾನ್‌ಫರೆನ್ಸ್‌ಗಳು ಮಾಡಿ ಈ ಇಂಡಸ್ಟ್ರಿಯಲ್ ಡಿಸ್ಪ್ಯೂಟ್ಸ್‌ಗಳನ್ನು ಬೇಗನೆ ತೀರ್ಮಾನ ಮಾಡಬೇಕು ಎಂದು ಮಾಡಿದ್ದಾರೆ. ಗಜೇಂದ್ರಗಡ್ಕರ್ ಸಮಿತಿಯಲ್ಲಿ ಲೇಬರ್ ಕಮಿಷನರ್ ಕೂಡ ಹೇಳಿದ್ದಾರೆ. ಆ ಮನೋಭಾವವನ್ನು ಮೈಸೂರು ರಾಜ್ಯದಲ್ಲಿ ಬೆಳೆಸಬೇಕು. ಇಲ್ಲಿ ಹಲವಾರು ಸಮಸ್ಯೆಗಳಿವೆ. ಟೆಕ್ಸ್‌ಟೈಲ್ ಕೈಗಾರಿಕೆಯನ್ನು ತೆಗೆದುಕೊಳ್ಳಿ. ಮೈಸೂರು ರಾಜ್ಯದಲ್ಲಿ ಟೆಕ್ಸ್‌ಟೈಲ್ ಕಾರ್ಮಿಕರ ಪರಿಸ್ಥಿತಿ ಬೇರೆ ಎಲ್ಲ ರಾಜ್ಯಗಳಿಗಿಂತ ಅಧೋಗತಿಯಲ್ಲಿದೆ. ದಾವಣಗೆರೆಯಲ್ಲಿ ಮಾಲೀಕರು ಟೆಕ್ಸ್‌ಟೈಲ್ ವೇಜ್ ಬೋರ್ಡ್ ತೀರ್ಮಾನವನ್ನು ಜಾರಿಗೆ ತೆಗೆದುಕೊಂಡು ಬಂದಿಲ್ಲ. ಹಿಂದೆ

(ಶ್ರೀ ಎಂ. ಎಸ್. ಕೃಷ್ಣನ್)

ಶ್ರೀ ನಿಜಲಿಂಗಪ್ಪನವರು ಇದ್ದಾಗ ಅವರು ಟೆಕ್ಸ್‌ಟೈಲ್ ಕಾರ್ಮಿಕರಿಗೆ ಬೆಂಬಲ ಕೊಡುತ್ತಿದ್ದಾರೆ, ದಾವಣಗೆರೆಯಲ್ಲಿ ಏನೂ ಮಾಡುವುದಕ್ಕಾಗುವುದಿಲ್ಲವೆಂದು ಹಿಂದೆ ಹೇಳುತ್ತಿದ್ದರು. ತಾವು ಈಗ ಅಧಿಕಾರಕ್ಕೆ ಬಂದಿದ್ದೀರಿ. ದಾವಣಗೆರೆ ಕಾರ್ಮಿಕರ ಪರಿಸ್ಥಿತಿ, ಹುಬ್ಬಳ್ಳಿ ಟೆಕ್ಸ್‌ಟೈಲ್ ಕಾರ್ಮಿಕರ ಪರಿಸ್ಥಿತಿ, ಬೆಂಗಳೂರು ಸೂರ್ಯೋದಯ ಮಿಲ್ಸ್ ಕಾರ್ಮಿಕರ ಪರಿಸ್ಥಿತಿ, ಕೃಷ್ಣ ವೀವಿಂಗ್ ಮಿಲ್ಸ್ ಕಾರ್ಮಿಕರ ಪರಿಸ್ಥಿತಿಯನ್ನು ನೋಡಿದರೆ ವೇಜ್ ಬೋರ್ಡ್ ತೀರ್ಮಾನವನ್ನು ಜಾರಿಗೆ ತಂದಿಲ್ಲ. ಯಾವುದನ್ನು ಸರ್ಕಾರ ಒಪ್ಪಿಕೊಂಡಿದೆಯೋ ಅದನ್ನು ಕೂಡ ಜಾರಿಗೆ ತಂದಿಲ್ಲ.

ಇಂಜಿನಿಯರಿಂಗ್ ಕಾರ್ಮಿಕರ ಬಗ್ಗೆ ಕೂಡ ಅದೇ ರೀತಿಯಾಗಿದೆ. ಅವರಿಗೆ ಒಂದು ವೇಜ್ ಬೋರ್ಡ್ ಮಾಡಿದರು. ವೇಜ್ ಬೋರ್ಡ್ ಮಾಡಿ ಐದು ವರ್ಷವಾದರೂ ಅದನ್ನು ಜಾರಿಗೆ ತರಬೇಕಾದರೆ, ರಾಜ್ಯ ಮಟ್ಟದಲ್ಲಿ ಒಂದು ಟ್ರೈ ಪಾರ್ಟೈಟ್ ಕಮಿಟಿಯನ್ನು ಮಾಡಿದರು. ಅವರಲ್ಲಿ ನಾನೂ ಇದ್ದೆ, ಲೇಬರ್ ಕಮೀಷನರು ಚೇರ್‌ಮನ್‌ರಾಗಿದ್ದರು. ಅವರು ನಮ್ಮನ್ನು ಕರೆಸಿ ಮಾತ ನಾಡಿ ಚರ್ಚೆ ಮಾಡಿದ್ದರೂ ಕೂಡ ಇನ್ನೂ ಇತ್ಯರ್ಥವಾಗುವುದಕ್ಕೆ ಸಾಧ್ಯವಾಗಿಲ್ಲ. ನಾವು ಹೇಳುವು ದನ್ನು ಮಾಲೀಕರು ಒಪ್ಪಿಕೊಳ್ಳುವುದಕ್ಕೆ ತಯಾರಿಲ್ಲ. ವೇಜ್‌ಬೋರ್ಡ್ ಏನು ತೀರ್ಮಾನ ಮಾಡಿದೆ ಅದಕ್ಕಿಂತ ಕಡಿಮೆ ಕೊಡಲು ಮಾಲೀಕರು ಪ್ರಯತ್ನ ಮಾಡುತ್ತಾರೆ. ಚೇರ್‌ಮನ್ ಅವರ ಸಿಫಾ ರಸುಗಳು, ವರ್ಕರ್ಸ್‌ರೆಕಮೆಂಡೇಷನ್ ಮತ್ತು ಇಂಡಿಪೆಂಡೆಂಟ್ ಮೆಂಬರ್ಸ್ ರೆಕಮೆಂಡೇಷನ್ ಎಂದು ಮೂರು ರಿಪೋರ್ಟ್ ಇದೆ. ಈ ಮೂರರಲ್ಲಿ ಚೇರ್‌ಮನ್ ಅವರ ರೆಕಮೆಂಡೇಷನ್ಸ್ ಜಾರಿಗೆ ತೆಗೆದುಕೊಂಡು ಬನ್ನಿ ಎಂದು ಸರ್ಕ್ಯುಲರ್ ಹೊರಡಿಸಿದರೆ ಇದುವರೆಗೂ ಜಾರಿಗೆ ಬಂದಿಲ್ಲ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗೇರು ಬೀಜ ಕಾರ್ಖಾನೆಯ ಕೆಲಸಗಾರರ ಪರಿಸ್ಥಿತಿಯೂ ಇದೇ ಆಗಿದೆ. ಅಲ್ಲಿ ಕಾರ್ಮಿಕರ ಪರಿಸ್ಥಿತಿ ಮಾತ್ರವಲ್ಲ ಕೈಗಾರಿಕೆಯ ಪರಿಸ್ಥಿತಿಯನ್ನೂ ಯೋಚನೆ ಮಾಡಬೇಕಾದ ಸ್ಥಿತಿ ಬಂದಿದೆ. ಕೇರಳದಲ್ಲಿ ಕ್ಯಾಷ್ಯೂ ಕಾರ್ಪೊರೇಷನ್ ಮಾಡಿ ಕಾರ್ಮಿಕರ ಹಿತವನ್ನು ರಕ್ಷಣೆ ಮಾಡಿದ್ದಾರೆ, ಸರಿಯಾದ ಮೆಷಿನರಿ ಏರ್ಪಾಡು ಮಾಡಿದ್ದಾರೆ. ನಮ್ಮ ರಾಜ್ಯದಲ್ಲಿ ಬೀಡಿ ಕೆಲಸಗಾರರು ಸಹಸ್ರಾರು ಜನರಿದ್ದಾರೆ. ನನಗಿಂತ ನಮ್ಮ ಮಂತ್ರಿಗಳಿಗೇ ಈ ಕಾರ್ಮಿಕರ ವಿಚಾರ ಜಾಸ್ತಿ ಗೊತ್ತಿದೆ. ಅವರು ಬೀಡಿ ಕಾರ್ಮಿಕರ, ಯೂನಿಯನ್ನಿನ ಅಧ್ಯಕ್ಷ ರಾಗಿದ್ದರು. ಅವರ ಪರಿಸ್ಥಿತಿ ಕೂಡ ಚಿಂತಾಜನಕವಾಗಿದೆ. ಬೀಡಿ ಪ್ರಿಮಿಸಸ್ ಆಕ್ಟ್ ಇದೆ. ಆ ಕಾನೂನಿನ ಬಗ್ಗೆ ಹೈಕೋರ್ಟಿನಲ್ಲಿ ಒಂದು ವಿವಾದವಿದ್ದು, ಇಂಡಸ್ಟ್ರಿಯಲ್ ಡಿಸ್‌ಪ್ಯೂಟ್ಸ್ ಆಕ್ಟ್ ಬೀಡಿ ಕೆಲಸಗಾರರಿಗೂ ಅನ್ವಯವಾಗುತ್ತದೆ ಎಂದು ಹೈಕೋರ್ಟಿನಲ್ಲಿ ತೀರ್ಮಾನ ಕೊಟ್ಟಿದ್ದಾರೆ. ಆದರೂ ಕೂಡ ಆ ವಿಚಾರ ಸುಪ್ರೀಂ ಕೋರ್ಟಿಗೆ ಹೋಗಿದ್ದು ಇನ್ನೂ ಇತ್ಯರ್ಥವಾಗದೆ ಇರುವ ಪರಿಸ್ಥಿತಿ ಇದೆ. ಇದರಿಂದ ಬೀಡಿ ಕೆಲಸಗಾರರಿಗೆ ಸಿಕ್ಕಬೇಕಾದ ಸೌಲಭ್ಯಗಳು ಸಿಕ್ಕುತ್ತಿಲ್ಲ.

ಸಕ್ಕರೆ ಕಾರ್ಖಾನೆ ಕಾರ್ಮಿಕರ ಸ್ಥಿತಿ ಕೂಡ ಹಾಗೆಯೇ ಇದೆ. ವೇಜ್ ಬೋರ್ಡ್ ತೀರ್ಮಾನ ಕೊಟ್ಟಿದ್ದರೂ ಅದು ಜಾರಿಗೆ ಬಂದಿಲ್ಲ. ಸಕ್ಕರೆ ಕಾರ್ಖಾನೆಯಲ್ಲಿ ಕೆಲಸ ಮಾಡುವ ಕಾರ್ಮಿಕರಲ್ಲದೆ ಇತರ ಎಲ್ಲ ಕೈಗಾರಿಕೆಗಳಲ್ಲಿಯೂ ಸಮಸ್ಯೆಗಳಿವೆ. ಸಮಸ್ಯೆಗಳನ್ನು ಯಾವ ರೀತಿ ಬಗೆಹರಿಸುತ್ತಾರೆ ಎನ್ನುವುದು ಮುಖ್ಯವಾದ ಪ್ರಶ್ನೆ. ಇದಕ್ಕೆ ಸರ್ಕಾರ ಒಂದು ಹೊಸ ಮಾರ್ಗ ದಲ್ಲಿ ಹೋಗಬೇಕು. ಅದೇನೆಂದರೆ ಕಾರ್ಮಿಕರ ಪ್ರತಿನಿಧಿ ಮತ್ತು ಮಾಲೀಕರ ಪ್ರತಿನಿಧಿ ಇಬ್ಬರನ್ನೂ ಕರೆಸಿ ಬೈಪಾರ್ಟೈಟ್ ನೆಗೋಷಿಯೇಷನ್ ಮಾಡುವುದಕ್ಕೆ ಮಾನ್ಯ ಮಂತ್ರಿಗಳು ಮತ್ತು ಲೇಬರ್ ಇಲಾಖೆಯವರು ಪ್ರಯತ್ನ ಮಾಡಬೇಕು. ಆರೀತಿ ಇನಿಷಿಯೇಟಿವ್ ತೆಗೆದುಕೊಂಡು ಸ್ಟೀಲ್ ಇಂಡಸ್ಟ್ರಿಯನ್ನು ಮಾಡುವುದಕ್ಕೆ ಸಾಧ್ಯವಾದರೆ ನಮ್ಮ ರಾಜ್ಯದಲ್ಲಿ ಏಕೆ ಮಾಡುವುದಕ್ಕಾಗುವುದಿಲ್ಲ ಎನ್ನುವುದು ಅರ್ಥವಾಗುವುದಿಲ್ಲ. ಇಲ್ಲಿಯೂ ಮಾಡುವುದಕ್ಕೆ ಸಾಧ್ಯವಿದೆ. ಸರ್ಕಾರದಿಂದ ಇನಿಷಿ ಯೇಟಿವ್ ಬಂದರೆ ಆಗ ಮಾತ್ರ ಇದನ್ನು ಇತ್ಯರ್ಥ ಮಾಡುವುದಕ್ಕೆ ಸಾಧ್ಯ. ಇವರು ಸೇರಿ ಮಾತ ನಾಡಿದಾಗ ಅವರಲ್ಲಿ ಏನಾದರೂ ತಕರಾರು ಬಂದು, ಯಾವುದಾದರೂ ಸಮಸ್ಯೆ ಇತ್ಯರ್ಥವಾಗದೆ ಇದ್ದರೆ ಅಂಥ ಸಂದರ್ಭದಲ್ಲಿ ಮಂತ್ರಿಗಳು ಮಧ್ಯೆ ಪ್ರವೇಶಿಸಿ ಇರಬಹುದಾದ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಕೂಡ ಸಾಧ್ಯವಾಗುತ್ತದೆ. ಆ ದಾರಿಯಲ್ಲಿ, ಆ ದಿಸೆಯಲ್ಲಿ ಮಾನ್ಯ ಮಂತ್ರಿಗಳು ಮತ್ತು ಸರ್ಕಾರ ಹೋಗಬೇಕೆಂಬುದು ನನ್ನ ಅಭಿಪ್ರಾಯ. ಹೀಗಾದರೆ ಕೈಗಾರಿಕಾ ಅಶಾಂತಿ ಸ್ವಲ್ಪ ಮಟ್ಟಿಗೆ ಕಡಮೆಯಾಗುತ್ತದೆ. ಇದರಿಂದ ಕಾರ್ಮಿಕರ ಪರಿಸ್ಥಿತಿಯೂ ಸ್ವಲ್ಪಮಟ್ಟಿಗೆ ಉತ್ತಮಗೊಳ್ಳುತ್ತದೆ. ಆದರೆ ಈ ದಾರಿಯಲ್ಲಿ ಹೋಗುವುದಕ್ಕೆ ಬರೀ ಮಂತ್ರಿಗಳು ಇನಿಷಿಯೇಟಿವ್ ತೆಗೆದುಕೊಂಡರೆ ಸಾಲದು, ಲೇಬರ್ ಇಲಾಖೆ ಕೂಡ ಇದರ ಕಡೆಗೆ ಗಮನ ಕೊಡಬೇಕು. ಅದರ ಎನ್‌ಟೈರ್ ಔಟ್‌ಲುಕ್, ಅಪ್ರೋಚ್, ಓರಿಯೆಂಟೇಷನ್ ಇವುಗಳಲ್ಲಿ ಬದಲಾವಣೆಯಾಗಬೇಕು. ಈ

ಹೊತ್ತು ಇರುವ ಅಪ್ರೋಚ್ ಮತ್ತು ಓರಿಯೆಂಟೇಷನ್ ಇದ್ದರೆ ಯಾರೇ ಅಧಿಕಾರಿಗಳನ್ನು ತೆಗೆದು ಕೊಂಡು ಬಂದರೂ ಪ್ರಶ್ನೆ ಇತ್ಯರ್ಥವಾಗುವುದಿಲ್ಲ. ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಹೊಸ ಅಪ್ರೋಚ್ ಇರಬೇಕು ಎನ್ನುವುದನ್ನು ಸರ್ಕಾರ ಪರಿಗಣಿಸಬೇಕು, ಮಂತ್ರಿಗಳು ನೋಡಬೇಕು, ಬೇರೆಯವರಿಗೆ ಹೇಳಬೇಕು. ಲೆಕ್ಚರ್ ಸ್ಟಡಿ ಕ್ಲಾಸಸ್, ಸೆಮಿನಾರ್ ಏನು ಬೇಕಾದರೂ ಮಾಡಿ ತಿಳುವಳಿಕೆಯನ್ನು ಕೊಡಬೇಕಾಗಿದೆ. ಹೊಸ ಪರಿಸ್ಥಿತಿಯೊಳಗೆ ಅವರೆಲ್ಲರಿಗೂ ಸಹ ಸಮತಾವಾದ ಎಂದರೆ ಏನು ಎಂದು ಹೇಳಬೇಕೆನ್ನುವುದು ನನ್ನ ಸ್ಪಷ್ಟವಾದ ಅಭಿಪ್ರಾಯ. ಅನೇಕರಿಗೆ ಈ ಸಮತಾವಾದದ ವಿಚಾರ ಗೊತ್ತಿಲ್ಲ. ವರ್ಕಿಂಗ್ ಕ್ಲಾಸಿಗೂ ಸಮತಾವಾದಕ್ಕೂ ಸಂಬಂಧವಿದೆ ಎಂದು ಅನೇಕರಿಗೆ ಗೊತ್ತಿಲ್ಲ. ರೀಓರಿಯೆಂಟೇಷನ್ ಮಾಡಿದರೆ ಮಾತ್ರ ಈ ಪ್ರಶ್ನೆ ಸರಿಯಾಗಿ ಇತ್ಯರ್ಥವಾಗುವುದಕ್ಕೆ ಸಾಧ್ಯ.

ಸಂಘಗಳಿಗೆ ಮಾನ್ಯತೆಯನ್ನು ಕೊಡುವ ವಿಷಯ. ರೆಕಗ್ನಿಷನ್ ಟು ಟ್ರೇಡ್ ಯೂನಿಯನ್ಸ್ ಎನ್ನುವುದರ ಬಗ್ಗೆ ಎಲ್ಲ ಮಂತ್ರಿಗಳೂ ಹೇಳಿರುವುದನ್ನು ಕೇಳಿದ್ದೇನೆ. ಇಂಟರ್ ಯೂನಿಯನ್ ರೈವಲ್ರಿ ಇದೆ, ಕಾರ್ಮಿಕ ನಾಯಕರಲ್ಲಿ ತಿಕ್ಕಾಟವಿದೆ, ರಾಜಕೀಯ ತರುತ್ತಾರೆ ಜಗಳವಾಡುತ್ತಾರೆ. ನಾವು ಏನು ಮಾಡುವುದಕ್ಕಾಗುತ್ತದೆ, ಅವರೆಲ್ಲ ಸರಿಹೋದರೆ ನಾವೂ ಸರಿಹೋಗುತ್ತೇವೆನ್ನುವ ಅಭಿಪ್ರಾಯವನ್ನು ಅನೇಕ ಮಂತ್ರಿಗಳು ಕೊಡುತ್ತ ಬಂದಿದ್ದಾರೆ. ಈ ವಿಷಯವನ್ನು ಪರಿಶೀಲನೆ ಮಾಡಿ ಈವಾಗ ಎಲ್ಲಿಗೆ ಬಂದಿದ್ದೇವೆಂದರೆ ಕಾರ್ಮಿಕರ ಮುಖಂಡರು ಸೇರಿ ಕೆಲವು ಅಂಶಗಳ ಬಗ್ಗೆ ಒಪ್ಪಂದ ಮಾಡಿಕೊಂಡಿದ್ದಾರೆ. ಪೂರ್ತಿ ಒಪ್ಪಂದವಾಗಿಲ್ಲ, ಅದರ ವಿವರಗಳನ್ನು ಇಲ್ಲಿ ಹೇಳು ವುದಕ್ಕೆ ಹೋಗುವುದಿಲ್ಲ. ನಮ್ಮಲ್ಲಿ ಬಹಳ ಜಟಿಲವಾದ ಸಮಸ್ಯೆ ಬಂದಿದೆ. ಉದಾಹರಣೆಗೆ ಎಚ್.ಎಂ.ಟಿ. ಯಲ್ಲಿ ಎಂಪ್ಲಾಯೀಸ್ ಅಸೋಸಿಯೇಷನ್ ಇದೆ, ಕಾರ್ಮಿಕರ ಸಂಘ ಎಂದು ಇದೆ. ಎಂಪ್ಲಾಯೀಸ್ ಅಸೋಸಿಯೇಷನ್ ಹಳೆಯ ಸಂಘ, ಮೊದಲಿನಿಂದಲೂ ಇದೆ. ಕಾರ್ಮಿಕರ ಸಂಘ ನಂತರ ಪ್ರಾರಂಭವಾದುದು. ಕಾರ್ಮಿಕರ ಸಂಘಕ್ಕೆ ಮಾನ್ಯತೆಯನ್ನು ಕೊಟ್ಟಿದ್ದಾರೆ. ರಿಜಿಸ್ಟ್ರೇಷನ್ ಆಗಿದ್ದುದು ಕ್ಯಾನ್ಸಲ್ ಆಯಿತು ಎಂದು ಗೊತ್ತಾಗಿದೆ. 1968ನೇ ಇಸವಿಯಿಂದಲೂ ಕೋಡ್ ಆಫ್ ಡಿಸಿಪ್ಲಿನ ಮುಂತಾದ ಬಗ್ಗೆ ವೆರಿಫೈ ಮಾಡಿ ಎಂದು ಬರೆದಾಗ ವೆರಿಫಿಕೇಷನ್ ಮಾಡಿದರು. 1968ರಿಂದ 1970ರ ವರೆಗೂ ವೆರಿಫಿಕೇಷನ್ ನಡೆಯಿತು. ಕಾರ್ಮಿಕ ಸಂಘದವರು ಲೆಕ್ಕಪುಸ್ತಕ ಏನೂ ಕೊಡಲಿಲ್ಲ. ಎಂಪ್ಲಾಯೀಸ್ ಅಸೋಸಿಯೇಷನ್‌ನವರು ಕೊಟ್ಟರು. ಮಾನ್ಯ ಪುಟ್ಟಸ್ವಾಮಿಯವರು ಮಂತ್ರಿಗಳಾಗಿದ್ದಾಗ ನಾನು ಒಂದು ಪ್ರಶ್ನೆ ಕೇಳಿದೆ, ಯಾರದು ಹೆಚ್ಚು ಸದಸ್ಯ ಸಂಖ್ಯೆ ಇದೆ ಎಂದು ಕೇಳಿದ್ದಕ್ಕೆ ವೆರಿಫಿಕೇಷನ್ ಆದನಂತರ ಎಂಪ್ಲಾಯೀಸ್ ಅಸೋಸಿಯೇ ಷನ್‌ನವರದು ಮೆಂಬರ್‌ಷಿಪ್ ಹೆಚ್ಚಾಗಿದೆ ಎಂದು ಹೇಳಿದರೂ ಇದುವರೆಗೂ ರೆಕಗ್ನಿಷನ್ ಕೊಟ್ಟಿಲ್ಲ ಜನಗಳ ಬೆಂಬಲವಿದೆ, ಮೆಂಬರ್‌ಶಿಪ್ ಹೆಚ್ಚಾಗಿದೆ, ಆದರೆ ಕಾರ್ಮಿಕ ಸಂಘದವರು ಲೆಕ್ಕಪತ್ರ ಏನೂ ಕೊಡುವುದಕ್ಕೆ ತಯಾರಿಲ್ಲ, ವಿಚಾರಣೆಗೆ ಕೂಡ ಬರುವುದಕ್ಕೆ ತಯಾರಿಲ್ಲ. ಅವರ ರಿಜಿಸ್ಟ್ರೇಷನ್ ಕ್ಯಾನ್ಸಲ್ ಆಗಿದೆ ಎಂದು ತಿಳಿದುಬಂದಿದೆ. ಪುನಃ ರಿಜಿಸ್ಟ್ರೇಷನ್ ಮಾಡಿದ್ದರೆ ಮಾಡಿರಬಹುದು. ಹೀಗಿದ್ದರೂ ಸಹ ಮಾನ್ಯತೆಯನ್ನು ಕಾರ್ಮಿಕರು ಯಾವ ಸಂಘಕ್ಕೆ ಕೊಡ ಬೇಕು ಎಂದು ಕೇಳುತ್ತಾರೆ ಅದಕ್ಕೆ ಮಾನ್ಯತೆ ಇಲ್ಲ. ಇದರಲ್ಲಿ ರಾಜಕೀಯವಿದೆಯೋ ಏನೋ. ಮಂತ್ರಿಗಳು ಈ ತರಹ ರಾಜಕೀಯದಲ್ಲಿ ಪ್ರವೇಶ ಮಾಡಬಾರದು ಎಂದು ಹೇಳುತ್ತೇನೆ. ಇಂಟಕ್‌ಗೆ ಸೇರಿದ ಸಂಸ್ಥೆ ಎಂದು ಅದಕ್ಕೆ ಸಪೋರ್ಟ್ ಮಾಡಬೇಕೆಂದಿದ್ದರೆ ಅದು ಸರಿಯಲ್ಲ, ಯಾರು ತಪ್ಪು ಮಾಡಿದರೂ ತಪ್ಪು ಎಂದು ಹೇಳುವ ಸ್ಥಿತಿಯಲ್ಲಿ ಮಂತ್ರಿಗಳಿರಬೇಕು.

ಎನ್. ಜಿ. ಇ. ಎಫ್. ವರ್ಕರ್ಸ್ ಯೂನಿಯನ್ ರೆಕಗ್ನೈಸ್ ಮಾಡಬೇಕು ಎಂದು ಹಲವಾರು ಬಾರಿ ಈ ವಿಷಯ ಬಂದರೂ ಆ ಪ್ರಶ್ನೆ ಇನ್ನೂ ಇತ್ಯರ್ಥವಾಗಿಲ್ಲ. ಎನ್. ಜಿ. ಇ. ಎಫ್. ಫ್ಯಾಕ್ಟರಿ ಯಲ್ಲಿ ಯೂನಿಯನ್‌ಗೆ ಎಲೆಕ್ಷನ್ ನಡೆಯಬೇಕು ಎಂದು ಕೆಲಸಗಾರರು ಹೇಳುತ್ತಾರೆ. ಎಲೆಕ್ಷನ್ ನಡೆಸುವುದರ ಬಗ್ಗೆ ಏಕೋ ಜಿಜ್ಞಾಸೆ ತೋರಿಸುತ್ತಾರೆ. ಎಲೆಕ್ಷನ್ ನಡೆಸುತ್ತಾ ಇಲ್ಲ. ಟ್ರೇಡ್ ಯೂನಿಯನ್ ಆಕ್ಟ್ ಪ್ರಕಾರ ಎರಡು ವರ್ಷ ಎಲೆಕ್ಷನ್ ನಡೆಯದೇ ಹೋದರೆ ಆ ಅಸೋಸಿಯೇಷನ್ ಕಿತ್ತು ಹಾಕಬೇಕು. ಆದರೆ ಇಲ್ಲಿ ಆರು ವರ್ಷವಾದರೂ ಎಲೆಕ್ಷನ್ ಆಗಿಲ್ಲ. ಅಲ್ಲಿ ಎಲೆಕ್ಷನ್ ಮಾಡು ವುದಕ್ಕೆ ಅವಕಾಶ ಮಾಡಿಕೊಡಿ. ಈ ಕಾರ್ಖಾನೆ ಅಭಿವೃದ್ಧಿಗೆ ಬರಬೇಕಾದರೆ ಇಂಟರ್ ಲೇಬರ್ ರೈವಲರಿ ಹೋಗಬೇಕು.

(MR. DEPUTY SPEAKER in the Chair)

ಇನ್ನು ಬಿನ್ನಿ ಮಿಲ್ಸ್ ಎಂಪ್ಲಾಯೀಸ್ ಅಸೋಸಿಯೇಷನ್ ಬಗ್ಗೆ ಹೇಳಬೇಕಾಗಿದೆ. ಅಲ್ಲಿ ನಮ್ಮ ಸ್ನೇಹಿತರಾದ ಶ್ರೀ ಡಿ. ವೆಂಕಟೇಶ್ ಅವರು ಅಸೋಸಿಯೇಷನ್ ನಡೆಸುತ್ತಿದ್ದಾರೆ.

(ಶ್ರೀ ಎಂ. ಎಸ್. ಕೃಷ್ಣನ್)

ಶ್ರೀ ಮುನಿರತ್ನಂ ಅವರು ನಡೆಸುವ ಬಿನ್ನಿ ಮಿಲ್ಸ್ ಅಸೋಷಿಯೇಷನ್‌ಗೆ ಹೈಕೋರ್ಟಿನವರು ಫಂಕ್ಷನ್ ಮಾಡಕೂಡದು ಎಂದು ತೀರ್ಮಾನ ಕೊಟ್ಟರು. ಅದರ ರಿಜಿಸ್ಟ್ರೇಷನ್ ಕ್ಯಾನ್ಸಲ್ ಆಗಿದೆ. ಆದರೂ ಸಹ ಬಿನ್ನಿ ಮಿಲ್ ಮಾಲೀಕರು ಅವರಿಗೆ ಬೆಂಬಲ ಕೊಡುತ್ತಿದ್ದಾರೆ ವಿನಹ ಶ್ರೀ ವೆಂಕಟೇಶ್ ಅವರು ನಡೆಸುವ ಅಸೋಸಿಯೇಷನ್‌ಗೆ ಮಾನ್ಯತ ಕೊಟ್ಟಿಲ್ಲ. ಸರ್ಕಾರಕ್ಕೆ ಬರೆಯಲಾಗಿದೆ ಎಂದು ಹೇಳುತ್ತಿದ್ದಾರೆ. ಸರ್ಕಾರ ಇದನ್ನು ತೀರ್ಮಾನ ಮಾಡದೆ ನಿದ್ದೆ ಮಾಡುತ್ತಿದೆ. ಇದರಲ್ಲಿ ಪೊಲಟಿಕಲ್ ಡಿಸ್ಕ್ರಿಮಿನೇಷನ್ ಇದೆಯೋ ಇಲ್ಲವೋ ಎನ್ನುವ ಅನುಮಾನ ಬರುತ್ತದೆ. ಲೇಬರ್ ಡಿಪಾರ್ಟ್‌ಮೆಂಟಿನವರು ಮಾಲೀಕರಿಗೆ ಸಪೋರ್ಟ್ ಮಾಡುತ್ತಿದ್ದಾರೆ. ಮಾಲೀಕರಿಗೆ ಬೇಕಾದಂಥ ಸಂಘಕ್ಕೆ ಸರ್ಕಾರದವರು ಪ್ರೋತ್ಸಾಹ ಕೊಡುತ್ತಾರೆ ಎನ್ನುವ ಆರೋಪಣೆ ಬರಕೂಡದು ಎಂದು ಅಭಿಪ್ರಾಯ ಇದ್ದರೆ ಸರ್ಕಾರದವರು ತಕ್ಷಣ ತೀರ್ಮಾನ ತೆಗೆದುಕೊಳ್ಳಬೇಕು. ಬಿನ್ನಿ ಮಿಲ್ಸ್‌ನಲ್ಲಿ 50 ಜನ ಕೆಲಸಗಾರರನ್ನು ಕೆಲಸದಿಂದ ಕಿತ್ತು ಹಾಕಿದ್ದಾರೆಂದು ಅಲ್ಲಿ ಕೆಲಸಗಾರರು ಉಪವಾಸ ಮಾಡುತ್ತಿದ್ದಾರೆ. ಇನ್ನೊಂದು ನಿದರ್ಶನ ಕೊಡುತ್ತೇನೆ. ಬೆಂಗಳೂರು ವಾಟರ್ ಸಪ್ಲೈ ಸಿವರೇಜ್ ಬೋರ್ಡ್ ಅಸೋಸಿಯೇಷನ್ ಎಂದು ಮಾಡಿದ್ದಾರೆ. ಬೋರ್ಡಿನ ಚೇರ್ಮನರ ಬಗ್ಗೆ ಮಾತನಾಡುವುದಿಲ್ಲ. ಇಲ್ಲಿಯೂ ಕೂಡ ಒಂದೇ ಒಂದು ಅಸೋಸಿಯೇಷನ್ ಇರುವುದು. ಟ್ರೇಡ್ ಯೂನಿಯನ್ ಆಕ್ಟ್ ಪ್ರಕಾರ ರಿಜಿಸ್ಟರ್ಡ್ ಆಗಿರುವ ಅಸೋಸಿಯೇಷನ್‌ಗೆ ಮಾನ್ಯತೆ ಕೊಡಿ ಎಂದು ಟ್ರೇಡ್ ಯೂನಿಯನ್ ಕೇಳುತ್ತಿದೆ. ಲೇಬರ್ ಡಿಪಾರ್ಟ್‌ಮೆಂಟಿಗೆ ಬರೆಯಲಾಗಿದೆ ಎಂದು ಹೇಳುತ್ತಾರೆ. ಇದುವರೆಗೂ ಸರ್ಕಾರ ಈ ಬಗ್ಗೆ ಏನೂ ಕಾರ್ಯಕ್ರಮ ತೆಗೆದುಕೊಂಡಿಲ್ಲ. ಸುಮಾರು ಆರು ತಿಂಗಳಿಂದ ನಡೆಯುತ್ತಿದೆ, ಈ ಮಧ್ಯೆ ಅಲ್ಲಿನ ಆಡಳಿತ ಅಧಿಕಾರಿಗಳು ಚೇರ್ಮನರವರ ನೇತೃತ್ವದಲ್ಲಿ ಬೆಂಗಳೂರು ವಾಟರ್ ಸಪ್ಲೈ ಸಿವರೇಜ್ ಬೋರ್ಡ್ ವೆಲ್‌ಫೇರ್ ಅಸೋಸಿಯೇಷನ್ ಎಂದು ಇನ್ನೊಂದು ಮಾಡಿದ್ದಾರೆ. ಇದಕ್ಕೆ ಕೆಲಸಗಾರರಿಂದ ಕಡ್ಡಾಯವಾಗಿ ಹಣ ವಸೂಲು ಮಾಡಿ ಆ ಒಂದು ಅಸೋಸಿಯೇಷನ್‌ಗೆ ಸೇರಿಸಿಕೊಳ್ಳುತ್ತಿದ್ದಾರೆ. ಚೇರ್ಮನ್ನರ ಅನುಯಾಯಿಗಳು ಎಲ್ಲಾ ಡಿಪಾರ್ಟ್‌ಮೆಂಟಿಗೆ ಹೋಗಿ ತಮ್ಮದಾದ ಅಸೋಸಿಯೇಷನ್‌ಗೆ ಕಡ್ಡಾಯವಾಗಿ ಸೇರಿಸಿಕೊಳ್ಳುತ್ತಿದ್ದಾರೆ. ಇದಕ್ಕಿಂತಹ ಗ್ರಾಸ್ ವೈಲೇಷನ್ ಆಫ್ ದಿ ಕೋಡ್ ಇರುವುದು ಯಾವುದಿದೆ?, It is a gross violation of the policy enunciated under the code of discipline endorsed by the employees and employers ಇದು ಅಬ್ಸಲ್ಯೂಟ್ಲಿ ಅನ್‌ಫೇರ್ ಲೇಬರ್ ಪ್ರಾಕ್ಟೀಸ್. ಇದನ್ನು ಸರ್ಕಾರದ ಗಮನಕ್ಕೆ ತೆಗೆದುಕೊಂಡು ಬಂದಿದ್ದೇನೆ. ಈ ರೀತಿ ಕಡ್ಡಾಯವಾಗಿ ಹಣ ವಸೂಲು ಮಾಡುವುದು ಸರಿಯಲ್ಲ. ದುರಾದೃಷ್ಟವಶಾತ್ ಇದು ಇದುವರೆಗೂ ಸರ್ಕಾರದ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ. ಅಧಿಕಾರಿಗಳ ಹತ್ತಿರ ಹೋದರೆ ಎಲ್ಲಾದರೂ ಆ ಚೇರ್ಮನ್ ಅನ್ನು ಹದ್ದುಬಸ್ತಿಗೆ ತರುವುದಕ್ಕೆ ಆಗುತ್ತದೆಯೇ, ಮಂತ್ರಿಗಳಿಗೆ ಹೇಳಿ ಎಂದು ಹೇಳುತ್ತಾರೆ. ಲೇಬರ್ ಡಿಪಾರ್ಟ್‌ಮೆಂಟಿನ ಉನ್ನತ ಅಧಿಕಾರಿಗಳು ಹೀಗೆ ಹೇಳಿದಮೇಲೆ ಇನ್ನು ನಾನು ಏನು ಹೇಳಲಿ.

It is very difficult for us to do anything when he is Chairman. Now you are MLA, you can talk to the Chief Minister ಎಂದು ಹೇಳುತ್ತಾರೆ. It is not the fault of the officer who told me. When a man is made Super Engineer ultimately he may be super Chief Minister also.

Sri AZEEZ SAIT (Minister for Labour).—I object to that part of the statement.

Sri M. S. KRISHNAN.—If it offends the Chief Minister, and if it hurts the Minister, I will withdraw that. I am only expressing that such a fear is there because he is practising such things.

Mr. DEPUTY SPEAKER.—Let not harsh things be said against those persons who are not present in this House to defend themselves. Pleasant things may be said. Secondly, the Hon'ble Minister also will take down notes and reply in his speech.

Sri AZEEZ SAIT.—If members speak for a long time, I will be able to touch upon only important points and make a short reply.

Sri M. S. KRISHNAN.—I want to bring to the notice of the Hon'ble Minister for Labour that the question of compulsory statutory recognition of Trade Union has become an absolute necessity. And my suggestion is that he must bring legislation for compulsory recognition of larger trade unions on the basis of secret ballot. They have got a right to vote and decide which labour union they prefer to have. ಈ ಒಂದು ರೀತಿಯ ಕಡ್ಡಾಯ ಶಾಸನ ತರಬೇಕು, ಇದು ನಮ್ಮ ಕೈಲಿ ಆಗುತ್ತದೆಯೇ? ಕೇರಳದಲ್ಲಿ ಮತ್ತು ಪಶ್ಚಿಮ ಬಂಗಾಳದಲ್ಲಿ ಇದನ್ನು ಮಾಡಿದ್ದಾರೆ. ರೆಕಗ್ನಿಷನ್ ಆಫ್ ಟ್ರೇಡ್ ಯೂನಿಯನ್ಸ್ ಬಗ್ಗೆ ತಮ್ಮನ್ನು ಕೇಳಿಕೊಳ್ಳುವುದು ಇಷ್ಟೆ.

ಇನ್ನೊಂದು ವಿಷಯ ಬಹಳ ಡಿಬೇಟ್ ಆಗಿದೆ. ಅದನ್ನು ಕೂಡ ತಮ್ಮ ಗಮನಕ್ಕೆ ತರುತ್ತಿದ್ದೇನೆ. ಪೋಲೀಸ್ ಇಲಾಖೆಯ ಬಗ್ಗೆ ಮಾತನಾಡುತ್ತಾ Police interference in the industrial disputes ಬಗ್ಗೆ ಹೇಳಿದೆ. ಪೋಲೀಸರು ಕೈಗಾರಿಕಾ ವಿಭಾಗದಲ್ಲಿ ಮಧ್ಯ ಪ್ರವೇಶಿಸಿ ಬಂಡವಾಳ ಶಾಹಿಗಳಿಗೆ ರಕ್ಷಣೆ ಕೊಡುವ ಕ್ರಮ ತೆಗೆದುಕೊಳ್ಳುತ್ತಾರೆ. ತಾವು, ಕಾನೂನು ಮತ್ತು ಶಾಂತಿಯನ್ನು ಪರಿಪಾಲನೆ ಮಾಡುವುದು ಅವರ ಧರ್ಮ ಎಂದು ಹೇಳಬಹುದು, ಆದರೆ ಯಾರ ಕಾನೂನು, ಇದು ಯಾರಿಗೋಸ್ಕರ ಮಾಡಿರುವುದು, ಯಾರ ಹಿತರಕ್ಷಣೆಗೆ ಮಾಡುವುದು ಎಂದು ನಾನು ಕೇಳುತ್ತೇನೆ? ತಾವು ಸಮಾಜವಾದಿಗಳಾಗಿದ್ದರೆ ಜನಗಳ ಹಿತರಕ್ಷಣೆ ಆಗಬೇಕು, ಕಾರ್ಮಿಕರ ಹಿತರಕ್ಷಣೆಯಾಗಬೇಕು, ಆದರೆ ಆ ರೀತಿಯ ಮನೋಭಾವ ಪೋಲೀಸರಲ್ಲಿ ಕಂಡುಬರುತ್ತಿಲ್ಲ. ಮೈಸೂರು ಚಾಮುಂಡಿ ಕಾಫಿ ಕ್ಯೂರಿಂಗ್ ವರ್ಕ್ಸ್‌ನಲ್ಲಿ ಹಂಗಸರನ್ನು ಪೋಲೀಸರು ಸಿಕ್ಕಾಪಟ್ಟೆ ಹೊಡೆದರು, ಒಪ್ಪಿಕೊಳ್ಳುತ್ತೀರೋ ಇಲ್ಲವೋ ಗೊತ್ತಿಲ್ಲ. ಅಪಾಯದ ಸ್ಥಳಕ್ಕೆ ಹೊಡೆದಿದ್ದಾರೆ. ಕೆಲಸ ಕೇಳಿದರೆ ರಿವಾಲ್ವರ್‌ನಿಂದ ಷೂಟ್ ಮಾಡಿದ್ದ ಆ ಮಾಲಿಕ ಕಂಪನಿ ಮುಚ್ಚಿಕೊಂಡು ಹೋದ. ಕೇಸ್ ಯಾರ ಮೇಲೆ ಹಾಕಿದ್ದಾರೆ ಎಂದರೆ ಮಾಲೀಕರ ಮೇಲೆ ಅಲ್ಲ, ಕೂಲಿಗಾರರ ಮೇಲೆ. ನಂತರ ಎನ್.ಜಿ.ಇ. ಎಫ್. ನಲ್ಲಿ ಕೆಲಸಗಾರರ ಮೇಲೆ ಲಾಟಿ ಚಾರ್ಜ್ ಮಾಡಿ ಸಿಕ್ಕಾಪಟ್ಟೆ ಹೊಡೆದರು.

3-30 P.M.

ಹಿಂದೂಸ್ಥಾನ್ ಏರೋನಾಟಿಕ್ಸ್ ಕೆಲಸಗಾರರು ಸಾವಿರಾರು ಜನರು ಬೋನಸ್ ವಿಷಯ ತಮ್ಮ ಹತ್ತಿರ ಚರ್ಚೆ ಮಾಡಲು ಮೆರವಣಿಗೆ ಬಂದರೆ ಇಂಡಿಯನ್ ಎಕ್ಸ್‌ಪ್ರೆಸ್ ಬಿಲ್ಡಿಂಗ್ ಹತ್ತಿರ ತಡೆದುಬಿಟ್ಟರು. ಯಾರ ರಕ್ಷಣೆಗಾಗಿ ಅವರನ್ನು ತಡೆದರು? ಇಂಡಿಯನ್ ಎಕ್ಸ್‌ಪ್ರೆಸ್ ಬಿಲ್ಡಿಂಗ್ ಶ್ರೀ ರಾಮನಾಥ್ ಗೋಯಂಕಾ ಅವರಿಗೆ ಸೇರಿದೆ, ಅದಕ್ಕೋಸ್ಕರ ತಡೆದರೋ ಅಥವಾ ಹಿಂದೂಸ್ಥಾನ್ ಏರೋನಾಟಿಕ್ಸ್ ಮ್ಯಾನೇಜ್‌ಮೆಂಟ್ ಭೇಟಿಯಾದಾಗ ಅವರ ಮೇಲೆ ಧಾಳಿ ಮಾಡಬಹುದೆಂದು ತಡೆದರೋ ಏತಕ್ಕಾಗಿ ತಡೆದರು ಎಂದು ವಿಚಾರಣೆ ಮಾಡಿದಾಗ, ಮ್ಯಾನೇಜ್‌ಮೆಂಟ್‌ನವರು ನಾವು ತಡೆಯಿರಿ ಎಂದು ಹೇಳಲಿಲ್ಲ ಎಂದು ಹೇಳಿದಮೇಲೆ ಯಾರು ಹೇಳಿದರು ಎಂದು ಗೊತ್ತಾಗಲಿಲ್ಲ. ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯ ವರದಿಗಾರರು ಅಂತೂ ಹೇಳಿರುವುದಿಲ್ಲ. ಹೇಳಿರಬೇಕಾದರೆ ಬಿಲ್ಡಿಂಗ್ ಮಾಲೀಕರೇ ಹೇಳಿರಬೇಕು. ಗೋಯಂಕ ಅವರ ಆಸ್ತಿಪಾಸ್ತಿ ದೃಷ್ಟಿಯಿಂದ ಹೇಳಿದ್ದಾರೋ ಎಂದು ಅನುಮಾನವಾಗಿದೆ. ಆ ತರಹ ಕಾರ್ಯಗಳಿಗೆ ಅವಕಾಶ ಮಾಡಿಕೊಡಕೂಡದು ಎಂದು ಕೇಳಿಕೊಳ್ಳುತ್ತೇನೆ. ಪೋಲೀಸ್‌ನವರು ಲಾ ಅಂಡ್ ಆರ್ಡರ್ ಪ್ರೊಟೆಕ್ಟ್ ಮಾಡುತ್ತೇವೆ ಎನ್ನುವ ದೃಷ್ಟಿಯಿಂದ ಇಂಟರ್‌ಫಿಯರ್ ಮಾಡಿ ಕೆಲಸಗಾರರಿಗೆ ಹೊಡೆಯುವುದು ಸರಿಯಲ್ಲ. ಇದರಿಂದ ಮಾಲೀಕರ ರಕ್ಷಣೆಯಾಗುತ್ತದೆಯೇ ವಿನಃ ಕೆಲಸಗಾರರ ರಕ್ಷಣೆಯಾಗುವುದಿಲ್ಲ. ಈ ಟ್ರಿಬ್ಯೂನಲ್ ಕೈಗಾರಿಕಾ ನ್ಯಾಯಾಲಯಗಳು ಮತ್ತು ಲೇಬರ್ ಕೋರ್ಟುಗಳು ಹೋಗಬೇಕು ಎಂದು ಆಗಲೇ ಹೇಳಿದ್ದೇನೆ. ಹೊಸ ರೀತಿಯಲ್ಲಿ ಯೋಚನೆ ಮಾಡಬೇಕು ಎಂಬುದು ನನ್ನ ಸ್ಪಷ್ಟವಾದ ಅಭಿಪ್ರಾಯ. ಈಗ ಇರುವುದನ್ನು ಏನು ಮಾಡಬೇಕು! ತಕ್ಷಣ ರದ್ದು ಮಾಡುವುದಕ್ಕೆ ಬರುವುದಿಲ್ಲ. ಅದು ಇರುವ ತನಕ, ಅದನ್ನು ಸರಿಯಾಗಿ ನಡೆಸಿಕೊಂಡು ಹೋಗಬೇಕು. ಮೊದಲನೆಯದು ನ್ಯಾಯಲಯದ ಪ್ರಿಸೈಡಿಂಗ್ ಆಫೀಸರ್ಸ್ ಏನು ಇದ್ದಾರೆ ಅವರನ್ನು ಅಪಾಯಿಂಟ್ ಮಾಡುವುದಕ್ಕೆ ಸರ್ಕಾರಕ್ಕೆ ಡಿಸ್‌ಕ್ರಿಷನ್ ಇದೆ. ಡಿಸ್ಟ್ರಿಕ್ಟ್ ಜಡ್ಜರನ್ನು ಪ್ರಿಸೈಡಿಂಗ್ ಆಫೀಸರಾಗಿ ನೇಮಕ ಮಾಡುವ ಸಂಧರ್ಭದಲ್ಲಿ ಹೈಕೋರ್ಟಿನವರು ಒಂದು ಪ್ಯಾನಲ್ ಕಳುಹಿಸುತ್ತಿದ್ದರು. ಸರ್ಕಾರದವರು ಅಪಾಯಿಂಟ್ ಮಾಡುತ್ತಿದ್ದರು. ಮಾನ್ಯ ಪುಟ್ಟಸ್ವಾಮಿಯವರು ನ್ಯಾಯಾಂಗ ಮಂತ್ರಿಗಳಾಗಿ

(SRI M. S. KRISHNAN)

ದ್ದಾಗ ಆ ಡಿಸ್‌ಕ್ರಿಷನ್ ಹೈಕೋರ್ಟಿಗೆ ಬಿಟ್ಟುಕೊಟ್ಟಿದಾರೆ. ಹಾಗೆ ಹೈಕೋರ್ಟಿಗೆ ಬಿಟ್ಟುಕೊಟ್ಟ ಮೇಲೆ ಸರ್ಕಾರಕ್ಕೆ ನೇಮಕದ ಬಗ್ಗೆ ಅತಾರಿಟಿ ಇಲ್ಲ. ಪ್ರಿಸೈಡಿಂಗ್ ಆಫೀಸರ್ಸ್ ಏನು ಮಾಡುತ್ತಾರೆ, ಎತ್ತಕಡೆ ಹೋಗುತ್ತಾರೆ ಎಂದು ಕೇಳುವ ಪರಿಸ್ಥಿತಿ ಬರುವುದಿಲ್ಲ. ಯಾರನ್ನು ಬೇಕಾದರೂ ಅವರು ನೇಮಕ ಮಾಡುವ ಪರಿಸ್ಥಿತಿ ಬಂದಿದೆ. ಇಷ್ಟೇ ಅಲ್ಲ ಬರೇ ಒಬ್ಬರ ಹೆಸರನ್ನೇ ಕಳುಹಿಸುತ್ತಾರೆ, ಮೊದಲು ಪ್ಯಾನಲ್ ಕಳುಹಿಸುತ್ತಿದ್ದರು. ಆದರೆ ಈಗ ನನ್ನ ಸೂಚನೆ ಮತ್ತೆ ಪುನಃ ಇಂಡಸ್ಟ್ರಿಯಲ್ ಡಿಸ್‌ಪ್ಯೂಟ್ಸ್ ಆಕ್ಟ್ ಪ್ರಕಾರ ಏನು ಒಂದು ಅಧಿಕಾರ ಸರ್ಕಾರಕ್ಕೆ ಇದೆ ಆ ಅಧಿಕಾರವನ್ನು ಕಳೆದುಕೊಳ್ಳುವುದು ಸರಿಯಲ್ಲ. ಹಿಂದಿನ ಮಂತ್ರಿ ಮಂಡಲದ ಧೋರಣೆಯನ್ನು ಬದಲಾವಣೆಮಾಡಿ ಆ ಅಧಿಕಾರವನ್ನು ಸರಿಯಾಗಿ ಉಪಯೋಗ ಮಾಡಿಕೊಳ್ಳುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು.

ಇನ್ನೊಂದು ವಿಷಯ ಏನೆಂದರೆ ಆಗಲೇ ಇಂಡಸ್ಟ್ರಿಯಲ್ ಟ್ರಿಬ್ಯೂನಲ್‌ಗಳು 25 ವರ್ಷಗಳಿಂದ ಇದೆ. The Government has not made up its mind regarding the permanancy of these tribunals. Permanency of tribunals have been accepted in other places. ಮೈಸೂರಿನಲ್ಲಿ ಇದರ ಬಗ್ಗೆ ಇದುವರೆಗೂ ಆರ್ಡರ್ ಪಾಸ್ ಮಾಡಿಲ್ಲ. ಎಂದರೆ ಏನು ಹೇಳಬೇಕು ? ಪ್ರತಿಸಲ ಈ ಟ್ರಿಬ್ಯೂನಲ್‌ಗಳನ್ನು ರೀ ಕಾನ್‌ಸ್ಟಿಟ್ಯೂಟ್ ಮಾಡುವಾಗ ಈ ಪ್ರಶ್ನೆ ಬರುತ್ತದೆ. ಇದು ಆಗದ ಹಾಗೆ ನೋಡಿಕೊಳ್ಳಬೇಕು. ಮೂರನೆಯದು ಇಂಡಸ್ಟ್ರೀಯಲ್ ಟ್ರಿಬ್ಯೂನಲ್ ಮತ್ತು ಲೇಬರ್ ಕೋರ್ಟುಗಳಲ್ಲಿ ಈಗ ಪ್ರಿಸೈಡಿಂಗ್ ಆಫೀಸರ್ಸ್ ಏನು ಇದ್ದಾರೆ ಅವರು ಈಗಿನ ಸಮಾಜದಲ್ಲಿರುವುದೆಲ್ಲಾ ಬಹಳ ಕೆಟ್ಟದ್ದು ಎನ್ನುವ ಅಭಿಪ್ರಾಯ ಪಡೆದಿರುವಂತೆ ಕಾಣುತ್ತದೆ. ನೀವು ಏನು ಪ್ರಿಸೈಡಿಂಗ್ ಆಫೀಸರ್ಸ್ ಅಪಾಯಿಂಟ್ ಮಾಡುತ್ತೀರಿ ಅವರಿಗೆ ಇಂಡಸ್ಟ್ರಿಯಲ್ ಬ್ಯಾಕ್‌ಗ್ರೌಂಡ್ ಇರಬೇಕು, ಲೇಬರ್ ಲಾ ಬಗ್ಗೆ ಬ್ಯಾಕ್‌ಗ್ರೌಂಡ್ ಇರಬೇಕು, ಹಾಗೆಲ್ಲಾ ಇದ್ದರೆ ಮಾತ್ರ ಅವರಲ್ಲಿ ಪ್ರೋಸೀಜರ್ ಅಂಡರ್‌ಸ್ಟ್ಯಾಂಡಿಂಗ್ ಇರುತ್ತದೆ. ಮತ್ತು ಅವರು ಸರಿಯಾದಂಥ ತೀರ್ಮಾನ ಕೊಡುವುದಕ್ಕೆ ಸಾಧ್ಯವಾಗುತ್ತದೆ. ಕಮಿಟೆಡ್ ಪ್ರಿಸೈಡಿಂಗ್ ಆಫೀಸರ್ಸ್ ಇರಬೇಕು ಎಂದು ಕೇಳುವಂತಹ ಜನ ನಾವು. ಕಮಿಟೆಡ್ ಆಗಿದ್ದರೆ ಒಳ್ಳೆಯದು. ಅದರ ಬಗ್ಗೆ ಕಾಂಟ್ರವರ್ಸಿ ದೇಶದಲ್ಲಿ ಇದೆ. ಆ ವಿಚಾರ ಮಾತನಾಡುವುದಕ್ಕೆ ನಾನು ಹೋಗುವುದಿಲ್ಲ. ಇದು ಇಲ್ಲದೆ ಹೋದರೆ ಹೊಸ ರೀತಿಯಾದಂಥ ಓರಿಯೆಂಟೇಷನ್ ಇರಬೇಕು. ಅನೇಕ ಕಂಪ್ಲೈಂಟ್ಸ್ ಬಂದಿವೆ. ಟ್ರಿಬ್ಯೂನಲ್ಸ್ ಮತ್ತು ಲೇಬರ್ ಕೋರ್ಟ್ಸ್ ಕೇಸಸ್ ಡಿಸ್‌ಪೋಸ್ ಆಫ್ ಮಾಡಬೇಕಾದರೆ ಒಂದು ವರ್ಷ ಆಗುತ್ತದೆ, 2 ವರ್ಷಗಳು ಆಗುತ್ತದೆ ಎಂದು ಅನೇಕ ಕಂಪ್ಲೈಂಟ್ಸ್ ಬಂದಿವೆ. ಪ್ರಿಸೈಡಿಂಗ್ ಆಫೀಸರ್ಸ್ ಆರ್ಗ್ಯುಮೆಂಟ್ ನೋಟ್ ಮಾಡಿಕೊಂಡಿರುವುದಿಲ್ಲ. ಆಗ ರೀ ಆರ್ಗ್ಯುಮೆಂಟ್ ಮಾಡಿ ಎಂದು ಹೇಳುತ್ತಾರೆ. ಆರ್ಗ್ಯುಮೆಂಟ್ಸ್ ಮುಗಿದಕೂಡಲೇ ಜಡ್ಜ್‌ಮೆಂಟ್ ಕೊಡದ ವರ್ಷಾನುಗಟ್ಟಲೆ ಆಗಿರುವ ನಿದರ್ಶನಗಳು ಇವೆ. ಇವನ್ನು ಹೈ ಕೋರ್ಟು ಗಮನಕ್ಕೆ ತಂದು ಅಲ್ಲಿ ಚೀಫ್ ಜಸ್ಟೀಸ್ ಸರಿಯಾಗಿ ಡೈರೆಕ್ಷನ್ ಕೊಡುವ ಹಾಗೆ ಮಾಡಬೇಕು. ಇದಕ್ಕೆ ತಾವು ಗಮನಕೊಡಬೇಕು. ಒಂದು ಸಲ ಆರ್‌ಗ್ಯೂಮೆಂಟ್ ಮಾಡಿದ್ದನ್ನು ರೀ ಆರ್‌ಗ್ಯೂಮೆಂಟ್ ಮಾಡುವುದು ಸರಿಯಲ್ಲ. ತಪ್ಪೋ ರೈಟೋ ಬೇಗ ಅವಾರ್ಡ್ ಬರೆದುಕೊಡಬೇಕು ಎಂದು ಹೇಳಬೇಕು.

ಇನ್ನು ಒಂದು ವಿಷಯ. ನಮ್ಮ ಬೆಂಗಳೂರು ನಗರಕ್ಕೆ ಇನ್ನೂ ಒಂದು ಟ್ರಿಬ್ಯೂನಲ್ ಬೇಕು ಎಂದು ಸೂಚನೆ ಮಾಡುತ್ತೇನೆ. ನನ್ನ ಅಭಿಪ್ರಾಯದಲ್ಲಿ ಈಗ ಇರುವ ಟ್ರಿಬ್ಯೂನಲ್‌ಗೆ ಇವತ್ತಿನ ದಿವಸ ಇರುವ ಕೆಲಸದ ಹೊರೆ ನೋಡಿದರೆ ಯಾರಾದರೂ ಒಬ್ಬ ಕಾಂಪಿಟೆಂಟ್ ಅಡ್ವೋಕೇಟ್ ನೇಮಕ ಮಾಡಬೇಕು. ಹಿಂದೆ ಪ್ಯಾನಲ್ ಆಫ್ ಜಡ್ಜಸ್ ಇದ್ದರು. ಕಾರ್ಮಿಕರ ಪ್ರತಿನಿಧಿ ಒಬ್ಬರು, ಪ್ರಿಸೈಡಿಂಗ್ ಆಫೀಸರ್ ಒಬ್ಬರು ಮತ್ತು ಎಂಪ್ಲಾಯಿಸ್ ಪರವಾಗಿ ಒಬ್ಬರು ಈ ರೀತಿ ಮೂರು ಜನ ನೇಮಕ ಮಾಡಿದರೆ ಒಳ್ಳೆಯದು. ಈ ರೀತಿ ಹೊಂದಾಣಿಕೆ ಮಾಡಿ ತಂದರೆ ಚೆನ್ನಾಗಿ ನಡೆಯುತ್ತದೆ. ತೀರ್ಮಾನ ತೆಗೆದುಕೊಳ್ಳುವುದಕ್ಕೆ ಆಗುತ್ತದೆ. ಮತ್ತು ಕೆಲಸದ ಹೊರೆ ಕಮ್ಮಿಯಾಗುತ್ತದೆ. Industrial tribunal with a competent presiding officer, either an advocate who is committed or a three man tribunal ಆದರೆ ಅವಾರ್ಡು ಬೇಗ ಬರುವುದಕ್ಕೆ ಅವಕಾಶವಾಗುತ್ತದೆ. ಈಗ ಇರುವ ರೀತಿಯಲ್ಲಿ ಇಂಡಸ್ಟ್ರಿಯಲ್ ಟ್ರಿಬ್ಯೂನಲ್ ಮಾಡಿದರೆ ಪ್ರಯೋಜನವಾಗುವುದಿಲ್ಲ. ಹೊಸ ರೀತಿ ಇಂಡಸ್ಟ್ರಿಯಲ್ ಟ್ರಿಬ್ಯೂನಲ್ ನೇಮಕ ಮಾಡಬೇಕು ಎಂದು ಸೂಚನೆ ಮಾಡುತ್ತೇನೆ. ಇನ್ನು ಇಂಡಸ್ಟ್ರಿಯಲ ರಿಲೇಷನ್ ಬಗ್ಗೆ ಹೇಳುವುದಾದರೆ ಬೈಪಾರ್‌ಟೈಟ್ ನೆಗೋಸಿಯೇಶನ್ ಮಾಡಬೇಕು ಎಂದು ಇದೆ. ನ್ಯಾಷನಲ್

ಲೇಬರ್ ಕಮಿಷನ್ನವರು ವ್ಯಾಖ್ಯಾನ ಮಾಡಿದ್ದಾರೆ. "ಇಂಗ್ಲೀಷ್" ಅರ್ಬಿಟ್ರೇಷನ್ ಎನ್ನುವುದು ಒಂದು ಆರ್ಟ್. ಹಿಂದಿನ ಕಾಲದಲ್ಲಿ ಕೆಲವು ರೆವಿನ್ಯೂ ಅಧಿಕಾರಿಗಳು ಜಡ್ಜಸ್ ಆಗಿದ್ದರು. ನನಗೆ ತಿಳಿದಮಟ್ಟಿಗೆ ಶ್ರೀಮಾನ್ ಅಪ್ಪಾಜಿಗೌಡರು ಪ್ರಶ್ನೆಗಳನ್ನು ಇತ್ಯರ್ಥ ಮಾಡಿದ ರೀತಿಯೇ ಬೇರೆ. ನಾವು ಕ್ಲೈಮ್ ಸ್ಟೇಟ್‌ಮೆಂಟ್ ಕೊಟ್ಟು ನೀವು ಸ್ಟೇಟ್‌ಮೆಂಟ್ ಇತ್ಯರ್ಥ ಮಾಡುವ ರೀತಿಯಲ್ಲಿ ಇರಲಿಲ್ಲ. ಪಾರ್ಟಿಗಳನ್ನು ಕರೆಸಿ ಅಕ್ರಾಸ್ ದಿ ಟೇಬಲ್ ಸೆಟ್ಲಮೆಂಟ್ ಮಾಡಿ ಕಳುಹಿಸುತ್ತಿದ್ದರು. The main thing is to bring about a settlement at the level of Labour Officer or even at the level of presiding officer in the Industrial Tribunal. ಮುಖ್ಯವಾದ ಕೆಲಸ ಇದೆ. ಅದನ್ನು ತಾವು ಮಾಡುವುದಕ್ಕೆ ಗಮನ ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಇನ್ನೊಂದು ವಿಷಯವೆಂದರೆ, ಇಂಡಸ್ಟ್ರಿಯಲ್ ಟ್ರಿಬ್ಯುನಲ್ ಇರುವ ಕಟ್ಟಡವನ್ನು ಮಾನ್ಯ ಮಂತ್ರಿಗಳು ನೋಡಿದ್ದಾರೋ ಇಲ್ಲವೋ ಗೊತ್ತಿಲ್ಲ. ಈ ಕಛೇರಿ ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್ ಆಫೀಸಿನ ಹಿಂದುಗಡೆ ಒಂದು ಗೂಡಿನಲ್ಲಿ ಇದೆ. ಅಲ್ಲಿ ಹೋದರೆ ನಿಂತುಕೊಳ್ಳುವುದಕ್ಕೆ ಜಾಗವಿಲ್ಲ. ಯಾವಾಗಲೂ ಗಲಾಟೆ ಇರುತ್ತದೆ. ಕಾರ್ಮಿಕರೇ ದೇಶದ ಬೆನ್ನೆಲಬು ಎಂದು ಸರ್ಕಾರದವರು ಹೇಳುತ್ತಾರೆ, ಆದರೆ ಈ ಕಛೇರಿಗೆ ಒಂದು ಒಳ್ಳೆಯ ಕಟ್ಟಡವಿಲ್ಲ. ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುವುದೇನೆಂದರೆ, ಇದಕ್ಕೆ ಒಂದು ಒಳ್ಳೆಯ ಕಟ್ಟಡವನ್ನು ಒದಗಿಸಿಕೊಡುವುದು ಅತ್ಯವಶ್ಯಕ. ಇಲ್ಲದಿದ್ದರೆ ಕೇಸ್‌ಗಳು ಜಾಗ್ರತೆ ಇತ್ಯರ್ಥವಾಗುವುದಕ್ಕೆ ಅವಕಾಶವಾಗುವುದಿಲ್ಲವೆಂದು ಹೇಳುತ್ತೇನೆ. ಇನ್ನೊಂದು ಗಹನವಾದ ವಿಷಯವೆಂದರೆ, ಕಾರ್ಮಿಕ ಮುಖಂಡರನ್ನು ಡಿಸ್‌ಮಿಸ್ ಮಾಡುವುದು. ಹಲವಾರು ಕಾರಣಗಳಿಗಾಗಿ ಇವರನ್ನು ಎನ್‌ಕ್ವೈರಿ ಮಾಡದೆ ಡಿಸ್‌ಮಿಸ್ ಮಾಡಿರುವ ಪ್ರಸಂಗಗಳು ಉಂಟು. ಎನ್‌ಕ್ವೈರಿ ಮಾಡಿ ಡಿಸ್‌ಮಿಸ್ ಮಾಡಿದ್ದೇವೆ ಎಂದು ಕೆಲವುಸಲ ಹೇಳುತ್ತಾರೆ. ಆದರೆ ಅನೇಕ ಸಂದರ್ಭಗಳಲ್ಲಿ ಎನ್‌ಕ್ವೈರಿ ಮಾಡದೆ ಡಿಸ್‌ಮಿಸ್ ಮಾಡಿರುವ ಪ್ರಸಂಗಗಳು ನೂರಾರು ಇವೆ. ಅದರ ಒಂದು ಲಿಸ್ಟ್ ನನ್ನ ಬಳಿ ಇದೆ. ಆದರೆ ಅದನ್ನು ಮಾನ್ಯ ಮಂತ್ರಿಗಳಿಗೆ ಕೊಡುವುದಿಲ್ಲ. ಎಷ್ಟೆಷ್ಟು ಜನರನ್ನು ತೆಗೆದಿದ್ದಾರೆಂಬ ಬಗ್ಗೆ ಉದಾಹರಣೆಗಳನ್ನು ಮಾತ್ರ ಇಲ್ಲಿ ಕೊಡುತ್ತೇನೆ :

Mysore Electrical Industries	30
Binny Mills	37
MICO	8
BEL	9
H.M.T.	2

I request the Labour Minister to use his good offices and see that this matter of victimisation is settled at his level; it cannot be settled at any other level.

ಸಣ್ಣ ಸಣ್ಣ ಕೈಗಾರಿಕೆಗಳಾದ ಬೀಡಿ ಕೈಗಾರಿಕೆ, ಫೌಂಡರಿ ಕೈಗಾರಿಕೆ, ಟ್ಯಾನರಿ ಕೈಗಾರಿಕೆ, ಮುಂತಾದ ಕೈಗಾರಿಕೆಗಳಲ್ಲಿ ಕೆಲಸ ಮಾಡುವ ನೌಕರರಿಗೆ ಕನಿಷ್ಠ ವೇತನವನ್ನು ಸರಿಯಾಗಿ ಕೊಡುತ್ತಿಲ್ಲ. ಇದರಿಂದ ಈ ಕೈಗಾರಿಕೆಗಳಲ್ಲಿ ಕೆಲಸ ಮಾಡುತ್ತಿರುವ ನೌಕರರಿಗೆ ಬಹಳ ರೀತಿಯಿಂದ ಅನ್ಯಾಯಗಳಾಗುತ್ತಿವೆ. There is an impression that the minimum wages in small industries must be lesser than what obtains in bigger industries. This theory has been expounded so many times. They are having sweated wages and not real wages. In this connection, I may bring to your notice A I R 1972, page 605, Supreme Court, J. P. Industries *Vs* Workmen. You must see to it that no worker normally gets less than Rs. 5 per day. That is the demand of the Karnataka Trade Union Congress in our State. It is not enough for a man to live in Bangalore; but at least let it be given. Our officers say that the wages cannot be linked with the cost of living. In Punjab they have said that wages must be linked with the cost of living. It is not a

(SRI M. S. KRISHNAN)

communist Government. Why not the Labour Minister Sri Azeez Sait who proclaims socialism and accepts it in principle bring it into force here also ? That is my humble submission.

ನಮ್ಮ ರಾಜ್ಯದಲ್ಲಿ ಕಾರ್ಮಿಕರಿಗೆ ಅನ್ವಯವಾಗುವಂತಹ ಅನೇಕ ಆಕ್ಟ್‌ಗಳು ಇವೆ. ಆದರೆ ಅವುಗಳನ್ನು ಯಾವ ಮಾಲೀಕರುಗಳು ಸಹ ಜಾರಿಯಲ್ಲಿ ತರುತ್ತಿಲ್ಲ. ಬೇಕಾದರೆ ಮಾನ್ಯ ಮಂತ್ರಿಗಳು ಸಾಯಂಕಾಲ ಮಾನ್ಯ ನಾಗಣ್ಣನವರ ಜೊತೆಯಲ್ಲಿ ಕಬ್ಬನ್‌ಪೇಟೆಗೆ ಹೋಗಿ ನೋಡಿದರೆ ಗೊತ್ತಾಗುತ್ತದೆ. ಅಲ್ಲಿರುವ ಸಿಲ್ಕ್ ಕೈಗಾರಿಕೆಗಳಲ್ಲಿ ಸಣ್ಣ ಸಣ್ಣ ಮಕ್ಕಳನ್ನು, ಹೆಂಗಸರನ್ನು ಇಟ್ಟುಕೊಂಡು ಕೆಲಸ ಮಾಡಿಸುತ್ತಿರುತ್ತಾರೆ. ಅವರಿಗೆ ಯಾವ ಕಾಲದ ಮಿತಿ ಇಲ್ಲ, ಮತ್ತು ಸರಿಯಾದ ಕೂಲಿ ಇಲ್ಲ. ಅದೇ ರೀತಿ ಬೆಂಗಳೂರಿನಲ್ಲಿರುವ ಊದುಬತ್ತಿ ಕೈಗಾರಿಕೆಗಳಲ್ಲಿಯೂ ಸಹ ನಡೆಯುತ್ತಿದೆ. ಯಾರಾದರೂ ಲೇಬರ್ ಇನ್ಸ್‌ಪೆಕ್ಟರ್ ಇನ್ಸ್‌ಪೆಕ್ಷನ್‌ಗೆ ಹೋದರೆ ಮಾಲೀಕರ ಅವರ ಕೈ ಬೆಚ್ಚಗೆಮಾಡಿ ಕಳಿಸಿಬಿಡುತ್ತಾರೆ. ಇದೇ ರೀತಿಯ ಅನ್ಯಾಯ ಕೆಲವು ದೊಡ್ಡ ದೊಡ್ಡ ಕೈಗಾರಿಕೆಗಳಲ್ಲಿಯೂ ಸಹ ನಡೆಯುತ್ತಿದೆ. ಇವರು ಸಹ ಕಾನೂನು ಪ್ರಕಾರ ನಡೆದುಕೊಳ್ಳುತ್ತಿಲ್ಲ.

There are violations of a number of Acts. Even in a public sector concern like the Hindustan Machine Tools and Bharat Electronics there are such violations which have been brought to the notice of the Central Government. I do not know whether they have been brought to the notice of the Labour Department at the Centre. They go on with these violations with impunity.

ಗೌರ್ನಮೆಂಟ್ ಎಲೆಕ್ಟ್ರಿಕ್ ಫ್ಯಾಕ್ಟರಿಯಲ್ಲಿ ಕಾರ್ಮಿಕರಿಗೆ ಇನ್‌ಕ್ರಿಮೆಂಟ್ ಕೊಡಬೇಕು ಎಂದು ಹೈಕೋರ್ಟ್ ಆರ್ಡರ್ ಆಗಿದೆ. ಅದರೂ ಅವನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಆಗುವುದಿಲ್ಲ ಎಂದು ಹೇಳುತ್ತಾರೆ. ಕೃಷ್ಣರಾಜಪುರಂನಲ್ಲಿರತಕ್ಕ ಇಂಡಿಯನ್ ಟಿನ್ ಫ್ಯಾಕ್ಟರಿಯ 21 ಜನ ಕಾರ್ಮಿಕರು ಒಂದು ದಿವಸ ಸ್ಟ್ರೈಕ್ ಮಾಡಿದ್ದಕ್ಕೆ ಅವರನ್ನು ಮನೆಗೆ ಕಳುಹಿಸಿದರು. ಸರ್ಕಾರಿ ಕೈಗಾರಿಕೆಗಳಲ್ಲಿ ಜಂಗಲ್ ಲಾ ಇದೆಯೆಂದು ಕಾಣುತ್ತದೆ. ಆ ಫ್ಯಾಕ್ಟರಿಗಳಲ್ಲಿ ಇಂಥಾ ಕೆಲವು ಕೆಲಸಗಳು ನಡೆಯುತ್ತಿವೆಯಲ್ಲಾ ಎಂದು ನನಗೆ ಆಶ್ಚರ್ಯವಾಗುತ್ತಿದೆ.

ಬೆಂಗಳೂರು ಡೈರಿಯಲ್ಲಿ ಒಬ್ಬ ಡ್ರೈವರಿಗೆ ಕಾಂಪೆನ್‌ಸೇಷನ್ ಕೊಡಬೇಕೆಂದು ಲೇಬರ್ ಕೋರ್ಟ್ ಅವಾರ್ಡ್ ಇದೆ. ಆದರೂ ಸಹ ಅವನಿಗೆ ಕಾಂಪೆನ್‌ಸೇಷನ್ ಅನ್ನು ಅವರು ಕೊಟ್ಟಿಲ್ಲ. ಇದನ್ನು ಸರ್ಕಾರದವರು ಗಮನಿಸಬೇಕು. ಗೌರ್ನಮೆಂಟ್ ಎಲೆಕ್ಟ್ರಿಕ್ ಫ್ಯಾಕ್ಟರಿಯ ವಿಷಯದಲ್ಲಿ ತೀವ್ರಗಮನ ಕೊಡಬೇಕು. ಫ್ಯಾಕ್ಟರಿಯಲ್ಲಿ ಬ್ರೀಚ್ ಆಫ್‌ಪೀಸ್ ಆಗದಹಾಗೆ ನೋಡಿಕೊಳ್ಳಬೇಕು. ಒಂದುವೇಳೆ ಆದರೆ ಅದನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡಬೇಕು.

ನಾನು ಇಷ್ಟು ಮಾತ್ರ ಹೇಳುತ್ತೇನೆ, ಅವಾರ್ಡ್ಸ್ ಮತ್ತು ಸೆಟ್ಲ್‌ಮೆಂಟ್‌ಗಳನ್ನು ಇವರು ಜಾರಿಗೆ ತರುವುದಿಲ್ಲ. ಆದ್ದರಿಂದ ಅವುಗಳಿಗೆ ಸ್ಯಾಂಟಿಟಿ ಇಲ್ಲದಂತಾಗಿದೆ. ಯಾವುದಾದರೂ ಒಂದು ಅವಾರ್ಡ್ ಅಥವಾ ಸೆಟ್ಲ್‌ಮೆಂಟ್ ಆಗಬೇಕಾದರೆ Union must apply, Government have to think and send it to labour department. Then the Labour secretary sends to Law Secretary. ಇವುಗಳೆಲ್ಲಾ ಆಗುವ ವೇಳೆಗೆ ಅದಕ್ಕೆ ಸಂಬಂಧಪಟ್ಟ ಮನುಷ್ಯರೇ ಕ್ಲೋಜ್ ಆಗುತ್ತಾರೆ. ಏತಕ್ಕೆ ಈ ರೀತಿ ಮಾಡುತ್ತಾರೆ? ಸರ್ಕಾರ ಈ ಬಗ್ಗೆ ಕ್ರಮತೆಗೆದುಕೊಳ್ಳಬೇಕು. ಯಾರು ಈ ಕೆಲಸಗಳನ್ನು ಸರಿಯಾಗಿ ಮಾಡುವುದಿಲ್ಲ, ಅವರಿಗೆ ಚಡಿ ಏಟು ಕೊಡಬೇಕು. ಪಾಕೀಸ್ಥಾನದಲ್ಲಿ ಶ್ರೀ ಅಯೂಬ್‌ಖಾನ್ ಅವರು ಬ್ಲಾಕ್‌ಮಾರ್ಕೆಟಿಯರ್ಸ್ ಅನ್ನು ಕರಿಸಿ ಚಡಿ ಏಟು ಕೊಡುತ್ತಿದ್ದರಂತೆ. ಆ ರೀತಿ ನಮ್ಮಲ್ಲೂ ಮಾಡಿದರೆ ಈ ವಿಷಯಗಳೆಲ್ಲಾ ಸರಿಹೋಗಬಹುದು ಎಂದು ಕಾಣುತ್ತದೆ. ಸರ್ಕಾರದವರು ಕಾರ್ಮಿಕ ವರ್ಗದವರಿಗೆ ಅನುಕೂಲ ಮಾಡಿ ಅವರ ಸಹಕಾರವನ್ನು ಪಡೆಯುವುದಕ್ಕೆ ಪ್ರಯತ್ನಮಾಡಬೇಕು. ಆದ್ದರಿಂದ ಈಗ ನಾನು ಹೇಳತಕ್ಕಂಥ ವಿಷಯಗಳನ್ನು ಸರ್ಕಾರದವರು ಕಡ್ಡಾಯವಾಗಿ ಮಾಡಬೇಕು. ಇವರಲ್ಲಿ ಮೊದಲನೆಯದಾಗಿ Fresh Le islation ಆಗಬೇಕು. Since it is concurrent matter, you can initiate fresh legislation in the matter of labour.

ಇಂಡಸ್ಟ್ರಿಯಲ್ ಡಿಸ್‌ಪ್ಯೂಟ್ಸ್ ಆಕ್ಟ್ ಪ್ರಕಾರ ಯಾರನ್ನಾದರೂ ಒಬ್ಬ ಕಾರ್ಮಿಕನನ್ನು ಕೆಲಸದಿಂದ ಟರ್ಮಿನೇಟ್ ಮಾಡಿ ಅಥವಾ ಡಿಸ್‌ಮಿಸ್ ಮಾಡಿ ಮನೆಗೆ ಕಳುಹಿಸಿದಾಗ ಅವರು ಅಪೀಲ್ ಹಾಕಿಕೊಂಡರೆ ಅದು ತೀರ್ಮಾನ ಆಗುವವರೆಗೂ ಅವನಿಗೆ ಬೇರೆ ಕೆಲಸ ಇರುವುದಿಲ್ಲ. ಅವನು ಏನು ಮಾಡಬೇಕು ? ಅವನು ಬದುಕುವುದಕ್ಕೆ ಅವಕಾಶ ಮಾಡಿಕೊಡಬೇಕು. ಆದ್ದರಿಂದ ಅದು ತೀರ್ಮಾನ ಆಗುವವರೆಗೆ ಅವನಿಗೆ ಸಬ್ಸಿಸ್ಟೆನ್ಸ್ ಅಲೋಯನ್ಸ್ ಕೊಡಬೇಕು.

ಎಲ್ಲಾ ಕಾರ್ಮಿಕರಿಗೂ ಅನ್ವಯವಾಗುವ ಹಾಗೆ ಗ್ರ್ಯಾಚ್ಯುಯಿಟಿ ಬಿಲ್ ತೆಗೆದುಕೊಂಡು ಬರಬೇಕು. ಎಲ್ಲಾ ಫ್ಯಾಕ್ಟರಿಯ ಕಾರ್ಮಿಕರಿಗೂ 8. 3 ಪರ್ಸೆಂಟ್ ಬೋನಸ್ ಕೊಡಬೇಕೆಂದು ತೀರ್ಮಾನವಾಗಿದೆ. ಅದರಂತೆ ಎಲ್ಲರಿಗೂ 8.33 ಪರ್ಸೆಂಟ್ ಬೋನಸ್ ಕೊಡುವುದಕ್ಕೆ ವ್ಯವಸ್ಥೆ ಮಾಡಬೇಕು.

ಈಗ ಕೆಲವು ಕೋ ಆಪರೇಟೀವ್ ಸೊಸೈಟಿಗಳು ಕೈಗಾರಿಕೆಗಳನ್ನು ನಡೆಸುತ್ತಿದ್ದಾರೆ. ಉದಾಹರಣೆಗೆ ಸಕ್ಕರೆ ಕಾರ್ಖಾನೆ, ಲೆದರ್ ಫ್ಯಾಕ್ಟರಿ ಮುಂತಾದ ಕಾರ್ಖಾನೆಗಳನ್ನು ಕೋ ಆಪರೇಟೀವ್ ಸೊಸೈಟಿಗಳವರು ನಡೆಸುತ್ತಿದ್ದಾರೆ. ಅಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರಿಗೆ ಇಂಡಸ್ಟ್ರಿಯಲ್ ಆಕ್ಟ್ ಅಪ್ಲೈ ಆಗುವುದಿಲ್ಲ. ಆದ್ದರಿಂದ ಕೋ ಆಪರೇಟೀವ್ ಬೇಸಿಸ್ ಮೇಲೆ ನಡೆಯುತಕ್ಕಂಥಾ ಕೈಗಾರಿಕೆಯ ಕಾರ್ಮಿಕರಿಗೂ ಇಂಡಸ್ಟ್ರಿಯಲ್ ಡಿಸ್‌ಪ್ಯೂಟ್ಸ್ ಆಕ್ಟ್ ಅನ್ವಯಿಸುವ ಹಾಗೆ ಆಕ್ಟನ್ನು ಬದಲಾವಣೆ ಮಾಡಬೇಕು. ಏತಕ್ಕೆಂದರೆ ಅವರು ಸಿಕ್ಕಾಪಟ್ಟೆ ಕಾರ್ಮಿಕರನ್ನು ವಜಾಮಾಡುತ್ತಿದ್ದಾರೆ. ಅವರಿಗೆ ರಕ್ಷಣೆ ಕೊಡುವ ದೃಷ್ಟಿಯಿಂದ ಇದನ್ನು ಮಾಡಬೇಕು. ಟ್ರೇಡ್ ಯೂನಿಯನ್‌ಗೆ ರೆಕಗ್ನಿಷನ್ ಕೊಡುವಾಗ ಬ್ಯಾಲೆಟ್ ಮುಖಾಂತರ ಕೊಡಬೇಕು.

ಪಬ್ಲಿಸಿಟಿ ಮತ್ತು ಇನ್‌ಫರ್‌ಮೇಷನ್ ಬಗ್ಗೆ ಲೇಬರ್ ಜರ್ನಲ್‌ನಲ್ಲಿ ಸಾಕಷ್ಟು ವಿವರಗಳನ್ನು ಕೊಡುತ್ತಿಲ್ಲ. ಆದ್ದರಿಂದ ಕಾರ್ಮಿಕರಿಗೆ ಸಂಬಂಧಪಟ್ಟ ತೀರ್ಮಾನಗಳು, ಟ್ರಿಬ್ಯುನಲ್‌ನಲ್ಲಿ ಆದಂತಹ ತೀರ್ಮಾನಗಳು, ವೇಜಸ್ ಸ್ಟೇಟ್‌ಮೆಂಟ್ಸ್, ಆರ್ಬಿಟ್ರೇಷನ್ಸ್ ಇವುಗಳನ್ನೆಲ್ಲಾ ಕಂಪೈಲ್‌ಮಾಡಿ ಒಂದು ಡೈಜೆಸ್ಟ್‌ನಲ್ಲಿ ಹೊರಡಿಸಬೇಕು. ನಂತರ ಕಂಪೆಡಿಯಂ ಆಫ್‌ಸ್ಟ್ಯಾಟಿಸ್ಟಿಕ್ಸ್‌ಗಳನ್ನು ಪ್ರಿಪೇರ್‌ಮಾಡಿ ಅದರಲ್ಲಿ ಕೈಗಾರಿಕೆಗಳ ಮೇಲೆ ಹಾಕಿರುವ ಬಂಡವಾಳ, ರೇಟ್ ಆಫ್ ರಿಟರ್ನ್ ಮೊದಲಾದವುಗಳನ್ನೆಲ್ಲಾ ಕೊಟ್ಟರೆ ಅವರಿಂದ ಟ್ರೇಡ್ ಯೂನಿಯನ್ಸ್, ಎಂಪ್ಲಾಯರ್ಸ್ ಮತ್ತು ಲಾಯರ್ಸ್ ಎಲ್ಲರಿಗೂ ಅನುಕೂಲವಾಗುತ್ತದೆ.

ಇನ್ನೊಂದು ವಿಚಾರವೇನೆಂದರೆ ಇಂಡಸ್ಟ್ರಿಯಲ್ ಡಿಸ್‌ಪ್ಯೂಟ್ಸ್ ಆಕ್ಟ್ ಏನಿದೆ ಅದನ್ನು ಕನ್ನಡದಲ್ಲಿ ಮಾಡಬೇಕು. ಏತಕ್ಕೆಂದರೆ ಕಾರ್ಮಿಕರಲ್ಲಿ ಹೆಚ್ಚು ಜನ ಕನ್ನಡಿಗರು ಇದ್ದಾರೆ. ಆದ್ದರಿಂದ ಕಾರ್ಮಿಕರಿಗೆ ಸಂಬಂಧಪಟ್ಟ ಕಾನೂನುಗಳು ಕನ್ನಡದಲ್ಲಿ ಆಗಬೇಕು. ಕನ್ನಡದಲ್ಲಿ ಒಂದು ಅರ್ಜಿಯನ್ನು ಕೊಟ್ಟರೆ ಸರ್ಕಾರದವರು ಅದನ್ನು ಪರಿಶೀಲನೆ ಮಾಡಬೇಕು. ಅಧಿಕಾರಿಗಳು ಅದನ್ನು ಪರಿಶೀಲನೆ ಮಾಡಬೇಕು. ಲೇಬರ್ ಕಮಿಷನರ್ ಆಫೀಸಿಗೆ ಕಾರ್ಮಿಕರು ಕನ್ನಡದಲ್ಲಿ ಅರ್ಜಿಯನ್ನು ಕೊಟ್ಟರೆ ಅದಕ್ಕೆ ಮರ್ಯಾದೆ ಇಲ್ಲ, ಇಂಗ್ಲೀಷಿನಲ್ಲಿ ಅರ್ಜಿ ತಂದರೆ ಮಾತ್ರ ಅದಕ್ಕೆ ಮಾನ್ಯತೆ ಕೊಡುತ್ತಾರೆ. ಇದು ಸರಿಯಲ್ಲ. ಆದ್ದರಿಂದ ಕನ್ನಡದ ಮೇಲೆ ನಿಮಗೆ ಮಮತೆ ಇದ್ದರೆ ಇದನ್ನೆಲ್ಲಾ ಕನ್ನಡದಲ್ಲಿ ತೆಗೆದುಕೊಂಡು ಬರಬೇಕೆಂದು ಹೇಳುತ್ತೇನೆ. ಅದೇ ರೀತಿ ಕನ್ನಡದಲ್ಲಿ ಕೋರ್ಟ್ ಕಚೇರಿ ವ್ಯವಹಾರಗಳನ್ನು ಮಾಡಬೇಕೆಂದು ಹೇಳುತ್ತೇನೆ.

ಇನ್ನು ಸರ್ಕಾರದಿಂದ ರಚಿತವಾಗುವ ಬೋರ್ಡ್‌ಗಳಲ್ಲಿ ಲೇಬರ್ ರೆಪ್ರಸೆಂಟೇಶನ್ ಕೊಡಬೇಕೆಂದು ಹೇಳುತ್ತೇನೆ. ಉದಾಹರಣೆಗೆ ಹೌಸಿಂಗ್ ಬೋರ್ಡ್, ಪಿ ಎಫ್. ಕಮಿಟಿ, ಇತ್ಯಾದಿಗಳಲ್ಲಿ ಕಾರ್ಮಿಕ ಪ್ರತಿನಿಧಿಗಳಿಗೆ ಅವಕಾಶ ಕೊಡಬೇಕು. ಈಗ ಬರೇ ಎ.ಐ.ಟಿ.ಯು.ಸಿ.ಸಿ.ಗೆ ಮಾತ್ರ ಕೊಡುತ್ತಿದ್ದೀರಿ. ಅದೇ ರೀತಿ ಐ.ಎನ್.ಟಿ.ಯು.ಸಿ.ಗೂ ಕೊಡಿ ಎಂದು ನಾನು ಹೇಳುವುದು. ಇನ್ನೊಂದು ಸೂಚನೆ ಏನೆಂದರೆ ಈ ಮೇ ದಿನಾಚರಣೆಯನ್ನು ರಜಾ ದಿನವಾಗಿ ನೀವು ಮಾಡಬೇಕು. You must declare May Day as a holiday. The Tamil Nadu Government has done it. You must see that it is declared as a holiday and incorporated in the list of holidays under the Act. ಇದು ಮಹಾರಾಷ್ಟ್ರ, ಬಂಗಾಳ ಆಂಧ್ರಪ್ರದೇಶ ಮುಂತಾದ ಕಡೆಗಳಲ್ಲಿ ಇದೆ. ಆದ್ದರಿಂದ ಮೈಸೂರಿನಲ್ಲಿಯೂ ಇದನ್ನು ಮಾಡಬೇಕೆಂದು ಹೇಳುತ್ತೇನೆ.

(SRI M. S. KRISHNAN)

4-00 P.M.

ಇನ್ನು ನಿಮ್ಮ ಡಿಪಾರ್ಟ್‌ಮೆಂಟನ್ನು ಸ್ಟ್ರೀಮ್‌ಲೈನ್ ಮಾಡಬೇಕೆಂದು ಒಂದು ಮೆಮೊರಾಂಡಂ ಕೊಟ್ಟಿದೆ. ಆದರೆ ನಮ್ಮ ಮೆಮೊರಾಂಡಂಗೆ ಅಕ್‌ನಾಲೆಜ್‌ಮೆಂಟ್ ಕೂಡ ಇಲ್ಲ. My information is that a shabby note has been sent in respect of various points raised in that memorandum. I only request the hon. Minister to discuss with us these matters. We have a labour commissioner. He is a good man. ಅವರು ಒಳ್ಳೆಯವರು ನಿಜ. ಆದರೆ ಅಲ್ಲಿ ಡೈನಾಮಿಕ್ ಆಗಿ ಹೇಗೆ ನಡೆಯಬೇಕೋ ಅದು ನಡೆಯುತ್ತಾ ಇಲ್ಲ. ಅದೂ ಅಲ್ಲದೆ ಅವರು ಒಳ್ಳೆಯ ಕವಿಗಳು, ಮತ್ತು ಸಾಹಿತಿಯಾಗಿದ್ದಾರೆ. ಅವರು ನನಗೆ ಲೇಬರ್ ಡಿಪಾರ್ಟ್‌ಮೆಂಟೇ ಬೇಡ, ಬೇರೆ ಕಡೆಗೆ ಹೋಗುತ್ತೇನೆ ಎಂದು ಹೇಳುತ್ತಿದ್ದಾರಂತೆ. ಆದರೆ ಅವರು ನೌಕರರನ್ನು ಬಹಳ ಹೆರಾಸ್ ಮಾಡುತ್ತಾರಂತೆ. ಆದ್ದರಿಂದ ಅವರನ್ನು ತೆಗೆದು ಬೇರೆಯವರನ್ನು ಏಕೆ ಹಾಕಬಾರದು ? One of the employees I was told, has gone mad and is in the mental hospital and if that is true it does not bring credit to the labour department. ಆದ್ದರಿಂದ ಇದರ ಬಗ್ಗೆ ಸರ್ಕಾರದವರು ಗಮನ ಕೊಡಬೇಕೆಂದು ಹೇಳುತ್ತೇನೆ. A new person must be thought of. Secondly, the Labour Department must be expanded. They must appoint at least two to three more Deputy Labour Commissioners. One Deputy Labour Commissioner for Bangalore Division and one for implementation and evaluation exclusively.

ಇನ್ನೊಂದು ಏನೆಂದರೆ, ಈ ಲೇಬರ್ ಡಿಪಾರ್ಟ್‌ಮೆಂಟ್ ಅಧಿಕಾರಿಗಳಿಗೆ ಅಗತ್ಯವಾಗಿ ಬೇಕಾಗಿರುವಂತಹ ಜೀಪ್‌ಗಳನ್ನು ಕೊಟ್ಟಿಲ್ಲ. ಇಂತಹ ವಾಹನವು ಅವರಿಗೆ ಅಗತ್ಯವಾಗಿ ಬೇಕಾಗಿದೆ. Some of them will be going in employer's cars and who is to protect them from the wrath of the workers? Jeep or a vehicle is an absolute necessity.

ಅದೇ ರೀತಿ ಹೆಡ್ ಆಫೀಸಿನಲ್ಲಿ ಅಡಿಕ್ವೇಟ್ ಸ್ಟಾಫ್ ಇಲ್ಲ, ಹೆಡ್ ಆಫೀಸಿನಲ್ಲಿ ಒಬ್ಬರು ಟೆಕ್ನಿಕಲ್ ಅಸಿಸ್ಟೆಂಟ್ ಇದ್ದಾರೆ. There is a technical assistant who is not of the cadre of Deputy Labour Commissioner. But he gets the reports above the Deputy Labour Commissioner's level and he has to send it to the Joint Commissioner and Commissioner of the Labour Department. Once he wrote to a Labour Commissioner as 'Dear Sir so and so'. That officer said why do you address me like that. You must address me only as Dear Sir. I am your superior officer, ಇನ್ನೂ ಬೇಕಾದಷ್ಟು ವಿಷಯಗಳನ್ನು ಹೇಳಬಹುದಿತ್ತು. ಆದರೆ ಸಮಯವಿಲ್ಲದ ಕಾರಣ ಇಷ್ಟೇ ಹೇಳಬಯಸುತ್ತೇನೆ. ಅದೇ ರೀತಿ ಕಂಟ್ರಾಕ್ಟ್ ಕ್ಯಾರಿಯೇಜಸ್ಸನ್ನು ತೆಗೆದುಹಾಕಿ ರಾಷ್ಟ್ರೀಕರಣ ಮಾಡಬೇಕೆಂದು ಹೇಳುತ್ತೇನೆ. ಇದರ ಬಗ್ಗೆ ನಾನು ಕೆಲವು ಕಟ್ ಮೋಷನ್ಸ್‌ಗಳನ್ನು ಕಳಿಸಿದ್ದೇನೆ. ಅದರ ಬಗ್ಗೆಯೂ ಸರ್ಕಾರದವರು ಗಮನಕೊಡಬೇಕೆಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ

†ಶ್ರೀ ಎಸ್. ಎಚ್. ಪುಟ್ಟರಂಗನಾಥ್ (ಬೇಲೂರು).—ಮಾನ್ಯ ಅಧ್ಯಕ್ಷರೇ, ಈ ದಿವಸ ಮಂಡಿಸಿರತಕ್ಕಂತಹ ಡಿಮ್ಯಾಂಡ್ ನಂ. 3, 4, 26 ಮತ್ತಿತರ ಡಿಮ್ಯಾಂಡುಗಳನ್ನು ಸ್ವಾಗತ ಮಾಡುತ್ತಾ, ಎಲ್ಲಾ ಡಿಮ್ಯಾಂಡುಗಳ ಮೇಲೆ ಮಾತನಾಡುವುದಕ್ಕೆ ಅವಕಾಶ ಇಲ್ಲದಿದ್ದರೂ ಕೂಡ ಈ ಮೋಟಾರ್ ವೆಹಿಕಲ್ಸ್ ಎಂ.ಎಸ್.ಆರ್.ಟಿ.ಸಿ. ಎಕ್ಸೈಸ್ ಹಾಗೂ ಲೇಬರ್ ಈ ಡಿಮ್ಯಾಂಡುಗಳ ಮೇಲೆ ಇರತಕ್ಕಂತಹ ಕೆಲವು ಆರೋಪಗಳು ಏನಿವೆ, ಮತ್ತು ಅವುಗಳನ್ನು ತಡೆಯುವುದಕ್ಕೆ ಏನು ಮಾಡಬೇಕೆಂಬುದರ ಬಗ್ಗೆ ಕೆಲವು ಸಲಹೆಗಳನ್ನು ಕೊಡಬಯಸುತ್ತೇನೆ.

ಸ್ವಾಮಿ, ನಾವು ಏನು ಈ ಡಿಮ್ಯಾಂಡುಗಳ ಮೇಲೆ ಚರ್ಚೆ ಮಾಡುತ್ತಿದ್ದೇವೆ, ಇವು ದೇಶದ ಅಭಿವೃದ್ಧಿ ಕಾರ್ಯಗಳಿಗೆ ಖರ್ಚು ಮಾಡತಕ್ಕಂತಹ ಹಣ ಎಂಬುದನ್ನು ನಾವು ಒಪ್ಪಿಕೊಂಡರೂ, ಇದರ ಬಗ್ಗೆ ಇರುವ ಕೆಲವು ಕುಂದುಕೊರತೆಗಳನ್ನು ಕೂಡ ಸರ್ಕಾರದ ಗಮನಕ್ಕೆ ತರಬೇಕಾಗಿದೆ.

ಈ ಕುಂದುಕೊರತೆಗಳನ್ನು ಕೇವಲ ವಿರೋಧ ಪಕ್ಷದ ನಾಯಕರು ಮಾತ್ರ ಸರ್ಕಾರದ ಗಮನಕ್ಕೆ ತರುತ್ತಾರೆ. ಆದರೆ ನಾವು ಸಹ ಇದನ್ನು ಕಂಡು ಸುಮ್ಮನೆ ಕುಳಿತುಕೊಳ್ಳುವುದಿಲ್ಲವೆಂಬುದನ್ನು ಮಾತ್ರ ಇಲ್ಲಿ ಹೇಳುತ್ತೇನೆ. ಈ ಮೋಟಾರ್ ವೆಹಿಕಲ್ಸ್ ಡಿಪಾರ್ಟ್‌ಮೆಂಟ್ ಎಂಬುದು ಸುಮಾರು 1955 ರಲ್ಲಿ ಪ್ರಾರಂಭವಾಯಿತು. ಇಲ್ಲಿಯ ತನಕ ಇದರಿಂದ ನಮಗೆ ವರ್ಷಕ್ಕೆ ಸುಮಾರು 12 ಕೋಟಿ 73 ಲಕ್ಷ 11 ಸಾವಿರ ಚಿಲ್ಲರೆ ಹಣ ಉತ್ಪತ್ತಿಯಾಗುತ್ತಾ ಇದೆ. ಉತ್ಪತ್ತಿಯಾಗುವುದರ ಜೊತೆಗೆ ನಿಜವಾಗಿಯೂ ಬಹಳ ಕೆಲಸಗಳನ್ನು ಮಾಡುತ್ತಿದ್ದಾರೆಂಬುದನ್ನು ನಾವು ಒಪ್ಪಿಕೊಂಡರೂ ಸಹ, ಈ ಇಲಾಖೆ ಏನಿದೆ, ಇದರಲ್ಲಿರತಕ್ಕಂತಹ ಕೆಲವು ನ್ಯೂನತೆಗಳನ್ನು ನಾವು ಸರಿಮಾಡತಕ್ಕದ್ದು ನಮ್ಮ ಆದ್ಯ ಕರ್ತವ್ಯವೆಂದು ಹೇಳುತ್ತೇನೆ. ಇವತ್ತು ಈ ಡಿಪಾರ್ಟ್‌ಮೆಂಟ್ ಮಾಡತಕ್ಕ ಫಂಕ್ಷನ್ಸ್ ಏನಿವೆ ಅಂದರೆ ಬಹುಶಃ ರಿಜಿಸ್ಟ್ರೇಷನ್ ಆಫ್ ವೆಹಿಕಲ್ಸ್, ಗ್ರ್ಯಾಂಟ್ ಆಫ್ ಪರ್ಮಿಟ್ಸ್, ಗ್ರ್ಯಾಂಟ್ ಆಫ್ ಡ್ರೈವಿಂಗ್ ಲೈಸೆನ್ಸ್ ಅಂಡ್ ಕಂಡಕ್ಟರ್ಸ್ ಲೈಸೆನ್ಸ್, ಕಲೆಕ್ಷನ್ ಆಫ್ ಮೋಟಾರ್ ವೆಹಿಕಲ್ ಟ್ಯಾಕ್ಸಸ್. ಈ ನಾಲ್ಕು ಮುಖ್ಯ ಭಾಗಗಳನ್ನು ಆ ಇಲಾಖೆ ಈಗ ನಿರ್ವಹಿಸಿಕೊಂಡು ಹೋಗುತ್ತಿದೆ. ಈ ಕಾರ್ಯಗಳನ್ನು ನಿರ್ವಹಿಸುವಾಗ ಸಾಮಾನ್ಯ ಜನರಿಗೆ ಆಗುತ್ತಾ ಇರತಕ್ಕ ಕುಂದುಕೊರತೆಗಳನ್ನು ನಮ್ಮಲ್ಲಿ ಬಂದು ಹೇಳುತ್ತಾರೆ. ಸಾಲದ್ದಕ್ಕೆ ಒಂದು ರೆಫರೆನ್ಸ್ ಕೊಡುತ್ತಾರೆ. ಬಹುಶಃ ಅದನ್ನು ನಮ್ಮ ಮಂತ್ರಿಗಳು ಒಪ್ಪುತ್ತಾರೆಂಬ ಆಶಯವನ್ನು ನಾನು ವ್ಯಕ್ತಪಡಿಸುತ್ತೇನೆ. ಇವತ್ತು ರಿಜಿಸ್ಟ್ರೇಷನ್ ಆಗುವಾಗ ಏನೇನು ನ್ಯೂನತೆಗಳಿವೆ ಎಂಬುದನ್ನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ರಿಜಿಸ್ಟ್ರೇಷನ್ ಬ್ರಾಂಚಿನಲ್ಲಿ ಕೆಲಸಮಾಡತಕ್ಕ ಈ ಅಧಿಕಾರಿಗಳು ಏನಿದ್ದಾರೆಯೋ ಆ ಅಧಿಕಾರಿಗಳು ಬಹಳವಾಗಿ ಹಿಂಸೆಯನ್ನು ಜನಗಳಿಗೆ ಕೊಡುತ್ತಿದ್ದಾರೆ. ಇಷ್ಟಿಷ್ಟೇ ಫೀಸುಗಳನ್ನು ಕೊಡಬೇಕೆಂದು ಸರ್ಕಾರದವರು ನಿಗದಿಮಾಡಿದರೆ ಅದರ ಮೇಲೆ ಬೇರೆ ಬೇರೆ ರೀತಿಯಲ್ಲಿ ಫೀಸ್ ಕಲೆಕ್ಟ್ ಮಾಡುತ್ತಾರೆ. ಇದರ ಬಗ್ಗೆ ಅನೇಕ ನಿದರ್ಶನಗಳಿವೆ. ಈಗ ಒಂದು ಕಟುವಾದ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಅದು ಬಹುಶಃ ನಮ್ಮ ಪಕ್ಷದ ಹಿತದೃಷ್ಟಿಯಿಂದಲ್ಲ. ನಾನು ಹಲವುಬಾರಿ ನೋಡಿದ್ದೇನೆ. ಪರ್ಮಿಟ್ಟುಗಳನ್ನು ಕೊಡುವಾಗ ಟೆಂಪೊರರಿ ಪರ್ಮಿಟ್, ಪಕ್ಕಾ ಪರ್ಮಿಟ್—ಹೀಗೆ ಅಲ್ಲಿ ಕೊಡುತ್ತಿದ್ದಾರೆ. ಆದರೆ ಇವತ್ತು ಸಮಗ್ರವಾಗಿ ಎಲ್ಲಾ ಜಿಲ್ಲೆಗಳಲ್ಲಿಯೂ ಬಸ್ ರಾಷ್ಟ್ರೀಕರಣ ಮಾಡುವುದಕ್ಕಾಗಲಿಲ್ಲ. ರಾಷ್ಟ್ರೀಕರಣ ಮಾಡುವ ಧ್ಯೇಯವಿದ್ದರೂ ಅವರಿಗೆ ಸಾಕಷ್ಟು ಶಕ್ತಿ ಇಲ್ಲವೆಂಬುದನ್ನು ನಾವು ಒಪ್ಪಿಕೊಳ್ಳಬೇಕಾಗುತ್ತದೆ. ನಮಗೆ ಬರುತ್ತಾ ಇರತಕ್ಕ ಅಂಕಿ ಅಂಶಗಳ ಆಧಾರದ ಮೇಲೆ ಇಷ್ಟೆಲ್ಲಾ ಇದ್ದರೂ ಕೂಡ ಈ ದೇಶದಲ್ಲಿ ಅನೇಕ ಕಷ್ಟಗಳು ಬರುತ್ತಿವೆ. ಆ ರೀತಿ ಬರುತ್ತಾ ಇರುವುದನ್ನು ತೊಲಗಿಸುವುದು ಸುಲಭವಾದ ಕೆಲಸವಲ್ಲ. ಇಷ್ಟಾದರೂ ಗ್ರ್ಯಾಂಟ್ ಆಫ್ ಪರ್ಮಿಟ್ ಯಾವ ರೀತಿ ನಡೆಯುತ್ತಿದೆಯೆಂಬುದನ್ನು ಸರ್ಕಾರದ ಗಮನಕ್ಕೆ ತರತಕ್ಕದ್ದು ನನ್ನ ಕರ್ತವ್ಯ. ಒಂದು ವೇಳೆ ಈ ವಿಚಾರವನ್ನು ಸರ್ಕಾರದ ಗಮನಕ್ಕೆ ತರದೇ ಹೋದರೆ ಲೋಪವಾಡಿದಂತಾಗುತ್ತದೆಂಬ ಮಾತನ್ನು ನಾನು ಇವತ್ತು ಹೇಳುತ್ತಿದ್ದೇನೆ. ಸ್ವಾಮಿ, ಇವತ್ತು ಎಲ್ಲಾ ಖಾಸಗೀ ಬಸ್ಸುಗಳಿಗೂ ಪರ್ಮಿಟ್ ಕೊಡುತ್ತಾರೆ. ಓಡಿಸದೇ ಇದ್ದರೂ ಕೂಡ ನ್ಯಾಷನಲೈಜ್ಡ್ ರೂಟ್ಸ್‌ನಲ್ಲಿ ಪ್ರೈವೇಟ್ ಬಸ್ಸುಗಳಿಗೂ ಲೈಸೆನ್ಸ್ ಕೊಡುವುದನ್ನು ನಾನು ಒಪ್ಪತಕ್ಕವನಲ್ಲ. ನಾವೇ ಕಾನೂನು ಮಾಡಿ ಕಾನೂನಿಗೆ ವಿರೋಧವಾಗಿ ನಾವೇ ವರ್ತಿಸುವುದು ಸರಿಯಾದ ಮಾರ್ಗವಲ್ಲ. ಇವತ್ತು ಸುಮಾರು 300 ಟೆಂಪೊರರಿ ಪರ್ಮಿಟ್ಟುಗಳನ್ನು ಈ ದೇಶದಲ್ಲಿ ಇಷ್ಯೂ ಮಾಡಿದ್ದಾರೆ. ಅನೇಕ ಕಡೆಗಳಲ್ಲಿ ರಾಷ್ಟ್ರೀಕರಣ ಮಾರ್ಗದಲ್ಲಿ ಬಸ್ಸುಗಳು ಓಡುತ್ತಿವೆ. ನ್ಯಾಷನಲೈಸ್ಡ್ ರೂಟ್‌ಗಳಲ್ಲಿ ಬಸ್ಸುಗಳಿಗೆ ಪರ್ಮಿಟ್ ಇಷ್ಯೂ ಮಾಡಿದರೆಂಬ ಬಗ್ಗೆ ಯೋಚನೆ ಮಾಡಿದರೆ ನನಗೆ ಇದರಲ್ಲಿ ಏನೋ ಅನುಮಾನಕ್ಕೆ ಆಸ್ಪದ ಇವೆ ಎಂದು ಗೊತ್ತಾಗುತ್ತದೆ. ಇವತ್ತು ಈ ಸದನದಲ್ಲಿ ಅನೇಕ ಬಾರಿ ಅನೇಕ ಪ್ರಶ್ನೆಗಳನ್ನು ಅನೇಕ ಸದಸ್ಯರು ಈ ವಿಚಾರದಲ್ಲಿ ಹಾಕಿದರೂ ಕೂಡ ಇವತ್ತು ಅದನ್ನು ಸರ್ಕಾರದವರು ಕಂಟ್ರೋಲ್ ಮಾಡುವುದಕ್ಕೆ ಆಗಲಿಲ್ಲ. ಇದಕ್ಕೆ ಕಾರಣ ಅಧಿಕಾರಿಗಳು ಪರ್ಮಿಟ್ಸ್ ಕೊಡುವುದರಲ್ಲಿ ನಾನಾ ವಿನ್ಯಾಸಗಳನ್ನು ಮಾಡಿಕೊಂಡು ಕೊಡುತ್ತಿರುವುದೇ ಆಗಿದೆ. ಇದರಿಂದ ಸರ್ಕಾರಕ್ಕೆ ಕೆಟ್ಟ ಹೆಸರು ಬಂದಿದೆ. ಎಂ.ಎಸ್.ಆರ್.ಟಿ.ಸಿ.ಯವರು ಕೊಟ್ಟಿರುವ ವರದಿಯಲ್ಲಿ ಒಂದು ಮಾತನ್ನು ಹೇಳಿದ್ದಾರೆ. 1971-72ನೇ ಸಾಲಿಗೆ 430 ಚಾಸಿಗಳನ್ನು ಸಪ್ಲೈ ಮಾಡಲು ಆರ್ಡರ್ಸ್ ಪ್ಲೇಸ್ ಮಾಡಿದರೆ ನಮಗೆ ಬಂದಿರತಕ್ಕದ್ದು ಕೇವಲ 85 ಚಾಸಿಗಳು ಮಾತ್ರ. ನಮಗೆ ಸಿಕ್ಕಿದ್ದು ಅಷ್ಟೇ ಎಂದು ಹೇಳುತ್ತಾರೆ. ನಮ್ಮಲ್ಲಿ ಹಣವಿಲ್ಲವೆಂದು ಹೇಳುತ್ತಾರೆ. ಆದ್ದರಿಂದ ಇವತ್ತು ಪ್ರೈವೇಟ್ ಬಸ್ಸುಗಳು ಏನಿವೆಯೋ ಅವನ್ನು ನ್ಯಾಷನಲೈಜ್ ಮಾಡುವುದು ಸೂಕ್ತ. ಇವತ್ತು ಬಸ್ಸುಗಳನ್ನು ನ್ಯಾಷನಲೈಜ್ ಮಾಡಿ ನೀವು ಒಬ್ಬರಿಗೆ ಒಂದು ರೀತಿ, ಇನ್ನೊಬ್ಬರಿಗೆ ಇನ್ನೊಂದು ರೀತಿಯಲ್ಲಿ ಪರ್ಮಿಟ್ ಕೊಡುವುದು ಸರಿಯಲ್ಲ. ಇದು ಜಮೀನ್ದಾರರಿಂದ ಜಮೀನು ಕಿತ್ತುಕೊಂಡು ಪುನಃ ಇನ್ನೊಬ್ಬ ಜಮೀನ್ದಾರರಿಗೆ ಬೇರೆ ಯಾವುದೋ ರೀತಿಯಲ್ಲಿ ಕೊಡುವಂತಾಗುತ್ತದೆ. ಬಸ್ಸುಗಳನ್ನು ನ್ಯಾಷನಲೈಜ್ ಮಾಡಿ

(ಶ್ರೀ ಎಸ್. ಎಚ್. ಪುಟ್ಟರಂಗನಾಥ್)

ಕೊಳ್ಳುವಾಗ ಡಿಪ್ರೀಸಿಯೇಷನ್ ಕಳೆದು ನಮಗೆ ಕಡಿಮೆ ದರದಲ್ಲಿ ಕೊಟ್ಟರೆ ಆಗ ಈ ಒಂದು ಕೊರತೆಯನ್ನು ನೀಗಿಸಲಿಕ್ಕೆ ಸಾಧ್ಯವಾಗುತ್ತದೆಂದು ಹೇಳಬಯಸುತ್ತೇನೆ. ಇದರಿಂದ ಎಂ.ಎಸ್.ಆರ್.ಟಿ.ಸಿ. ನಲ್ಲಿ ಇರತಕ್ಕ ತೊಂದರೆಗಳನ್ನು ಪರಿಹರಿಸಬಹುದು. ಆಗ ಯಾವುದೇ ಒಂದು ಟೀಕೆಗೂ ದಾರಿ ಕೊಡದಂತೆ ಮಾಡಬಹುದೆಂಬ ಮಾತನ್ನು ನಾನು ಒತ್ತಿ ಹೇಳುತ್ತೇನೆ. ಇವತ್ತು ಎಂ.ಎಸ್.ಆರ್.ಟಿ.ಸಿ. ಬಸ್ಸುಗಳು ಓಡುವ ರೂಟಿನಲ್ಲಿ ಪ್ರೈವೇಟ್ ಬಸ್ಸುಗಳೂ ಸಹ ಓಡುತ್ತಿವೆ. ಎಂ.ಎಸ್.ಆರ್.ಟಿ.ಸಿ.ಯ ಎರಡು ಬಸ್ಸುಗಳು ಒಂದು ರೂಟಿನಲ್ಲಿ ಓಡಾಡುತ್ತಿದ್ದರೆ, ಅದೇ ರೂಟಿನಲ್ಲಿ 12 ಪ್ರೈವೇಟ್ ಬಸ್ಸುಗಳಿಗೆ ಲೈಸೆನ್ಸ್ ಕೊಟ್ಟಿದ್ದಾರೆ. ಉದಾಹರಣೆಗೆ ಕೊಳ್ಳೇಗಾಲದಿಂದ ಬೆಂಗಳೂರಿಗೆ ಎಂ.ವೈ.ಎ. 639, ಎಂ.ವೈ.ಎ. 999, ಎಂ.ವೈ.ಎ. 555, ಎಂ.ಬಿ.ಎಸ್. 7731, ಎಂ.ವೈ.ಡಿ. 4274, ಎಂ.ವೈ.ಡಿ. 6099, ಎಂ.ವೈ.ಎಂ. 5278, ಎಂ.ವೈ.ಎನ್. 5122, ಎಂ.ಐ.ಡಿ. 7140, ಮತ್ತು ಎಂ.ಐ.ಡಿ. 5009—ಈ ನಂಬರಿನ ಬಸ್ಸುಗಳಿಗೆ ಲೈಸೆನ್ಸ್ ಕೊಟ್ಟಿದ್ದಾರೆ. ಈ ರೀತಿಯಾಗಿ ಲೈಸೆನ್ಸ್ ಕೊಟ್ಟಿರುವುದರಿಂದ ಅವು ಅಲ್ಲಿ ಓಡಾಡುತ್ತಿರುವುದರಿಂದ ಎಂ.ಎಸ್.ಆರ್.ಟಿ.ಸಿ. ಬಸ್ಸುಗಳಲ್ಲಿ ಸುಮಾರು 27 ಲಕ್ಷ ರೂಪಾಯಿಗಳಷ್ಟು ನಷ್ಟವಾಗುತ್ತಿದೆ ಎಂಬ ಮಾತನ್ನು ನಾನು ಇಲ್ಲಿ ಹೇಳಬಯಸುತ್ತೇನೆ. ನಂತರ ಮೋಟಾರ್ ವೆಹಿಕಲ್ಸ್ ಡಿಪಾರ್ಟ್‌ಮೆಂಟಿನಲ್ಲಿ ಹೆರಾಸ್‌ಮೆಂಟ್ ಎಂಬುದಾಗಿ ನಾವೇನು ಹೇಳುತ್ತಿದ್ದೇವೋ ಅದು ಈಗ ಬಹಳ ಜಾಸ್ತಿಯಾಗುತ್ತಲಿದೆ. ಅದನ್ನು ತಾವು ಒಪ್ಪಿಕೊಳ್ಳಬೇಕು ಮತ್ತು ವಿರೋಧಪಕ್ಷದ ನಾಯಕರೂ ಸಹ ಒಪ್ಪಿಕೊಳ್ಳಬೇಕು. ಇನ್ನು ಕಂಡಕ್ಟರ್ ಮತ್ತು ಡ್ರೈವರುಗಳಿಗೆ ಲೈಸೆನ್ಸ್ ಇಷ್ಯೂ ಮಾಡುವಾಗ ಅವರೆಲ್ಲರೂ ಇಷ್ಟೇ ದುಡ್ಡು ಕೊಡಬೇಕೆಂಬ ನಿಗದಿಯನ್ನು ಆ ಆಫೀಸಿನವರು ಮಾಡಿಕೊಂಡಿದ್ದಾರೆ. ನಿಮಗೆ ಹೇಗೆ ಗೊತ್ತು ಎಂದು ನನ್ನನ್ನು ಕೇಳಬಹುದು. ನಾನು 1962—63ನೇ ಇಸವಿಯಲ್ಲಿ ಈ ಇಲಾಖೆಯಲ್ಲಿ ಕೆಲಸ ಮಾಡಿದ್ದೇನೆ. ಆ ವರ್ಷದಲ್ಲಿ ಅಲ್ಲಿ ಏನೇನು ನಡೆದಿದೆ ಎಂಬುದನ್ನು ಯಾವ ಸಂಕೋಚವಿಲ್ಲದೆ ಹೇಳಬಯಸುತ್ತೇನೆ. ಆ ಇಲಾಖೆಯಲ್ಲಿ ಯಾರು ಲಂಚರುಷುವತ್ತು ತೆಗೆದುಕೊಳ್ಳದೇ ಇರುವ ಅಧಿಕಾರಿ ಇದ್ದಾರೆಂಬುದನ್ನು ಇವರು ಹೇಳಲಿ. ನಾನು ಈ ವಿಷಯವನ್ನು ಮೊದಲಿನಿಂದಲೂ ಹೇಳುತ್ತಾ ಇದ್ದೇನೆ. ಆ ಇಲಾಖೆಯಲ್ಲಿ ನಾನು ನೋಡಿದ ಹಾಗೆ ಹಿಂದಿನ ಸರ್ಕಾರಗಳಿದ್ದಾಗ್ಯೂ, ಈಗಿನ ಸರ್ಕಾರದಲ್ಲಿಯೂ ಆ ಇಲಾಖೆಯ ತಪ್ಪುಗಳನ್ನೂ, ಲೋಪದೋಷಗಳನ್ನೂ ನಾವು ಈ ಸಭೆಯಲ್ಲಿ ಹೇಳುತ್ತಲೇ ಇದ್ದೇವೆ.

Sri H. S. SIDDAPPA.—Hearty Congratulations.

Sri H. D. DEVE GOWDA.—Most Welcome.

ಶ್ರೀ ಎಸ್. ಎಚ್. ಪುಟ್ಟರಂಗನಾಥ್.—ಇನ್ನು ಮೋಟಾರ್ ವೆಹಿಕಲ್ಸ್ ಟ್ಯಾಕ್ಸನ್ನು ಕಲೆಕ್ಟ್ ಮಾಡುವಾಗ ತಮಗೇ ಗೊತ್ತಿರಬಹುದು. ಇವತ್ತು ನಮ್ಮಲ್ಲಿ ಓಡಾಡುತ್ತಿರುವ ಬಸ್ಸುಗಳಿಗೆ ಇಂಟರ್ ಸ್ಟೇಟ್ ಪರ್ಮಿಟ್‌ಗಳನ್ನು ಇಷ್ಯೂ ಮಾಡಿರುವುದನ್ನು ಈ ಸಂದರ್ಭದಲ್ಲಿ ನಾನು ಹೇಳುತ್ತಾ ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶದಲ್ಲಿ 262 ಪರ್ಮಿಟ್‌ಗಳು, ತಮಿಳುನಾಡಿನಲ್ಲಿ 38 ಪರ್ಮಿಟ್‌ಗಳು ಕೇರಳಾದಲ್ಲಿ 37 ಪರ್ಮಿಟ್‌ಗಳನ್ನು ಇಷ್ಯೂ ಮಾಡಿದ್ದಾರೆ. ಇವಕ್ಕೆ ಮೈಸೂರು ಮತ್ತು ಆಂಧ್ರಾ ರಾಜ್ಯಗಳ ಲಿಂಕ್ಸ್ ಇವೆ. ಮೈಸೂರು—ಮಹಾರಾಷ್ಟ್ರ ಲಿಂಕಿಗೆ ಒಂದು ಪರ್ಮಿಟ್, ಮೈಸೂರು ಗೋವಾ ಲಿಂಕ್‌ನಲ್ಲಿ 19 ಪರ್ಮಿಟ್ಟುಗಳಿವೆ. ಇವತ್ತು ಆ ಇಲಾಖೆಯಲ್ಲಿ ಕಲೆಕ್ಷನ್ ಆಗುವ ಹಣ ಎಷ್ಟಿದೆಯೆಂಬುದನ್ನು ಹೇಳಬಯಸುತ್ತೇನೆ. ನಾನೂ ಹಿಂದೆ ಒಂದಾವರ್ತಿ ಎಸ್ಟಿಮೇಟ್ ಕಮಿಟಿಯಲ್ಲಿ ಒಬ್ಬ ಸದಸ್ಯನಾಗಿದ್ದೆ. ನಾವು ಒಂದಾವರ್ತಿ ಆಂಧ್ರಕ್ಕೆ ಹೋಗಿದ್ದಾಗ ಅಲ್ಲಿ ಈ ಇಂಟರ್ ಸ್ಟೇಟ್ ಬಸ್ ವಿಚಾರ ಬಂದಾಗ್ಗ ಅವರು ಹೇಳಿದರು ಮೈಸೂರು ರಾಜ್ಯಕ್ಕೆ ಆಂಧ್ರದಿಂದ ಕೊಡಬೇಕಾದ್ದು ಮೂರೂವರೆ ಕೋಟಿ ಇದೆ ಎಂದೂ ಮತ್ತು ಆಂಧ್ರಕ್ಕೆ ಮೈಸೂರು ರಾಜ್ಯದಿಂದ ಬರಬೇಕಾದ್ದು ಎರಡೂವರೆ ಕೋಟಿ ಇದೆಯೆಂದೂ ಅವರು ತಿಳಿಸಿದರು. ಅಂದಾಗ ಆಂಧ್ರದಿಂದ ನಮಗೆ ಬರಬೇಕಾದ ಹಣ ಇದ್ದಾಗ ಇಲ್ಲಿ ನಮಗೆ ಹಣದ ಕೊರತೆಯಿದ್ದಾಗಲೂ ಇವರೇಕೆ ಅದನ್ನು ವಸೂಲ್ಮಾಡಲಿಲ್ಲ.

ಇನ್ನು ಎಂ. ಎಸ್. ಆರ್.ಟಿ. ಸಿ. ಇದು ಅಸ್ತಿತ್ವತಕ್ಕೆ ಬಂದದ್ದು 1960 ನೇ ಮಾರ್ಚಿಯಲ್ಲಿ ಎಂದು ಕಾಣುತ್ತದೆ. ನಮ್ಮ ಹಾಸನ ಜಿಲ್ಲೆಯಲ್ಲಿ ಓಡುತ್ತಿದ್ದ ಎಲ್ಲಾ ಖಾಸಗೀ ಬಸ್ಸುಗಳನ್ನೂ ನ್ಯಾಷನಲೈಸ್ ಮಾಡಿ ಅಲ್ಲಿ ಸರ್ಕಾರದವರು ಬಸ್ಸನ್ನು ಓಡಿಸಿದ್ದು ತಾ. 1-10-1969 ರಲ್ಲಿ. ಇದನ್ನು ಇವರು ದೇಶದ ಹಿತದೃಷ್ಟಿಯಿಂದ ಮಾಡಿದ್ದಾರೆ. ಆಯಿತು. ಇನ್ನು ಈ ಬಸ್ ನ್ಯಾಷನಲೈಜೇಷನ್ನು ಜಾರಿಗೆ ತಂದಮೇಲೆ ಅಲ್ಲಿ ಸ್ಥಾಪಿತವಾಗಿರತಕ್ಕ ಆಫೀಸು ಎಷ್ಟರಮಟ್ಟಿಗೆ ಕೆಲಸ ಮಾಡುತ್ತಿದೆ ಎಂಬುದನ್ನು ಸ್ವಲ್ಪ ಅವಲೋಕನ ಮಾಡಬೇಕಾಗಿದೆ. ಈ ದಿವಸ ನಮಗೆ ಆ ಎಂ. ಎಸ್. ಆರ್.ಟಿ. ಸಿ.

ರಿಪೋರ್ಟನ್ನು ಕೊಟ್ಟಿದ್ದಾರೆ. ಹಿಂದೆ ಅರ್ಥಸಚಿವರಾಗಿದ್ದ ಶ್ರೀ ರಾಮಕೃಷ್ಣ ಹೆಗ್ಗಡೆಯವರು ಏನೋ ಮೋಡಿ ಮಾಡಿ ಅವರು ಬಡ್ಜೆಟ್ಟನ್ನು ಮಂಡಿಸುತ್ತಿದ ಹಾಗೆ ಈ ದಿವಸ ಈ ಇಲಾಖೆಯವರು 3 ಪುಟದ ಒಂದು ರಿಪೋರ್ಟನ್ನು ಕೊಟ್ಟಿದ್ದಾರೆ. ಇದರಲ್ಲಿ ಏನಾಗಿದೆ ಏನೆಂಬುದು ಒಂದೂ ಗೊತ್ತಾಗುವುದಿಲ್ಲ. ಇದರ ಬಗ್ಗೆ ಇನ್ನೂ ಡೀಟೈಲ್ಡ್ ರಿಪೋರ್ಟನ್ನು ಕೊಡಬೇಕು ಮತ್ತು ಅದನ್ನು ಚರ್ಚೆಮಾಡುವುದಕ್ಕೆ ಇಲ್ಲಿ ಅವಕಾಶ ಕೂಡ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ದಿವಸ ಆ ಎಂ. ಎಸ್. ಆರ್. ಟಿ. ಸಿ. ಆಫೀಸಿನಲ್ಲಿ 22809 ಜನ ಕೆಲಸ ಮಾಡುತ್ತಿದ್ದಾರೆ. ಇದು as on 31-3-1972. ಅಂದರೆ ಅಲ್ಲಿ ಅಷ್ಟು ಜನರನ್ನು ಕೆಲಸಕ್ಕೆ ಅಪಾಯಿಂಟ್ ಮಾಡಿಕೊಂಡಿದ್ದಾರೆ. ಅಷ್ಟು ಜನರನ್ನು ಕೆಲಸಕ್ಕೆ ನೇಮಕ ಮಾಡಿಕೊಳ್ಳುತಕ್ಕ ಆ ಒಂದು ಸಂದರ್ಭವಿದ್ದಾಗ ಕಾನೂನು ಬದ್ಧವಾಗಿ ಹರಿಜನ ಗಿರಿಜನರಿಗೆ ಕೊಡಬೇಕಾಗಿದ್ದ ಪರ್ಸೆಂಟೇಜ್ ಪ್ರಕಾರ ನೌಕರಿಗಳನ್ನು ಕೊಟ್ಟಿದ್ದಾರೆಯೇ ಎಂದು ಪ್ರಶ್ನೆಮಾಡಬಯಸುತ್ತೇನೆ. ಈ ವಿಚಾರದಲ್ಲಿ ಈ ವರದಿಯಲ್ಲಿ ಏನೂ ಹೇಳಿಲ್ಲ. ನಾವೆಲ್ಲರೂ ಇಲ್ಲಿ ಸಮಾಜವಾದವನ್ನು ಹೇಳಿದ್ದೂ ಹೇಳಿದ್ದೇ. ಪ್ರಗತಿಪರನೀತಿಯನ್ನು ಪ್ರತಿಪಾದನೆ ಮಾಡಿದ್ದೂ ಮಾಡಿದ್ದೆ. ಆದರೆ ಎಲ್ಲಿ ಏನು ತಿಳಿಸಬೇಕೋ ಅದನ್ನು ತಿಳಿಸುತ್ತಿಲ್ಲ. ಇಂಥ ಏನೂ ಇಲ್ಲದ ಅಂದರೆ ವಿವರಗಳಿಲ್ಲದ ವರದಿಯನ್ನು ಏತಕ್ಕೆ ಕೊಡುತ್ತಾರೆ? ಈ ಆಫೀಸಿನಲ್ಲಿ ಇನ್ನೂ ಅನೇಕ ನ್ಯೂನತೆಗಳಿರುತ್ತವೆ. ದೊಡ್ಡ ದೊಡ್ಡ ಹುದ್ದೆಗಳನ್ನು ಭರ್ತಿಮಾಡುವಾಗ ಯಾವ ನೋಟಿಫಿಕೇಷನ್ನುಗಳೂ ಇರುವುದಿಲ್ಲ. ಸಣ್ಣ ಪುಟ್ಟ ಪೀವನ್ನುಗಳ ಕೆಲಸಗಳನ್ನು ಕೊಡತಕ್ಕ ಕಾಲದಲ್ಲಿ ನೋಟಿಫಿಕೇಷನ್ ಮತ್ತು ರಿಜರ್ವೇಷನ್ ಇವುಗಳನ್ನೆಲ್ಲಾ ಕ್ರಮವಾಗಿ ನೋಟಿಫೈ ಮಾಡುತ್ತಿದ್ದಾರೆ. ಇಂಥ ಅವ್ಯವಸ್ಥೆಗಳನ್ನು ಸರಿಪಡಿಸಬೇಕಾಗಿದ್ದರೆ ಆ ಸ್ಟ್ಯಾಟ್ಯುಟರಿ ಬಾಡಿಗಳಿಗೆ ಹೇಗೆ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್‌ಗಳನ್ನು ಮಾಡಿದ್ದಾರೋ ಹಾಗೇ ಇದಕ್ಕೂ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್‌ಗಳನ್ನು ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಅಷ್ಟೆ ಅಲ್ಲದೆ ಇಲ್ಲಿಯತನಕ ಏನು ಇವರು ಈಗಾಗಲೇ ಭರ್ತಿಮಾಡಿದ್ದಾರೆ ಆ 22 ಸಾವಿರ ಚಿಲ್ಲರೆ ಜನರನ್ನು ಅವರಲ್ಲಿ ಯಾರು ಹರಿಜನ ಗಿರಿಜನರಿಲ್ಲದಿರುವ ಕಾರಣ ಇನ್ನು ಮುಂದಕ್ಕೆ ಅಲ್ಲಿ ಭರ್ತಿಮಾಡತಕ್ಕ ಹುದ್ದೆಗಳನ್ನೆಲ್ಲಾ ಹರಿಜನ ಗಿರಿಜನರಿಗೇ ರಿಜರ್ವ್ ಮಾಡುತ್ತೀರಾ ಎಂದು ಕೇಳುತ್ತೇನೆ?

ಇನ್ನೊಂದು ಅತ್ಯಾಶ್ಚರ್ಯಕರವಾದ ವಿಚಾರ ಎಂದರೆ 1967 ರಲ್ಲಿ ಸರ್ಕಾರದಲ್ಲಿ ಯಾರು ಟ್ರಾನ್ಸ್‌ಪೋರ್ಟ್ ಆಡಳಿತವನ್ನು ವಹಿಸಿಕೊಳ್ಳುತ್ತಿದ್ದರೋ ಆ ಮಂತ್ರಿಗಳು ಈ ಸಂಸ್ಥೆಗೆ ಎಕ್ಸ್ ಅಫಿಷಿಯೋ ಚೇರ್ಮನ್ನರಾಗಿರುತ್ತಿದ್ದರು. ಈಗ ಅದನ್ನು ಬದಲಾಯಿಸಿ ಆ ಸ್ಥಾನದಲ್ಲಿ ಒಬ್ಬ ಪ್ರತ್ಯೇಕ ಚೇರ್ಮನ್ನರನ್ನು ನೇಮಕ ಮಾಡಿದ್ದಾರೆ. ಇದರಿಂದ ಸರ್ಕಾರಕ್ಕೆ ಪ್ರತಿ ತಿಂಗಳೂ ಒಂದು ಸಾವಿರ ರೂಪಾಯಿ ಹಣ ವೃಥಾ ವ್ಯಯವಾಗುತ್ತಿದೆ. ಇದನ್ನು ಉಳಿಸುವುದಕ್ಕೆ ಈಗ ಸಾಧ್ಯವಿಲ್ಲವೇ? ಆದರೆ ನಾನು ಕೇಳುತ್ತಿರುವುದರಲ್ಲಿ ಅಲ್ಲಿ ಆ ಚೇರ್ಮನ್ ಕೆಲಸವನ್ನು ಸಾಕ್ಷಾತ್ತಾಗಿ ಒಬ್ಬ ಎರಡನೇ ದರ್ಜೆಯ ಕ್ಲಾರ್ಕ್, ಪ್ರಿಂಟಿಂಗ್ ಮತ್ತು ಸ್ಟೇಷನರಿ ಬಾಬಿನಲ್ಲಿರತಕ್ಕ ವ್ಯಕ್ತಿ ನಡೆಸುತ್ತಿದಾನೆಂದು ತಿಳಿದು ಬಂದಿದೆ ಅದೇ ಕ್ಲಾರ್ಕ್ ಮೊನ್ನೆ 1972 ರಲ್ಲಿ ನಡೆದ ಜನರಲ್ ಎಲೆಕ್ಷನ್ ಬಗ್ಗೆ ಒಬ್ಬ ಎಕ್ಸ್ ಮೇಯರ್ ಚುನಾವಣೆಗಾಗಿ 30 ಸಹಸ್ರ ರೂಪಾಯಿಗಳನ್ನು ಟಿ. ಸೀಸ್ ಗಳಿಂದಲೂ ಮತ್ತು ಡಿವಿಜನಲ್ ಕಂಟ್ರೋಲರುಗಳಿಂದಲೂ ಕಲೆಕ್ಟ್ ಮಾಡಿ ಕೊಟ್ಟಿದ್ದಾನೆಂದು ಜನರಾಡಿಕೊಳ್ಳುತ್ತಿದ್ದಾರೆ. ಇಂಥಾದ್ದಕ್ಕೆಲ್ಲಾ ಅವಕಾಶ ಕೊಟ್ಟರೆ ನಮ್ಮ ಸರ್ಕಾರ ಟೀಕೆಗೆ ಗುರಿಯಾಗಲೇ ಬೇಕಾಗುವುದು.

ಇನ್ನು ಮೈಸೂರು ಡಿವಿಜನ್ನಿನಲ್ಲಿ ಯಾವಾಗಲೂ ಟೈರುಗಳು ಕಳುವಾಗುತ್ತಿವೆಯೆಂಬ ದೂರುಗಳನ್ನು ನಾವು ಕೇಳಿಯೂ ಇದ್ದೇವೆ ಮತ್ತು ಪೇಪರುಗಳಲ್ಲೂ ಕೂಡ ಓದಿದ್ದೇವೆ. ಆದರೆ ಹಾಗೆ ಕಳುವಾದ ಟೈರುಗಳೇನೂ ಇಲ್ಲಿಯವರೆಗೂ ಒಂದೂ ಪತ್ತೆಯಾಗಿಲ್ಲ. ಯಾರು ಅವನ್ನು ಕಳುವು ಮಾಡುತ್ತಿದ್ದಾರೆಂಬುದನ್ನು ಪತ್ತೆಮಾಡುವುದಕ್ಕಾಗಿಲ್ಲ. ಆದರೂ ಇಲ್ಲಿ ಒಂದು ವಿಚಾರ ನಾವು ಗಮನಿಸಬೇಕಾದ್ದು ಏನೆಂದರೆ ಅಲ್ಲಿ ಇರತಕ್ಕ ಚೇರ್ಮನ್ನರಿಗೆ ಸೀಕ್ರೆಟ್ ಫಂಡನ್ನು ಬೇರೆ ಕೊಟ್ಟಿದ್ದಾರೆ. ಅದು 30 ಸಾವಿರ ಇಟ್ಟಿದ್ದಾರೆ. ಅದನ್ನು ಯಾರು ಈ ಕಳವಾಗತಕ್ಕ ಸಾಮಾನುಗಳ ಬಗ್ಗೆ ಒಂದು Information ಕೊಡುತ್ತಾರೋ ಅಂಥವರಿಗೆ ರಿವಾರ್ಡ್ ಕೊಡುವುದಕ್ಕೆ ಅದನ್ನು ಕೊಟ್ಟಿದೆ. ಆದರೆ ಇಲ್ಲಿಯವರೆಗೂ ಎಷ್ಟು ಜನರಿಗೆ ಯಾವ ಯಾವ ಸಂದರ್ಭದಲ್ಲಿ ಎಷ್ಟು ಹಣವನ್ನು ರಿವಾರ್ಡ್ ರೂಪದಲ್ಲಿ ಕೊಟ್ಟಿದ್ದಾರೆಂಬುದನ್ನು ವಿವರವಾಗಿ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ. ಈ ವಿಚಾರಗಳನ್ನೆಲ್ಲಾ ಈಗ ನಮಗೆ ಕೊಟ್ಟಿರತಕ್ಕ ವರದಿಯಲ್ಲಿ ನಮೂದಿಸಿದ್ದರೆ ಚೆನ್ನಾಗಿತ್ತು. ಆದ್ದರಿಂದ ಈ ವರೆಗೆ ಹೇಗೆ ಎಷ್ಟು ಹಣವನ್ನು ಖರ್ಚುಮಾಡಿದ್ದಾರೆಂಬುದಕ್ಕೆ ವಿವರಗಳನ್ನು ಕೊಡಬೇಕು. ಇನ್ನು ಹೀಗೆ ಒಬ್ಬ ಪ್ರತ್ಯೇಕ ಚೇರ್ಮನ್ನನ್ನು ನೇಮಕ ಮಾಡಿದ್ದರಿಂದ ಸರ್ಕಾರಕ್ಕೆ ಪ್ರತಿ ವರ್ಷ 12 ಸಾವಿರ ರೂಪಾಯಿ ನಷ್ಟವಾಗುತ್ತಿದೆ ಆದ್ದರಿಂದ ಇವರನ್ನು ರದ್ದು ಮಾಡಿ

(ಶ್ರೀ ಎಸ್. ಎಚ್. ಪುಟ್ಟರಂಗನಾಥ್)

ಮೊದಲಿದ್ದ ಹಾಗೆ ಟ್ರಾನ್ಸ್‌ಪೋರ್ಟ್ ಮಂತ್ರಿಗಳನ್ನು ಇದಕ್ಕೆ ಎಕ್ಸ್‌ಅಫಿಷಿಯೋ ಚೇರ್ಮನ್ನರಾಗಿ ಮಾಡುವುದು ಒಳ್ಳೆಯದೆಂದು ಸಲಹೆ ಮಾಡುತ್ತೇನೆ.

ಇನ್ನು ಇವರು ಸ್ಟೋರ್ಸ್ ಪರ್ಚೇಸ್ ಕಮಿಟಿಯವರಿಂದ ಬಸ್ಸುಗಳನ್ನು ಕೊಳ್ಳತಕ್ಕಸಂದರ್ಭದಲ್ಲಿ ಸರಿಯಾದ ಷರತ್ತುಗಳನ್ನು ಹಾಕದೆ ಬಸ್ಸುಗಳನ್ನು ಕೊಳ್ಳುತ್ತಿದ್ದಾರೆಂಬ ಟೀಕೆ ಇದೆ. ಇದರ ಕಡೆಗೆ ಸರ್ಕಾರದವರು ಕೂಡಲೇ ಗಮನಕೊಡಬೇಕು.

ಇನ್ನು ಡೈಲಿ, ವೀಕ್ಲಿ ಮತ್ತು ಮಂತ್ಲಿ ಷೆಡ್ಯೂಲುಗಳ ಛಾರ್ಟರನ್ನು ಹಾಕಿದ್ದಾರೆ. ಆದರೆ ಅದನ್ನು ಯಾರೂ ಪಾಲಿಸುತ್ತಿಲ್ಲ. ನಾನೇ ಎಷ್ಟೋ ಸಾರಿ ದಾರಿಯಲ್ಲಿ ಓಡಾಡುತ್ತಿದ್ದ ಸಂದರ್ಭದಲ್ಲಿ ಬಸ್ಸುಗಳು ಕೆಟ್ಟು ನಿಂತುದನ್ನು ಕಂಡಿದ್ದೇನೆ. ಒಂದಾವರ್ತಿ ನಾನು ಪ್ರಯಾಣ ಮಾಡುತ್ತಿದ್ದ ಬಸ್ ಟೈರಿನಲ್ಲಿ ಕಲ್ಲು ಸಿಕ್ಕಿಕೊಂಡಿದ್ದರಿಂದ ಟೈರ್ ಬರಸ್ಟಾಯಿತು. ಆ ಬಸ್. ನಂ. ಎಂ.ವೈ.ಎಸ್. 6374. ನನಗೆ ಆಕಸ್ಮಿಕವಾಗಿ ಆ ದಿವಸ ಅಲ್ಲಿಗೆ ಶ್ರೀಕಂಠಯ್ಯನವರ ಕಾರು ಬಂದುದರಿಂದ ನಾನು ಊರನ್ನು ಸೇರಿದೆ. ಹೀಗೇ ಅನೇಕ ಕಡೆಗಳಲ್ಲಿ ಏನು ಎಕ್ಸ್ ಪ್ರೆಸ್ ಬಸ್ಸುಗಳನ್ನು ಹಾಕಿದ್ದಾರೋ ಅವು ಬಹಳ ಹಳೆ ಬಸ್ಸುಗಳು. ಅವು ಒಳ್ಳೆಯ ಕಂಡೀಷನಲ್ಲಿರುವುದಿಲ್ಲ. ಅಲ್ಲಿ ಹಾಕಿರತಕ್ಕ ಹಳೇ ಬಸ್ಸುಗಳನ್ನು ತೆಗೆದು ಹಾಕಿ ಹೊಸ ಬಸ್ಸುಗಳನ್ನು ಹಾಕಬೇಕೆಂದು ಹೇಳುತ್ತೇನೆ. ಇಲ್ಲದಿದ್ದರೆ ಪ್ರಯಾಣಿಕರಿಗೆ ಬಹಳ ತೊಂದರೆಯಾಗುತ್ತದೆ. ಆದರೆ ನಾವೇನು ಈ ದಿವಸ ಎಂ.ಎಸ್.ಆರ್.ಟಿ.ಸಿ.ಗೆ ಒಂದು ಬಂಡವಾಳವನ್ನು ಹಾಕಿದ್ದೇವೆ ಅದಕ್ಕೆ ತಕ್ಕ ಟರ್ನ್ ನಮಗೆ ಈ ದಿವಸ ಬರುತ್ತಿಲ್ಲ. ಅಲ್ಲಿ ಬುಡದಿಂದ ತುದಿಯವರೆಗೂ ಫಿಲ್ಟರೇಜ್ ನಡೆಯುತ್ತದೆ.

4-30 P.M.

ಎರಡನೆಯದಾಗಿ ಲೇಬರ್ ಬಗ್ಗೆ ಒಂದು ವಿಚಾರ ಪ್ರಸ್ತಾಪಮಾಡುತ್ತೇನೆ. ಈಗ ಶ್ರೀ ಎಂ. ಎಸ್. ಕೃಷ್ಣನ್‌ರವರು ಹೆಚ್ಚಿನ ರೀತಿಯಲ್ಲಿ ಮಾತನಾಡಿದರು, ಅವರು ಒಂದು ವಿಷಯ ಹೇಳಲಿಲ್ಲ. ಕಾರ್ಮಿಕ ಸಂಘಗಳು ಎಲ್ಲಾ ಕಾರ್ಖಾನೆಗಳಲ್ಲೂ ಇವೆ. ಆದರೆ ಎಸ್ಟೇಟುಗಳಲ್ಲಿ ಅದಿಲ್ಲ. ಅಲ್ಲಿ ಕೂಲಿಗಳಿಗೆ ಸರಿಯಾದ ರೀತಿಯಲ್ಲಿ ಪ್ರೋತ್ಸಾಹ ಸಿಕ್ಕುತ್ತಿಲ್ಲ. ಅಲ್ಲಿ ಕೆಲಸಗಾರರು ಒಂದು ವರ್ಷ ಟೆಂಪೊರೆರಿಯಾಗಿ ಕೆಲಸಮಾಡುವರು. ರಾಮ ಎಂದು ಹೆಸರಿದ್ದರೆ ಭೀಮ ಎಂದು ಬರೆಯುವರು. ಮರುವರ್ಷ ಅವರ ಹೆಸರೇ ಇರುವುದಿಲ್ಲ. ಹತ್ತು ವರ್ಷ ಕೆಲಸ ಮಾಡುತ್ತಿದ್ದರೆ ಹತ್ತು ಹೆಸರು ಬರೆದಿರುವರು. ಇದನ್ನು ಪರಿಶೀಲಿಸಬೇಕು. ತೊಂದರೆಯೇನಿದೆಯೆಂಬುದನ್ನು ನೋಡಬೇಕು. ಅವರಿಗೆ ಪ್ರಾವಿಡೆಂಟ್ ಫಂಡ್ ಸೌಲಭ್ಯ ಕೊಡಲು ಬರುವುದಿಲ್ಲ. ಅವರಿಗೆ ರೂಲ್ಸ್ ಪ್ರಕಾರ ಏನು ಕೊಡಬೇಕೋ ಅದನ್ನು ಸರಿಯಾದ ರೀತಿಯಲ್ಲಿ ಕೊಡುತ್ತಿಲ್ಲ. ಕಂಬಳಿ, ಲಾಂಗ್ ಕೋಟು, ಮೆಡಿಕಲ್ ಫೆಸಿಲಿಟಿ, ಅವರ ಮಕ್ಕಳಿಗೆ ವಿದ್ಯಾಭ್ಯಾಸಸೌಕರ್ಯ ಮುಂತಾದುವುಗಳನ್ನು ಕೊಡಬೇಕೆಂದಿದ್ದರೂ ಕೊಟ್ಟಿಲ್ಲ. ಆದುದರಿಂದ ತೋಟಗಳ ಮಾಲೀಕರಿಗೆ ಸರಿಯಾದ ತಿಳುವಳಿಕೆ ಕೊಡಬೇಕು. ಅವರು ಸರಿಯಾದ ರೀತಿಯಲ್ಲಿ ನಡೆದುಕೊಳ್ಳದಿದ್ದರೆ ಹೆಚ್ಚಿನ ರೀತಿಯಲ್ಲಿ ಶಿಕ್ಷೆ ಮಾಡಬೇಕು. ನ್ಯೂನತೆ ಬಗ್ಗೆ ಒಂದು ಉದಾಹರಣೆ ಹೇಳುತ್ತೇನೆ. ಮೇ ತಿಂಗಳಲ್ಲಿ ಚಾಕನಹಳ್ಳಿ ಎಸ್ಟೇಟ್‌ನಲ್ಲಿ ನಮ್ಮ ತಾಲ್ಲೂಕಿನಲ್ಲಿ ಮಾಲೀಕರಿಗೂ ಮತ್ತು ಕಾರ್ಮಿಕರಿಗೂ ಘರ್ಷಣೆಯಾಗಿ ರಾತ್ರಿಯಲ್ಲಿ ಲಾರಿಯಲ್ಲಿ ಕೂಲಿಗಾರರನ್ನು ಕರೆದುಕೊಂಡುಹೋಗಿ ಕಾಡಿನಲ್ಲಿ ಬಿಟ್ಟಿದ್ದಾರೆ. ಪೋಲೀಸು ಸ್ಟೇಷನ್ನಿಗೆ ದೂರು ಕೊಡಲಾಯಿತು, ಸಬ್ ಇನ್‌ಸ್ಪೆಕ್ಟರು ವಿಚಾರಮಾಡಿ ಕ್ರಮ ತೆಗೆದುಕೊಳ್ಳುವುದಾಗಿ ಹೇಳಿದರು. ಆದರೆ ಈವರೆಗೆ ಅವರ ಬಗ್ಗೆ ಒಂದು ಕ್ರಮವನ್ನು ಜರುಗಿಸಲಿಲ್ಲ. ಹೀಗೆ ಅನೇಕರು ಸೇರಿ ತೋಟದ ಮಾಲೀಕರು ಕಾರ್ಮಿಕರ ಕೈಕಾಲು ಕಟ್ಟಿ ಪೋಲೀಸ್ ಡ್ರೆಸ್‌ನಂತಹುದನ್ನು ಹಾಕಿಕೊಂಡು ಕಾರ್ಮಿಕರಿಗೆ ಹಿಂಸೆಮಾಡಿರುವುದು ಖಂಡನೀಯ. ಇದು ಸರಕಾರದ ಗಮನಕ್ಕೆ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ಬಂದಿದ್ದರೆ ವಿಚಾರ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಎಸ್ಟೇಟ್ ಮಾಲೀಕರು ಮಾಡಿರುವ ಈ ಕೆಲಸದ ಬಗ್ಗೆ ಸೂಕ್ತ ಕ್ರಮ ಕೈಕೊಳ್ಳಬೇಕು.

ಕೊನೆಯದಾಗಿ ಪ್ರೈವೇಟ್ ಇಂಡಸ್ಟ್ರೀಸ್ ಏನಿವೆ ಅವುಗಳಲ್ಲಿ ಮೈಸೂರಿನವರಿಗೆ ಸರಿಯಾದ ಪ್ರೋತ್ಸಾಹ ಸಿಕ್ಕುತ್ತಿಲ್ಲ. ಈಗ ಕಾರ್ಮಿಕರ ವಿಚಾರ ತಿಳಿದಿರುವ ಮಂತ್ರಿಗಳೇ ಈ ಇಲಾಖೆ ವಹಿಸಿಕೊಂಡಿರುವುದರಿಂದ ಅವರು ಹೆಚ್ಚಿನ ಅನುಕೂಲ ಮಾಡುವರೆಂಬ ನಂಬಿಕೆಯಿದೆ. ಅವರು ಬೀಡಿ ಕಾರ್ಮಿಕ ಸಂಘದ ಅಧ್ಯಕ್ಷರಾಗಿದ್ದರು, ಬಹುಶಃ ಬಿನ್ನಿಮಿಲ್ಲಿನ ಸಂಘದ ಅಧ್ಯಕ್ಷರೂ ಆಗಿದ್ದರೆಂದು ಕಾಣುತ್ತದೆ. ಅವರು ಕಾರ್ಮಿಕರಿಗೆ ಹೆಚ್ಚಿನ ಸಹಾಯ ಮಾಡುವರೆಂದು

ನಂಬಿದ್ದೇನೆ. ನಾನು ಸಲಹೆಗಳನ್ನೇನು ಕೊಟ್ಟಿದ್ದೇನೆ ಅದಕ್ಕೆ ಗಮನಕೊಡಬೇಕು, ಇಲಾಖೆಯಲ್ಲಿ ನಡೆಯುವ ಅನ್ಯಾಯವನ್ನು ಗಮನಿಸಿ ಸೂಕ್ತ ಕ್ರಮ ಕೈಕೊಳ್ಳಬೇಕು ಎಂದು ಕೇಳಿಕೊಂಡು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಇನ್ನು ಮೋಟಾರ್ ವೆಹಿಕಲ್ಸ್ ಬಾಬಿನಿಂದ ಬರತಕ್ಕ ಟ್ಯಾಕ್ಸಿನಲ್ಲಿ ಲೋಕಲ್‌ಬಾಡೀಸ್‌ಗೆ ಕೊಡತಕ್ಕ ಹಣ ಏನೇನೂ ಸಾಲದು. ಆದರೆ ಅದನ್ನೆಲ್ಲಾ ಡಿಸ್‌ಕಸ್ ಮಾಡುವುದಕ್ಕೆ ಈಗ ಕಾಲ ಇಲ್ಲ. ಇನ್ನು ಈ ದಿವಸ ಆ ರೋಡ್ ಟ್ರಾನ್ಸ್‌ಪೋರ್ಟ್ ಇಲಾಖೆಯಲ್ಲಿ ಯಾವ ನ್ಯೂನತೆಗಳಿವೆಯೋ ಯಾವ ಅನಾನುಕೂಲಗಳಿವೆಯೋ ಅವೆಲ್ಲಾ ಆರ್.ಟಿ.ಓ. ನಲ್ಲೂ ಇರುತ್ತವೆ. ಆ ಆರ್.ಟಿ.ಓ. ನಲ್ಲಿ ಲಂಚರುಷವತ್ತುಗಳು ಹೆಚ್ಚುತ್ತಿವೆ. ಬ್ರೇಕ್ ಇನ್‌ಸ್ಪೆಕ್ಟರಿಂದ ಹಿಡಿದು ಮೇಲಿನ ಅಧಿಕಾರಿಗಳ ವರೆಗೂ ಇದು ತುಂಬಿ ತುಳುಕುತ್ತಿದೆ. ಇನ್ನು ನಿರುದ್ಯೋಗದ ನಿವಾರಣೆಗೆ ಸರ್ಕಾರ ತೀವ್ರ ಕ್ರಮ ಕೈಗೊಳ್ಳದಿದ್ದರೆ ದೇಶದಲ್ಲಿ ಕ್ರಾಂತಿಯೇಳುವುದು ತಪ್ಪುವುದಿಲ್ಲ. ಈ ದಿವಸ ಎಂಪ್ಲಾಯ್‌ಮೆಂಟ್ ಆಫೀಸಿನ ಹತ್ತಿರ ಹೋಗಿ ನೋಡಿದರೆ ಅವರ ಗೋಳೇನೆಂಬುದು ಗೊತ್ತಾಗುತ್ತದೆ. ಅವರಿಗೆ ತೀವ್ರವಾಗಿ ಅನುಕೂಲಗಳನ್ನು ಒದಗಿಸಬೇಕು.

ಅಧ್ಯಕ್ಷರು.—ನಿಮ್ಮ ವೇಳೆ ಮುಗಿಯಿತು.

ಶ್ರೀ ಟಿ. ಆರ್. ಶಾಮಣ್ಣ.—ಹಾಗಾದರೆ ನಾನು ಕುಳಿತುಕೊಳ್ಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ ದಯವಿಟ್ಟು ಇನ್ನು ಇಬ್ಬರು ಸದಸ್ಯರಿಗೆ ಸ್ವಲ್ಪ ಅವಕಾಶ ಕೊಡಿ.

ಅಧ್ಯಕ್ಷರು.—ಲೇಬರ್ ಸಚಿವರಿಗೆ ಒಂದು ಗಂಟೆ, ಆಹಾರ ಸಚಿವರಿಗೆ ಅರ್ಧಗಂಟೆ ಮತ್ತು ಮುಖ್ಯ ಮಂತ್ರಿಗಳು ಬೇರೆ ಇದ್ದಾರೆ. ಹಾಗಾದರೆ ನಾವೇನು ಇಲ್ಲಿ ರಾತ್ರಿ 9 ಗಂಟೆಯವರೆಗೂ ಇರಬೇಕು ಅನ್ನುವುದು ತಮ್ಮ ಇಷ್ಟವೇ?

ಶ್ರೀ ಡಿ. ದೇವರಾಜ ಅರಸ್.—ಇನ್ನು 10 ನಿಮಿಷದಲ್ಲಿ ಅವರು ಮುಗಿಸಲಿ, ಪರವಾಇಲ್ಲ.

† ಶ್ರೀ ವಾಟಾಳ್ ನಾಗರಾಜ್.—ಈ ಎಲ್ಲಾ ಬೇಡಿಕೆಗಳನ್ನೂ ನಾನು ಸಂಪೂರ್ಣವಾಗಿ ವಿರೋಧಿಸುತ್ತೇನೆ. ಇಷ್ಟೇ ನನ್ನ ಭಾಷಣ.

† ಶ್ರೀ ಕೋಣಂದೂರು ಲಿಂಗಪ್ಪ.—ನಾನೀಗ ಹೆಚ್ಚು ವಿವರಗಳನ್ನು ಇಲ್ಲಿ ಮಾತನಾಡುವುದಕ್ಕೆ ಹೋಗುವುದಿಲ್ಲ. ನಾನು ಏನು ಬರೆದುಕೊಂಡು ಬಂದಿದ್ದೇನೋ ಅದಷ್ಟನ್ನು ಓದಿ ಬಿಡುತ್ತೇನೆ. 'ನಿರುದ್ಯೋಗ ಸಮಸ್ಯೆ ಬಗ್ಗೆ ರಾಜ್ಯ ಸರ್ಕಾರ 20,000 ಉದ್ಯೋಗಗಳನ್ನು 10 ತಿಂಗಳ ಮಟ್ಟಿಗೆ ಕಲ್ಪಿಸುವ ಸಂಕಲ್ಪಮಾಡಿದೆ. ಇದರಿಂದ ರಾಜ್ಯದ 175 ತಾಲ್ಲೂಕುಗಳಲ್ಲಿ ಪ್ರತಿ ಒಂದು ತಾಲ್ಲೂಕಿಗೆ 108 ಉದ್ಯೋಗಗಳೂ, 26,000 ಹಳ್ಳಿಗಳಿಗೆ ಹಳ್ಳಿಗೊಂದು ಉದ್ಯೋಗ ಸಿಕ್ಕುತ್ತದೆ. ಇದು ಸಮುದ್ರಕ್ಕೆ ಚಿಟಿಕೆ ಉಪ್ಪು ಹಾಕಿದ ಹಾಗಾಗುತ್ತದೆ. ಶ್ರಮದ ಆಧಾರದ ಮೇರೆ ಸರ್ಕಾರದಿಂದ ಉಚಿತ ಆಹಾರ, ವಸತಿ ಒದಗಿಸಲ್ಪಟ್ಟ ಉತ್ಪಾದನಾ ಸೇನೆಗಳಿಂದ ಮಾತ್ರ ನಿರುದ್ಯೋಗ ನಿವಾರಣೆ ಸಾಧ್ಯ.

ಅನ್ನಸೇನೆ, ಅಕ್ಷರ ಸೇನೆಯಂತಹ ಯುವಜನರ ಸೇನೆಯ ರಚನೆಯ ಬಗ್ಗೆ ಸರ್ಕಾರ ಆಲೋಚಿಸಬೇಕು. ಕಾರ್ಮಿಕರ ಬಗ್ಗೆ ಹೆಚ್ಚು ಹೇಳುವುದಿಲ್ಲ. ಖಾಸಗಿ ಮತ್ತು ಸರಕಾರಿ ಈ ಎರಡು ರಂಗಗಳಲ್ಲೂ ಒಂದೇ ರೀತಿಯಲ್ಲಿ ಲೂಟಿಯಾಗಿದೆ. ಬಿಳಿ ಅಂಗಿಯವರಿಗೆ ಒಂದು ಪಾಲು, ಬಂಡವಾಳಗಾರರಿಗೆ ಸಿಂಹಪಾಲು ಹೀಗಿದೆ. ನಿಜವಾದ ಕಾರ್ಮಿಕನ ಹಿತಸಾಧನೆಯಾಗುತ್ತಿಲ್ಲ. ಇದನ್ನು ತಪ್ಪಿಸಿ ದೇಶಕ್ಕೆ ಉತ್ಪತ್ತಿ ಸಾಕಷ್ಟು ದೊರೆಯುವಂತೆ ನೋಡಿಕೊಳ್ಳಬೇಕು.

ಇನ್ನು ಅಬ್ಕಾರಿ ಬಗ್ಗೆ ಒಂದು ಮಾತು. ಹಿಂದಿನವರೂ ಮತ್ತು ಈಗ ಅಧಿಕಾರಕ್ಕೆ ಬಂದಿರುವವರು ಮಹಾತ್ಮ ಗಾಂಧಿಯವರು ಏನಿದ್ದರು ಅವರ ಶಿಷ್ಯರು. ಮಹಾತ್ಮ ಗಾಂಧೀಕಿ ಜೈ ಎಂದು ಹೇಳುವರು. ಆದರೆ ಕುಡಿತಕ್ಕೆ ಅವಕಾಶ ಕೊಟ್ಟಿದ್ದಾರೆ. ಹಿಂದೆ ಜೋಡೆತ್ತಿನ ಗುರ್ತಿತ್ತು, ಈಗ ಹಸು ಕರು ಗುರುತಿದೆ, ಎರಡೂ ಒಂದೇ, ಮೂಕ ಪ್ರಾಣಿಗಳು. ಪಾನನಿರೋಧ ಮಾಡುವುದಾಗಿ ಆ ತತ್ವವನ್ನು ಒಪ್ಪಿಕೊಂಡಿದ್ದು ಈಗ ನಿರೋಧ ಮಾಡಿದ್ದನ್ನು ಮತ್ತೆ ತೆಗೆದುಹಾಕಿದ್ದಾರೆ. ಬಡವರು ಮತ್ತು ಹಿಂದುಳಿದವರ ಹಿತವನ್ನು ಕಡೆಗಾಣಿಸಿದ್ದಾರೆ. ಒಟ್ಟಿನಲ್ಲಿ ಸರಕಾರಕ್ಕೆ ಹೆಚ್ಚು ಉತ್ಪತ್ತಿ ಬರಬೇಕು. ಆ ದೃಷ್ಟಿಯಿಂದ ಮಾಡುವುದಾದರೂ ಒಂದೊಂದು ಅಂಗಡಿಯನ್ನೂ ಪ್ರತ್ಯೇಕವಾಗಿ ಹರಾಜು ಮಾಡಬೇಕು. ಹಿಂದೆಯೂ ಇದನ್ನು ಹೇಳಿರುವ ನೆನಪಿದೆ. ಈ ಗೀತಿ ಮಾಡಬೇಕು.

(ಶ್ರೀ ಕೋಣಂದೂರು ಲಿಂಗಪ್ಪ)

ಇನ್ನು ವಾರ್ತೆ ಮತ್ತು ಪ್ರಚಾರಶಾಖೆಗೆ ಸಂಬಂಧಪಟ್ಟಹಾಗೆ ಎರಡು ಮಾತು. ನಮ್ಮ ರಾಜ್ಯದಲ್ಲಿ ಈ ಇಲಾಖೆ ಬಹಳ ಕಾಲದಿಂದ ಇದೆ. ಇದು ನಮ್ಮ ರಾಜ್ಯದ ಬೊಕ್ಕಸವನ್ನು ವ್ಯರ್ಥ ಮಾಡುತ್ತಿರುವ ಇಲಾಖೆ. ಇದನ್ನು 25 ವರ್ಷಗಳಿಂದ ತಿಳಿದುಬಂದಿದೆ. ಮೊನ್ನೆ ಈ ಸಭೆ ಪ್ರಾರಂಭವಾಗುವುದಕ್ಕೆ ಮುಂಚೆ ಗೋವಾಕ್ಕೆ ಹೋಗಿದ್ದೆ. ಅಲ್ಲಿ ನಮ್ಮ ರಾಜ್ಯದ ವಾರ್ತಾ ಇಲಾಖೆಗೆ ಸಂಬಂಧಪಟ್ಟವರು ಹತ್ತು ಜನ ಪ್ಯಾಲೇಸ್ ಹೋಟಲಿನಲ್ಲಿ ಹತ್ತು ಜನರಿದ್ದರು. ಅಲ್ಲಿ ನಮ್ಮ ರಾಜ್ಯದ ಬಗ್ಗೆ ಕರ್ನಾಟಕದ ಬಗ್ಗೆ ಏನು ಪ್ರಚಾರ ಮಾಡುತ್ತಿದ್ದೀರಿ ಎಂದು ನೇರವಾಗಿ ಹೋಗಿ ಕೇಳಿದೆ. ರಾಜ್ಯ ಸರ್ಕಾರ ಈ ಬಗ್ಗೆ ಏನು ವ್ಯವಸ್ಥೆ ಮಾಡಿದೆ ಎಂದು ಕೇಳಿದಾಗ ಅವರು ಹುಡುಕಿನೋಡಿ ಎರಡು ಇಂಗ್ಲೀಷಿನಲ್ಲಿರುವ ಪ್ರತಿಗಳನ್ನು ಕೊಟ್ಟರು. ನಮ್ಮ ರಾಜ್ಯದ ಬಗ್ಗೆ ಬೇರೆ ಯಾವ ಸಾಹಿತ್ಯವೂ ಇರಲಿಲ್ಲ. ಆದುದರಿಂದ ನೇರವಾಗಿ ಹೇಳುತ್ತೇನೆ. ಕನ್ನಡ, ಮರಾಠಿ, ಇಂಗ್ಲೀಷ್ ಈ ಭಾಷೆಗಳಲ್ಲಿ ಕರ್ನಾಟಕದ ಬಗ್ಗೆ ಸಾಹಿತ್ಯ ಒದಗಿಸಿ ಜನರನ್ನು ಆಕರ್ಷಿಸಲು ಪ್ರಯತ್ನ ಮಾಡಬೇಕು. ಮೊದಲು ಇಷ್ಟು ಮಾಡಬೇಕು. ಇಲ್ಲಿರುವ ವಾರ್ತಾ ಇಲಾಖೆಯನ್ನು ಸಂಪೂರ್ಣವಾಗಿ ಪುನರುಜ್ಜೀವನಗೊಳಿಸಬೇಕು. ಸರಕಾರ ತನ್ನ ವ್ಯವಸ್ಥೆಯನ್ನು ಸಂಪೂರ್ಣವಾಗಿ ಬದಲಾಯಿಸಬೇಕು. ಹಿಂದಿನಿಂದ ಕಟ್ಟಿದ ಈ ಇಲಾಖೆ ಕೇವಲ ಕೆಲವು ಜನರ ಸ್ವತ್ತಾಗಿದೆ. ಮೈಸೂರು ಯೂನಿವರ್ಸಿಟಿಯಲ್ಲಿ ಜರ್ನಲಿಸಂ ತೆಗೆದುಕೊಂಡು ಪಾಸು ಮಾಡಿರುವ ಗ್ರಾಜುಯೇಟ್ಸ್ ಬೇಕಾದಷ್ಟಿದ್ದಾರೆ. ಅವರನ್ನು ಈ ಇಲಾಖೆಗೆ ತೆಗೆದುಕೊಂಡು ಅವರಿಗೆ ಸರಿಯಾದ ಸ್ಥಾನಮಾನ ಕೊಡಬೇಕು.

ಹಾಗೆಯೇ ಫಿಲಂ ಕಾರ್ಪೊರೇಷನ್ ಇದೆ. ಅಲ್ಲೂ ಕೂಡ ಫಿಲಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ ಮತ್ತು ಚಲನಚಿತ್ರ ಪ್ರಪಂಚದಲ್ಲಿ ಸಾಕಾದಷ್ಟು ಅನುಭವವಿರುವವರನ್ನು ನೇಮಕ ಮಾಡಬೇಕು. ಬೇರೆ ರಾಜ್ಯಗಳಲ್ಲಿ ನಮ್ಮ ವಾರ್ತಾ ಇಲಾಖೆ ಯಾವ ರೀತಿ ಪ್ರಚಾರ ಮಾಡಿದೆ ಎಂದು ನೋಡಿದರೆ ಸಾಧನೆ ಸೊನ್ನೆ. ಬೇರೆ ರಾಜ್ಯಗಳಲ್ಲಿ ನಮ್ಮ ರಾಜ್ಯದ ಬಗ್ಗೆ ಪ್ರಚಾರವಿಲ್ಲ. ಬೇರೆ ರಾಜ್ಯದವರು ನಮ್ಮ ರಾಜ್ಯದ ಸಾಧನೆಯನ್ನು ಬಂದು ನೋಡುವಂತೆ ಮಾಡಲು ಮತ್ತು ನಮ್ಮವರು ಬೇರೆ ಕಡೆ ಇರುವುದನ್ನು ನೋಡಿ ಉತ್ತಮವಾದುದನ್ನು ಅನುಸರಿಸಲು ಆಸಕ್ತಿವಹಿಸಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಅವರಿಗೆ ಬಡ್ತಿಯಿಲ್ಲ. ಬೇರೆ ಇಲಾಖೆಗಳಿಂದ ಡೆಪ್ಯೂಟ್ ಮಾಡುವುದೂ ಉಂಟು. ಅಲ್ಲೇ ಇರುವ ಅಧಿಕಾರಿಗೆ ಯಾವ ಸೌಲತ್ತೂ ಇಲ್ಲ. ಇದರ ಬಗ್ಗೆ ಯೋಚನೆ ಮಾಡಬೇಕು. ಈ ಇಲಾಖೆಯಲ್ಲಿ ಸರಿಯಾದ ವ್ಯವಸ್ಥೆ ಮಾಡಬೇಕು.

ಆಹಾರ ಇಲಾಖೆ ಹೆಗ್ಗಣಗಳಿಗೆ ಪ್ರಸಿದ್ಧವಾಗಿದೆ. ಅದು ಸ್ವತಂತ್ರ ಇಲಾಖೆಯಲ್ಲ. ಗೃಹಣಿ ಆ ಇಲಾಖೆಯ ಆಡಳಿತ ನೋಡಿಕೊಳ್ಳುತ್ತಿರುವರು. ಅವರು ಈ ಇಲಾಖೆಯಲ್ಲಿರುವ ಹೆಗ್ಗಣಗಳಿಗೆ ಸರಿಯಾದ ಮದ್ದು ಮಾಡಬೇಕು. ಏಕೆಂದರೆ ಇವು ಮೂರು ತಿಂಗಳಿಂದ ಇರುವುದಲ್ಲ, 25 ವರ್ಷಗಳಿಂದ ಇವೆ, ಇವಕ್ಕೆ ದೊಡ್ಡ ಪಾಲಿಡಾಲ್ ಹಾಕಬೇಕು.

ಕಡೆಯದಾಗಿ ಇಂದಿನ ಸಾರಿಗೆ ಮಂತ್ರಿಗಳಾದ ಶ್ರೀ ಅಜೀಜ್‌ಸೇಟ್‌ರ ಬಗ್ಗೆ ನನಗೆ ತುಂಬ ವಿಶ್ವಾಸವಿದೆ, ಅವರು ಕೆಟ್ಟ ಹೆಸರು ತೆಗೆದುಕೊಳ್ಳಬಾರದು, ಅವರ ಬಗ್ಗೆ ನನಗೆ ವೈಯಕ್ತಿಕ ಅಭಿಮಾನವಿದೆ. ಪ್ರೈವೇಟ್ ಬಸ್ಸಿಗೆ ಒಂದು ರೂಟನ್ನು ಕೊಡಬೇಕಾದರೆ ಇಷ್ಟು ಮಾಮೂಲು ಕೊಡಬೇಕು ಎಂದೇನೋ ಇದೆಯೆಂದು ಹೇಳುವರು. ಇದನ್ನು ಪರಿಶೀಲಿಸಬೇಕು. ಇದರ ಬಗ್ಗೆ ತನಿಖೆ ಮಾಡಬೇಕು. ಶ್ರೀ ಸಿದ್ದಪ್ಪನವರು ಲಕ್ಸುರಿ ಬಸ್ಸಿನ ವಿಚಾರ ಹೇಳಿದರು, ಮೊನ್ನೆ ನಾನು ಅದೇ ಬಸ್ಸಿನಲ್ಲಿ ಬಂದೆ. ಗುಬ್ಬಿಯಲ್ಲಿ ಆ ಬಸ್ಸನ್ನು ನಿಲ್ಲಿಸಲಿಲ್ಲ. ಈ ಸಂಬಂಧವಾದ ದೂರುಗಳಿಗೆ ಅವಕಾಶ ಇಲ್ಲದಂತೆ ನೋಡಿಕೊಳ್ಳಬೇಕು ಎಂದು ಇಷ್ಟನ್ನು ತಿಳಿಸಿ ಮಾತನಾಡಲು ಅವಕಾಶಕೊಟ್ಟ ಅಧ್ಯಕ್ಷರಿಗೆ ವಂದಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಎಷ್ಟು ಅವಕಾಶ ಯಾರು ಯಾರಿಗೆ ಇದೆ ಎಂದುದನ್ನು ಮಾನ್ಯ ಅಧ್ಯಕ್ಷರು ತಿಳಿಸಿದರೆ ಒಳ್ಳೆಯದು. ಈಗ ಗೋರ್ಕಲ್ಲ ಮೇಲೆ ಮಳೆ ಸುರಿದಂತಾಗಿದೆ. ಯಾವರೀತಿ ಟೈಂ ಅಲಾಟ್ ಮಾಡುತ್ತೀರಿ? ಸ್ವತಂತ್ರ ಸದಸ್ಯರಿಗೆ ಅವಕಾಶವಿಲ್ಲವೇ? ನಾವು ಚೈನದಿಂದ ಬಂದವರೇ ! ದಯವಿಟ್ಟು ಇದನ್ನು ಸಭೆಗೆ ತಿಳಿಸಬೇಕು.

ಅಧ್ಯಕ್ಷರು.—ಈಗ ಅಪೋಜಿಷನ್ ಪಾರ್ಟಿ ರೆಕಗ್‌ನೈಜ್ಡ್ ಪಾರ್ಟಿ. ಅದಕ್ಕೆ ಲೀಡರ್ ಇದ್ದಾರೆ. ಕೆಲವು ಆಲ್ ಇಂಡಿಯಾ ಪಕ್ಷಗಳಿವೆ. ಇದನ್ನೆಲ್ಲಾ ಗಮನಿಸಿ ಸಾಧ್ಯವಾದಷ್ಟು ಟೈಂ ಅಲಾಟ್ ಮಾಡಲಾಗಿದೆ. ತಾವು ಎಲ್ಲಾ ಡಿಮ್ಯಾಂಡುಗಳ ಮೇಲೂ ಮಾತನಾಡಬೇಕೆಂದರೆ ಹೇಗೆ ಸಾಧ್ಯ ?

ಶ್ರೀ ವಾಟಾಳ್ ನಾಗರಾಜ್.—ಪ್ರತಿ ಡಿಮ್ಯಾಂಡಿನ ಮೇಲೂ ನಾನು ಮಾತನಾಡಿದ್ದೇನೆಯೇ ಎಂಬುದನ್ನು ತಾವು ನೋಡಿ ಹೇಳಬೇಕು.

(ಅಧ್ಯಕ್ಷರು ನಿಂತಿದ್ದರು ಶ್ರೀ ವಾಟಾಳ್ ನಾಗರಾಜ್ ಸಹ ನಿಂತಿದ್ದರು)

ಅಧ್ಯಕ್ಷರು.—ತಾವು ಕೂಡಿ.

ಶ್ರೀ ವಾಟಾಳ್ ನಾಗರಾಜ್.—ತಾವು ಹೆಡ್‌ಮಾಸ್ತರಿದ್ದಹಾಗೆ ಇದ್ದೀರಿ. ಹೀಗೆ ಹೇಳಬಾರದು. ತಾವು ಅಧ್ಯಕ್ಷರಾದಮೇಲೆ ನಮಗೆ ಕಷ್ಟ ಬಂದಿದೆ.

MADAM SPEAKER.—Will the hon. Member withdraw unconditionally from the House ? Who would like to take this insult ?

Sri D. DEVARAJ URS.—I move that the hon. Member should withdraw his remark.

MADAM SPEAKER.—Would you like to withdraw that insult or not ?

(ಶ್ರೀ ವಾಟಾಳ್ ನಾಗರಾಜ್‌ರವರು ಸುಮ್ಮನಿದ್ದರು)

ಅಧ್ಯಕ್ಷರು.—ಅನ್‌ಕಂಡೀಷನಲ್ಲಾಗಿ ಅವರು ಮಾತನಾಡಿರುವುದನ್ನು ವಾಪಸು ತೆಗೆದುಕೊಳ್ಳಬೇಕು.

ಶ್ರೀ ವಾಟಾಳ್ ನಾಗರಾಜ್.—ಅಧಿಕಾರ್ರವಿದೆ ಎಂದು ಅದನ್ನು ಈ ರೀತಿ ಪ್ರಯೋಗಮಾಡುವುದು ಸರಿಯಲ್ಲ. ಅಧ್ಯಕ್ಷರ ಬಗ್ಗೆ ನನಗೆ ಅಪಾರವಾದ ಗೌರವವಿದೆ.

ಅಧ್ಯಕ್ಷರು.—ಅದು ಬೇರೆ ವಿಚಾರ. ನೀವು ಅಧ್ಯಕ್ಷರಾದಮೇಲೆ ಕಷ್ಟ ಬಂದಿದೆ ಎಂದು ನೀವು ಹೇಳಿರುವುದನ್ನು ವಾಪಸು ತೆಗೆದುಕೊಳ್ಳಬೇಕು.

ಶ್ರೀ ವಾಟಾಳ್ ನಾಗರಾಜ್.—ಈವಾಗ ನೀವು ಅಧ್ಯಕ್ಷರಾದ ಮೇಲೆ ನಮಗೆ ಬಹಳ ಕಷ್ಟ ಬಂದಿದೆ.

MADAM SPEAKER.—Do you tolerate this insult ?

Sri D. DEVARAJ URS.—I appeal to him to please withdraw his remarks.

ಶ್ರೀ ವಾಟಾಳ್ ನಾಗರಾಜ್.—ನನಗೆ ಹೇಳಲು ಅವಕಾಶವಿಲ್ಲವೇ. ನಿಮಗೆ 160 ಜನರ ಬೆಂಬಲ ಇದೆ. ನೀವು ಹೇಗೆ ಬೇಕಾದರೂ ಮಾಡಬಹುದು. ಈ ದೇಶದಲ್ಲಿ ನಿಮ್ಮ ಪ್ರಜಾಪ್ರಭುತ್ವವೇ ನಡೆಯಲಿ.

MADAM SPEAKER.—Will you please withdraw from this House ?

ಶ್ರೀ ವಾಟಾಳ್ ನಾಗರಾಜ್.—ತಾವು ಹೇಳಿದುದನ್ನು ಗಮನಕ್ಕೆ ತೆಗೆದುಕೊಳ್ಳುತ್ತೇನೆ. ನಾನು ಹೋಗುವುದಿಲ್ಲ ಏನು ಮಾಡುತ್ತೀರಿ !

Sri D. DEVARAJ URS.—This kind of behaviour on the part of the hon'ble Member is highly objectionable.

Sri C. M. ARUMUGAM.—I appeal to Mr. Vatal Nagaraj to obey the Chair.

(*Sri Vatal Nagaraj withdrew from the House*)

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಅಧ್ಯಕ್ಷರೇ, ಈ ಅಬ್ಕಾರಿ ಬೇಡಿಕೆ ಮೇಲೆ ಹೆಚ್ಚಾಗಿ ಯಾರೂ ಮಾತನಾಡಿಲ್ಲ. ಶ್ರೀಮಾನ್ ಆರುಮುಗಂರವರು ಕೆಲವು ವಿಚಾರಗಳನ್ನು ಮಾತ್ರ ಹೇಳಿದ್ದಾರೆ. ಶ್ರೀಮಾನ್ ಶಾಮಣ್ಣನವರು ಕೆಲವು ಕಟ್ ಮೋಷನ್‌ಗಳನ್ನು ಕಳುಹಿಸಿದ್ದಾರೆ. ಕೊನೆಯಲ್ಲಿ ಶ್ರೀ ಕೋಣಂದೂರು ಲಿಂಗಪ್ಪನವರು ನಿಮ್ಮ ಪಾಲಿಸಿ ಸರಿಯಿಲ್ಲ, ಗಾಂಧಿ ಹೆಸರಿನಲ್ಲಿ ಈರೀತಿ ಮಾಡಿದ್ದೀರಿ ಎಂದು ನೊಂದುಕೊಂಡು ಹೇಳಿದರು ನಿಜ, ಇಡೀ ಪ್ರಪಂಚದಲ್ಲಿ ಎಷ್ಟೋ ವಿಚಾರಗಳು

(ಶ್ರೀ ಡಿ. ದೇವರಾಜ ಅರಸ್)

ಮನುಷ್ಯ ಮಾಡಬಾರದು. ಮಾಡುವುದು ಒಳ್ಳೆಯದಲ್ಲ. ಕುಡಿಯುವುದೂ ಅಲ್ಲದೇ ಇನ್ನೂ ಅನೇಕ ಪಾಪಗಳು ಇವೆ Christian Definition of SIN ನಲ್ಲ "glutteny is one of the seven deadly sins" ಎಂದು ಇದೆ. ಇದು Oxford Conscise Dictionary ನಲ್ಲಿ ಇದೆ. ಇದರ ಬಗ್ಗೆ ಇನ್ನು ಹೆಚ್ಚು ವ್ಯಾಖ್ಯಾನ ಮಾಡುವುದಿಲ್ಲ. ಈಗ ಒಂದು ಪಾಲಿಸಿ ಇದೆ. ಪ್ರೊಹಿಬಿಷನ್‌ನನ್ನು ತೆಗೆದಿರುವುದು ನಿಜ. ಪಾನ ಕುಡಿಯುವುದು ಹರಾಜು ಮಾಡತಕ್ಕದ್ದು ಎಲ್ಲಾ ಇದೆ.

ಶ್ರೀ ಹೆಚ್. ಡಿ. ದೇವೇಗೌಡ.—ನಾವು ಹೇಳುವುದು ಒಳ್ಳೇ ಪಾನವನ್ನು ಕುಡಿಸಿ ಎಂದು ಹೇಳುತ್ತೇವೆ.

ಶ್ರೀ ಡಿ. ದೇವರಾಜ ಅರಸ್.--ಅದನ್ನು ಒಪ್ಪಿಕೊಳ್ಳಬೇಕು. ಅದರಲ್ಲಿ ಒಂದು ವಿಷಯ ಏನೆಂದರೆ ಅದರ ಮೇಂಟೇನೆನ್ಸ್ ಪ್ರಾಬ್ಲಂ ಎಷ್ಟಿದೆ ಎಂದು ಹೇಳಿದ್ದಾರೆ. ನಮ್ಮ ಸಂಸ್ಥಾನದಲ್ಲಿ ರೆವಿನ್ಯೂ ಬರತಕ್ಕಂಥಾದ್ದರಲ್ಲಿ ಎಕ್ಸೈಜ್ ಬಾಬು ಎರಡನೆಯದು. ಮೊದಲನೆಯದು ಸೇಲ್ಸ್ ಟ್ಯಾಕ್ಸ್ ಮತ್ತು ಕಮಿರ್ಷಿಯಲ್ ಟ್ಯಾಕ್ಸ್. ಅದು ಬಿಟ್ಟರೆ ನಂತರ ಈ ಎಕ್ಸೈಜು. ಇದರಿಂದ ನಮಗೆ ಈ ವರ್ಷ ಸುಮಾರು 28.6 ಕೋಟಿ ರೂಪಾಯಿಗಳು ಬಂದಿದೆ. ಹೋದ ಸಾರಿ 23.52 ಕೋಟಿ ರೂಪಾಯಿಗಳು ಬಂದಿದೆ. 1970-71 ನೇ ಇಸವಿಯಲ್ಲಿ 19.72 ಕೋಟಿ ರೂಪಾಯಿಗಳು ಇತ್ತು. That in these two years, from about Rs. 19 or 20 crores, it has gone upto Rs. 28 6 crores. We do not know what happens in future. ಈವೊತ್ತಿನ ದಿವಸ ಬೇಕಾದಷ್ಟು ಹಾಗೆಯೇ ಇದೆ. ಇಷ್ಟೊಂದು ದೊಡ್ಡ ಪ್ರಮಾಣದ ರೆವಿನ್ಯೂವನ್ನು ಎಂಥಾವರಿಗಾದರೂ ಅಷ್ಟು ಸುಲಭವಾಗಿ ತೆಗೆದು ಹಾಕುತ್ತೇವೆ ಎಂದು ಹೇಳುವುದಕ್ಕೆ ಬರುವುದಿಲ್ಲ. ಮಾನ್ಯ ಸದಸ್ಯರು ಏನು ಹೇಳುತ್ತಿದ್ದಾರೆ ಎಂದರೆ ಇದು ಯೋಗ್ಯವಾದ ರೀತಿಯಲ್ಲಿ ಕುಡಿಯುವ ಏರ್ಪಾಡು ಆಗಬೇಕು, ಷಾಪ್ಸನ್ನು ಈಗ ಎಲ್ಲೆಲ್ಲಿ ಇಟ್ಟಿದ್ದಾರೆ ಅದು ಉತ್ತಮವಾಗುವ ಹಾಗೆ ಆಗಬೇಕು ಎಂದು ಹೇಳುತ್ತಿದ್ದಾರೆ. 'ಮೊದಲಿನಿಂದಲೂ ಈ ಅಭ್ಯಾಸ ಬಂದಿದೆ, ಈಗಲೂ ಅದೇ ರೀತಿ ಮಾಡಿಕೊಂಡು ಹೋಗಲ ಅಂತ ಮಾಡಬಾರದು. ಅದಕ್ಕೆ ಒಂದು ಮಾನ್ಯತೆ ಕೊಡಬೇಕು. ಕುಡಿಯುವುದು ಎಂದಾದಮೇಲೆ ಕುಡಿಯತಕ್ಕಂಥವರು ಕಚಡ ಪ್ರದೇಶದಲ್ಲಿ ಕುಡಿಯದೆ ಒಳ್ಳೆಯ ಜಾಗದಲ್ಲಿ ಕುಳಿತುಕೊಂಡು ಕುಡಿಯುವಂತೆ ಏರ್ಪಾಟು ಮಾಡಿಕೊಡಬೇಕು. ಬೀರನ್ನು ಯಾವ ರೀತಿಯಲ್ಲಿ ಒಳ್ಳೇ ಜಾಗದಲ್ಲಿ ಕೂತುಕೊಂಡು ಕುಡಿಯುತ್ತಾರೋ ಅದೇ ರೀತಿ ಈ ಪಾನವನ್ನೂ ಕೂಡ ಒಳ್ಳೆಯ ಜಾಗದಲ್ಲಿ ಕೂತುಕೊಂಡು ಕುಡಿಯುವ ಏರ್ಪಾಟು ಮಾಡಬೇಕು. ಸಾಮಾನ್ಯವಾಗಿ ಹೆಂಡದ ಅಂಗಡಿಗಳನ್ನು ಹರಿಜನ ಕೇರಿ ಆಚೆ ಅಲ್ಲಿ ಇಲ್ಲಿ ಹಾಕಿಬಿಡುತ್ತಾರೆ. ಈ ಸಾರಿ ಅದನ್ನು ಇಂಪ್ರೂ ಮಾಡಬೇಕು ಎಂದು ಇಟ್ಟುಕೊಂಡಿದ್ದೇವೆ. ಅದಕ್ಕಾಗಿಯೇ ಈ ಸಾರಿ ಪ್ರಾರಂಭದಲ್ಲಿಯೇ 10 ಲಕ್ಷ ರೂಪಾಯಿಗಳನ್ನು ಇಟ್ಟುಕೊಂಡಿದ್ದೇವೆ. ಕುಡಿಯತಕ್ಕವರಿಗೆ ಏನಾದರೂ ಸ್ವಲ್ಪ ಅನುಕೂಲಗಳನ್ನು ಮಾಡಿಕೊಡಬೇಕೆಂದು ಅಂಗಡಿಗಳನ್ನು ಕಟ್ಟಿಸಿ ಅಲ್ಲಿ ಕುಳಿತುಕೊಂಡು ಕುಡಿಯುವುದಕ್ಕೆ ಲಕ್ಷಣವಾಗಿರುವಂತೆ ಮಾಡಬೇಕು ಎಂದು ಯೋಚನೆಮಾಡಿದೆ. Even if it costs a bit more we will do it.

ಶ್ರೀ ಕೋಣಂದೂರು ಲಿಂಗಪ್ಪ.—ಅದರೊಳಗೆ ಗಾಂಧೀಜಿಯವರ ಫೋಟೋವನ್ನು ಇಟ್ಟು ಬಿಡಿ.

ಶ್ರೀ ಡಿ. ದೇವರಾಜ ಅರಸ್.—ಗಾಂಧಿಜೀಯವರ ಫೋಟೋ ಹಾಗಿರಲಿ ಕೋಣಂದೂರು ಲಿಂಗಪ್ಪನವರ ಫೋಟೋವನ್ನೇ ಹಾಕೋಣ.

ಶ್ರೀ ಹೆಚ್. ಎಸ್. ಸಿದ್ದಪ್ಪ.—ಸರಿಯಾದ್ದ ಅಂಗಡಿಗಳನ್ನು ಕಟ್ಟಿ ಕೂತುಕೊಂಡು ಕುಡಿಯುವ ಹಾಗೆ ಏರ್ಪಾಡು ಮಾಡಿ.

ಶ್ರೀ ಡಿ. ದೇವರಾಜ ಅರಸ್.—ಯಾರು ಪಾನೀಯ ಮಾಡುವುದಕ್ಕೆ ಹೋಗುತ್ತಾರೆ ಅವರು ಕೂತುಕೊಳ್ಳುವುದಕ್ಕೆ ಕ್ಲೀನ್ ಆಗಿರುವ ಹಾಗೆ ಏರ್ಪಾಡು ಮಾಡುವುದಲ್ಲದೆ ಅಂಗಡಿಗಳು better look ಇರುವ ಹಾಗೆ ಮಾಡಬೇಕು ಎನ್ನುವ ಉದ್ದೇಶ ಇದೆ. ಇಷ್ಟು ಕೋಟಿ ರೂಪಾಯಿಗಳು ಆದಾಯ ಬರುವ ಕಡೆ ಅದನ್ನು ಇಂಪ್ರೂ ಮಾಡುವುದು ನ್ಯಾಯವಾಗಿದೆ

ಎರಡನೆಯದು ಅಲ್ಲಿ ನಡೆಯತಕ್ಕ ದುರ್ವ್ಯವಹಾರ, ಕೆಮಿಕಲ್ಸ್ ಹಾಕಿ ಅಡಲ್ಟ್ರೇಟ್ ಮಾಡತಕ್ಕಂಥಾದ್ದು ಏನು ಇದೆ, ಜನರ ಆರೋಗ್ಯ ಕೆಡತಕ್ಕಂಥಾದ್ದು ಏನು ಇದೆ ಅದನ್ನು ಕೂಡ ತಡೆಗಟ್ಟುವುದು ನ್ಯಾಯವಾದುದು.

ಶ್ರೀ ಹೆಚ್. ಡಿ. ದೇವೇಗೌಡ.—ಈಗ ಈಚಲು ಮರಗಳು ಕಡಿಮೆ ಇವೆ.

ಶ್ರೀ ಡಿ. ದೇವರಾಜ ಅರಸ್.—ಈಗ ತೆಂಗಿನ ಮರಗಳಿಂದ ಹೆಂಡ ಬೇಕಾದಷ್ಟು ತೆಗೆಯುತ್ತಾರೆ. ಅದರಲ್ಲೂ ಕೂಡ ಈ ತರಹ ನವಾಸಾಗರವನ್ನು ಬೆರೆಸಿ ಮಾರುತ್ತಾರೆ ಎನ್ನುವುದೂ ಇದೆ. ಇದನ್ನು ನಿಲ್ಲಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ಅದಕ್ಕಾಗಿ ಜಾಯಿಂಟ್ ಕಮೀಷನರ್ ಲೆವಲ್‌ನಲ್ಲಿ ಒಬ್ಬ ಪೋಲೀಸ್ ಡಿ.ಐ.ಜಿ. ಅಧಿಕಾರಿಯನ್ನು ನೇಮಿಸಿದ್ದೇವೆ. ಹಾಗೂ ಅದನ್ನು ಉತ್ತಮಗೊಳಿಸುವ ದೃಷ್ಟಿಯಿಂದ ಮುತುವರ್ಜಿ ವಹಿಸಿ ಅದರ ಮೇಲ್ವಿಚಾರಣೆ ಮಾಡುವುದಕ್ಕೆ ಏರ್ಪಾಡು ಮಾಡಿದ್ದೇವೆ.

ಈಗ ಹೆಂಡವನ್ನು ಲೂಸ್ ಆಗಿ ಹಂಡೆಯಲ್ಲೋ ಅಥವಾ ಬೇರೆ ಯಾವುದಾದರೂ ಪಾತ್ರೆಯಲ್ಲೋ ಇಟ್ಟು ಮಾರುತ್ತಿದ್ದಾರೆ. ಅದನ್ನು ತಪ್ಪಿಸಿ ಬಾಟಲ್‌ನಲ್ಲಿ ಹಾಕಿ ಮಾರಬೇಕು ಎನ್ನುವ ಯೋಚನೆ ಮಾಡಿದ್ದೇವೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಾಟಲ್‌ನಲ್ಲಿ ಹೆಂಡ ಮಾರುವುದನ್ನು ಪ್ರಾರಂಭ ಮಾಡಿದ್ದೇವೆ. ಮರದಿಂದ ನೀರ ಇಳಿಸಿದಾಗ ಕೆಲವು ಕಾಲ ಅದಕ್ಕೆ ಹುಳಿ ಬರುವುದಿಲ್ಲ. ಹುಳಿ ಬಂದ ಮೇಲೆ ಹೆಂಡವಾಗುತ್ತದೆಂದು ಹೇಳುತ್ತಾರೆ. ಮೊದಲನೇ ಸ್ಟೇಜಿನಲ್ಲಿ ನೀರ ಎಂದು ಹೇಳುತ್ತಾರೆ, ಸ್ವಲ್ಪ ಹುಳಿ ಬಂದಿರುವಾಗ ಬಾಟಲ್ ಮಾಡಿದರೆ ಹಾಗೆಯೇ ಉಳಿಯುತ್ತದೆ ಎಂದು ಕೆಲವರು ಸಂಶೋಧನೆ ಮಾಡಿ ಹೇಳಿದ್ದಾರೆ. ಬಾಟಲ್‌ನಲ್ಲಿ ಹಾಕಿ ಸೀಲ್ ಮಾಡಿದರೆ ಕೆಲವು ದಿವಸ ಹಾಗೆಯೇ ಇರುವುದಕ್ಕೆ ಸಾಧ್ಯವೆಂದು ಹೇಳಿದ್ದಾರೆ. We are getting beer and whisky in bottles. In the case of toddy, it is scientifically proved that at some stage if it does not go beyond the limit of fermentation, it is a healthier drink and it will have more of vitamins. So we are now trying to see whether it is not possible to bottle up toddy and sell it. ಇದರಿಂದ ಏನಾಗುತ್ತದೆ ಎಂದರೆ ಮಿಕ್ಸ್ ಮಾಡುವುದು ಕಡಮೆಯಾಗುತ್ತದೆ. ಈಗ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಾರಂಭ ಮಾಡಿದ್ದೇವೆ. ಅದರ ಪರಿಣಾಮವೇನಿದೆ, ಯಾವರೀತಿ ನಡೆಯುತ್ತದೆ ಎನ್ನುವುದನ್ನು ನೋಡಿಕೊಂಡು ಮುಂದಿನ ವರ್ಷ ಅದನ್ನು ಇನ್ನೂ ಉತ್ತಮ ಪಡಿಸಬಹುದೋ ಅಥವಾ ಬೇರೆ ವಿಧಾನವನ್ನು ಅನುಸರಿಸಬೇಕೋ ಎನ್ನುವುದನ್ನು ನೋಡುತ್ತೇವೆ. ಈ ಸಲ ಪ್ರಯತ್ನ ಮಾಡೋಣ ಎಂದು ಸರ್ಕಾರ ಉದ್ದೇಶಪಟ್ಟು ಆ ರೀತಿ ಮಾಡಿದೆ. ಕಾನೂನಿನಲ್ಲಿ ಕೆಲವು ಬದಲಾವಣೆ ಮಾಡಿ ಈ ಪದ್ಧತಿಯನ್ನು ತಂದಿದ್ದೇವೆ.

6–30 P.M.

ಅಬ್ಕಾರಿ ಹರಾಜಿನ ಬಗ್ಗೆ ಮಾನ್ಯ ಸದಸ್ಯರು ಕೆಲವರು ಷಾಪ್‌ವೈಸ್ ಅಥವಾ ತಾಲ್ಲೂಕುವೈಸ್ ಏಕೆ ಮಾಡಬಾರದು ಎಂದು ಹೇಳಿದರು. ಹಿಂದೆ ಅನೇಕ ಸದಸ್ಯರು ಹೇಳಿದ್ದರು. ಹಾಗೆ ಮಾಡಬಾರದೆಂದು ನನ್ನ ಮನಸ್ಸಿನಲ್ಲಿಲ್ಲ. ಟಾಡಿ ಅಂಡ್ ಅರಾಕ್ ಹರಾಜು ಈ ಸಾರಿ ಏನಾಯಿತು ಎಂದರೆ ನಾವು ಮೊದಲು ಷಾಪ್‌ವೈಸ್, ಗ್ರೂಪ್ ಆಫ್ ಷಾಪ್ಸ್, ತಾಲ್ಲೂಕು ಮತ್ತು ಡಿಸ್ಟ್ರಿಕ್ಟ್ ಈ ಪ್ರಕಾರವಾಗಿ ಮಾಡುತ್ತೇವೆ. ಮೊದಲು ಷಾಪ್ ಹರಾಜು ಮಾಡಿ, ಗ್ರೂಪ್ ಮಾಡಿ, ತಾಲ್ಲೂಕು ಮಾಡಿ ಡಿಸ್ಟ್ರಿಕ್ಟ್‌ವರೆಗೂ ಹೋಗುತ್ತೇವೆ ಇದು ಟಾಡಿ ವಿಷಯ. ಅರಾಕ್‌ನಲ್ಲಿ ಷಾಪ್ಸ್, ಗ್ರೂಪ್ಸ್ ಮತ್ತು ತಾಲ್ಲೂಕುವರೆಗೆ ಹೋಗುತ್ತೇವೆ. ಡಿಸ್ಟ್ರಿಕ್ಟ್‌ವರೆಗೆ ಹೋಗುವುದಿಲ್ಲ ಎಂದರೆ ಮೂರು ಹಂತಗಳು ಮಾತ್ರ ಇರುತ್ತವೆ. ಇದರ ಉದ್ದೇಶವೆಂದರೆ, ಷಾಪ್‌ನಿಂದ ಡಿಸ್ಟ್ರಿಕ್ಟ್‌ವರೆಗೆ ಹೋದರೆ ಅಲ್ಲಿ ಮಾನಾಪಲಿಸ್ಟ್ ಟೆಂಡೆನ್ಸಿ ಬಂದು ಹರಾಜು ಹೆಚ್ಚಿಗೆ ಬರತ್ತದೆ. ಅದನ್ನು ತಪ್ಪಿಸಿದರೆ ಸಣ್ಣ ಸಣ್ಣ ಜನರಿಗೆ ಕೊಡುವುದಕ್ಕೆ ಸಾಧ್ಯವಿದೆ, ಷಾಪ್‌ವೈಸ್, ಗ್ರೂಪ್‌ವೈಸ್ ಏಕೆ ರಿವರ್ಸ್ ಮಾಡಬಾರದು ಎನ್ನುವ ಅಭಿಪ್ರಾಯವಿದೆ. ಈ ಸಾರಿ ಕೆಲವರ ಅಭಿಪ್ರಾಯದಲ್ಲಿ ಹಾಗೆ ಮಾಡುವುದು ಒಳ್ಳೆಯದು ಎನ್ನುವ ಸಲಹೆ ಬಂತು. ಆದರೂ ಈ ಸಲ ಪೂರ್ತಿಯಾಗಿ ಮಾಡುವುದು ಕಷ್ಟ ಎಂದು ನಮ್ಮ ಇಲಾಖೆಯ ಅಧಿಕಾರಿಗಳು ಹೇಳಿದುದನ್ನು ಕೇಳಿ ನಾವು ಈ ವರ್ಷದಮಟ್ಟಿಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಯೋಗ ಮಾಡಿ ನೋಡೋಣ ಎಂದು ಮಾಡಿದ್ದೇವೆ. ನನ್ನ ಅನುಮಾನ ಏನಿತ್ತು ಎಂದರೆ ಇದರಲ್ಲಿ ಕೆಲವು ತೊಂದರೆಗಳಿವೆ. ಏಕಾಏಕಿ ಸಣ್ಣಪುಟ್ಟ ಜನರು ಹರಾಜಿನಲ್ಲಿ ಕೊಂಡು ಕೊಂಡು ಸಾಕಷ್ಟು ಹಣ ಕಟ್ಟುವುದಕ್ಕೆ ಸಾಧ್ಯವಿಲ್ಲದೆ, ತಿಂಗಳು ತಿಂಗಳಿಗೂ ಕಂತು ಕಟ್ಟುವುದು ತೊಂದರೆಯಾಗಿ ಇದರಲ್ಲಿ ಬರುವ ದುಡ್ಡು ನಿಂತು ಹೋದರೆ ನಮಗೆ ಕಷ್ಟ ಬರುತ್ತದೆ. ಅಬ್ಕಾರಿ ಬಾಬತ್ತಿನಿಂದ ಬರುವ ದುಡ್ಡು ಲಕ್ಷಗಟ್ಟಲೆ ಹಣ ವಸೂಲಾಗಿಲ್ಲ. ಕೆಲವು ಭಾಗ ರೈಟ್ ಆಫ್ ಮಾಡಿದರು. ಬರಬೇಕಾದ್ದು ಇನೂ ವಸೂಲಾಗಿಲ್ಲ. 10—15 ವರ್ಷಗಳಿಂದ ಕೆಲವು ಜಿಲ್ಲೆಗಳಲ್ಲಿ ಬಾಕಿ ಇದೆ. ಈ ಸಾರಿ ಆಯವ್ಯಯವನ್ನು ಸರಿದೂಗಿಸುವುದು ನಮ್ಮ ಮುಂದೆ ಇದ್ದ ಮುಖ್ಯವಾದ

(ಶ್ರೀ ಡಿ. ದೇವರಾಜ ಅರಸ್)

ಗುಂ. ನಾವು ಪ್ರಯೋಗ ಮಾಡುವುದಕ್ಕೆ ಹೋಗಿ ಅದರಲ್ಲಿ ಥೋಕ ಬಂದರೆ, ಬರುವ ದುಡ್ಡು ಬಾರದೆ ಹೋದರೆ ಕಷ್ಟ ಬರುತ್ತದೆ ಎನ್ನುವ ಗಾಬರಿಯಿಂದ, ಸೇಫಾಗಿದ್ದೇವೆಂದು ತಿಳಿದಾಗ ಒಂದೆರಡು ಕೋಟಿ ರೂಪಾಯಿ ವ್ಯತ್ಯಾಸವಾದರೂ ಪರವಾಇಲ್ಲ ಎನ್ನುವವರೆಗೂ ಪ್ರಯೋಗ ಮಾಡುವುದು ಬೇಡ ಎಂದು ಸದ್ಯಕ್ಕೆ ಆ ಪ್ರಯತ್ನಕ್ಕೆ ಕೈ ಹಾಕಿಲ್ಲ. ಹಿಂದಿನಂತೆಯೇ ನಡೆದು ಕೊಂಡಿದ್ದೇವೆ. ಇದರಿಂದ 5 ಕೋಟಿ 30 ಲಕ್ಷ ರೂಪಾಯಿ ಹೆಚ್ಚು ಬಂದಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾತ್ರ ನಮ್ಮಲ್ಲಿ ಪ್ರಯೋಗ ಮಾಡಿದರೆ ಯಶಸ್ವಿಯಾಗುತ್ತದೆ, ತೆಂಗಿನ ಮರಗಳಿವೆ, ಮಾಡಿದರೂ ತೊಂದರೆಯಾಗುವುದಿಲ್ಲ ಎಂದು ಅಲ್ಲಿರತಕ್ಕ ಎಲ್ಲ ಸದಸ್ಯರೂ ಒಮ್ಮತದಿಂದ ಹೇಳಿದರು. ಆದ್ದರಿಂದ ಅಲ್ಲಿ ಪ್ರಯೋಗ ಮಾಡಿದ್ದಾಗಿದೆ. ಟಾಡಿ ಬಗ್ಗೆ ಸ್ವಲ್ಪ ಯಶಸ್ವಿಯಾಯಿತು ಎಂದರೆ ಷಾಪ್‌ವರೆಗೆ ಯಾರೂ ಹೋಗಲಿಲ್ಲ, ಗ್ರೂಪ್ಸ್ ಮತ್ತು ತಾಲ್ಲೂಕಿನವರೆಗೆ ನಿಂತು ಹೋಯಿತು. ಷಾಪ್‌ಗಳಿಗೆ ಯಾರೂ ಹರಾಜಿಗೆ ಬರಲಿಲ್ಲ. ಷಾಪ್ ಯೂನಿಟ್ ಬಹಳ ಚಿಕ್ಕದು ಎಂದು ಯಾರೂ ಅದಕ್ಕೆ ಬರಲಿಲ್ಲ, ಷಾಪ್ಸ್‌ವರೆಗೆ ಯಾರೂ ಬರುವುದಿಲ್ಲ ಎಂದು ಗೊತ್ತಾಯಿತು. ಗ್ರೂಪ್ಸ್‌ವರೆಗೆ ಬಂದಿದ್ದಾರೆ. ಅದು ಚೆನ್ನಾಗಿ ಆಯಿತು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಂದು ತಾಲ್ಲೂಕಿನಲ್ಲಿ ಎಲ್ಲಕ್ಕಿಂತ ಹೆಚ್ಚಾಗಿ ಬಂದುದರಿಂದ ಅದನ್ನೇ ಇಟ್ಟುಕೊಂಡಿದ್ದೇವೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಂದು ಕಡೆ ತಾಲ್ಲೂಕಿನ ಹರಾಜು ಜಾಸ್ತಿ ಬಂದುದನ್ನು ಬಿಟ್ಟು ಉಳಿದ ಕಡೆಗಳಲ್ಲೆಲ್ಲ ಹೆಚ್ಚಾಗಿ ಬಂದಿರುವುದು ಗ್ರೂಪ್ಸ್‌ನಿಂದ. ಆದ್ದರಿಂದ ಗ್ರೂಪ್ಸ್ ತೆಗೆದುಕೊಂಡಿದ್ದೇವೆ. ಟಾಡಿಯೊಳಗೆ ಜಾಸ್ತಿ ಬಂದಿದೆ. ಆರಕ್‌ನಿಂದ ಹೆಚ್ಚಾಗಿ ಬರಲಿಲ್ಲ. ಆರಕ್ ಹೆಚ್ಚು ಸಕ್ಸೆಸ್‌ಫುಲ್ ಇದ್ದ ಹಾಗೆ ಕಾಣುವುದಿಲ್ಲ. ಷಾಪ್‌ವೈಸ್, ಗ್ರೂಪ್‌ವೈಸ್ ಅಥವಾ ತಾಲ್ಲೂಕುವೈಸ್ ಬಂದರೂ ಡಿಸ್ಟ್ರಿಕ್ಟ್‌ವೈಸ್ ಬರಲಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಗ್ರೂಪ್‌ವೈಸ್ ಮಾಡಬೇಕೆಂದು ತೀರ್ಮಾನ ಮಾಡಿದ್ದೀರಾ ?

Sri D. DEVARAJ URS.—It is left to the discretion of the Deputy Commissioners. I merely stated that I wanted the maximum revenue. They all wanted shops to District. I wanted to reverse this process. By reversing this process of auction, we thought we are likely to get more revenue and at the same time, small people would be in a position to take to this business. We tried this experiment, to start with, in South Kanara. In other Districts we did not try it, because I was not sure of the results. I was not willing to allow the revenues from this excise to go down from that of last year. On the other hand, I wanted maximum revenue because my anxiety was to see that the financial gap that was yawning before us had to be closed, by some method or the other. This was one of the important items in which we were likely to get more revenue than that of the previous year. I did not revert to this experiment elsewhere. I have left it to the discretion of the Deputy Commissioners. Likewise without interfering in the matter of auction, we were able to get the maximum revenue this time. But in South Kanara we tried this experiment at the shop level. No body came and contested in the bid at the group level.

ಶ್ರೀ ಟಿ. ಆರ್. ಶಾಮಣ್ಣನವರು ಕೆಲವು ಕಟ್ ಪ್ರೋಪೋಷನ್ಸ್ ಕಳುಹಿಸಿದ್ದಾರೆ. ತೆಂಗಿನಕಾಯಿ ಬೆಲೆ ಜಾಸ್ತಿಯಾಗಿಬಿಟ್ಟಿದೆ ಎಂದು ಹೇಳಿದ್ದಾರೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ತೆಂಗಿನಕಾಯಿ ಬೆಲೆ ಕಡಮೆಯಾಗಿದೆ.

ಶ್ರೀ ಡಿ. ದೇವರಾಜ ಅರಸ್.—ನಾನು ತೆಂಗಿನ ತೋಟ ಇರುವವರನ್ನು ಕೇಳಿದ್ದೇನೆ. ಅವರ ಅನುಭವದಲ್ಲಿ ಏನಿದೆ ಎಂದರೆ, ಒಂದೊಂದು ಸಾರಿ......

ಶ್ರೀ ಕೆ. ಪ್ರಭಾಕರ್ (ವರ್ತೂರ್).—ಸ್ವಾಮಿ, ಈ ಪ್ರೊಹಿಬಿಷನ್ ಎನ್ನುವುದನ್ನು ತೆಗೆಯಬೇಕಾದರೆ ಒಂದು ವೇಳೆ ತೆಗೆದರೆ, ಯಾವ ಸರ್ಕಾರ ಇರುತ್ತದೆ ಆದು ಈ ಐದು ಕಾರ್ಯಕ್ರಮಗಳನ್ನು ಪಾಲಿಸಬೇಕು ಎಂದು ನನ್ನ ಸೂಚನೆ 1. ಕುಡಿಯದೆ ಇರತಕ್ಕವರ ಅನುಕೂಲಕ್ಕೆ ಅವರ

ನೈತಿಕ ಬಲ ಹೆಚ್ಚಿಸುವುದಕ್ಕಾಗಿ ಸ್ಟೇಟ್ ಪ್ರಾಪೊಗ್ಯಾಂಡ ಇರಬೇಕು. 2. ಅದರಿಂದ ಏನು ರೆವಿನ್ಯೂ ಬರುತ್ತದೆ, ಅದಕ್ಕೆ ಆಲ್ಟರ್ನೇಟೀವ್ ಕಂದಾಯ ಯೋಚನೆ ಮಾಡುತ್ತಾ ಇರಬೇಕು. 3. ಕುಡಿಯತಕ್ಕವರು ಯಾರು ಇದ್ದಾರೋ, ಅವರ ಮಕ್ಕಳ ಅಭಿವೃದ್ಧಿಗಾಗಿ ಇದರಿಂದ ಬರತಕ್ಕ ಶೇಕಡ 50ರಷ್ಟು ಆದಾಯವನ್ನು ಖರ್ಚು ಮಾಡಬೇಕು. 4. ಹೆಂಡದ ಅಂಗಡಿಗಳನ್ನು ಸುಭದ್ರವಾಗಿ ಕಟ್ಟುವುದಕ್ಕೆ ಸರ್ಕಾರ ದುಡ್ಡು ಖರ್ಚು ಮಾಡಬಾರದು. 5. ಈಗಾಗಲೇ ಕಟ್ಟಿರುವ ಅಂಗಡಿಗಳನ್ನು ಸ್ಕೂಲು ಬಿಲ್ಡಿಂಗ್ ಮಾಡಿ, ಮನೆಯ ಮುಂದೆ ಹೆಂಡದ ಅಂಗಡಿ ಬಾರದಂತೆ ನೋಡಿಕೊಳ್ಳಬೇಕು. ಒಂದು ವೇಳೆ ಕಟ್ಟಿದ್ದರೆ, ಮುಂದೆ ಅದನ್ನು ಹಾಸ್ಟಲ್ ನಡೆಸುವುದಕ್ಕೋ, ಅಥವಾ ಯೂತ್ ಕ್ಲಬ್‌ಗೆ ಉಪಯೋಗಿಸುವುದಕ್ಕೋ ಕೊಡಬೇಕು. ಈ ಐದು ಕಾರ್ಯಕ್ರಮಗಳನ್ನು ಸರ್ಕಾರ ಗಮನದಲ್ಲಿಟ್ಟುಕೊಂಡು ಈ ಇಲಿಸಿಟ್ ಲಿಕ್ಕರ್ ಸಿಗದೇಬಾರದು ಹಾಗೆ ಮಾಡಬೇಕು.

ಶ್ರೀ ಡಿ. ದೇವರಾಜ ಅರಸ್. —ಇವು ಯೋಚನೆ ಮಾಡುವುದಕ್ಕೆ ಯೋಗ್ಯವಾದ ಸಲಹೆಗಳು. ನಿಧಾನವಾಗಿ ಯೋಚನೆ ಮಾಡೋಣ. ಈಗ ತೆಂಗಿನ ಮರಗಳಿಂದ ನೀರಾ ಇಳಿಸಿರತಕ್ಕದ್ದರಲ್ಲಿ, ಅನುಭವದಿಂದ ಹೇಳುತ್ತಾರೆ, ಒಂದು ವರ್ಷ ಇಳಿಸಿ ಬಿಟ್ಟರೆ ಮುಂದಿನ ವರ್ಷಕ್ಕೆ ಹೆಚ್ಚಿಗೆ ಫಲ ಬರುತ್ತದೆ. ಎಂದು. ಅವರ ಅನುಭವದಿಂದ ಈ ಮಾತನ್ನು ಹೇಳುತ್ತಾರೆ. ತೆಂಗಿನ ಕಾಯಿ ಧಾರಣೆ ಹೆಚ್ಚಿರುವುದು ಮತ್ತು ಇಳಿದಿರುವುದಕ್ಕೆ ಬೇರೆ ಕಾರಣಗಳು ಇವೆ. ಅದರ ಬಗ್ಗೆ ಮಾತನಾಡುವುದಕ್ಕೆ ಇಚ್ಛೆಪಡುವುದಿಲ್ಲ. ಒಟ್ಟಿನಲ್ಲಿ ಅಬ್ಕಾರಿಗೆ ಸಂಬಂಧಪಟ್ಟ ಹಾಗೆ, ಇದರ ಬಗ್ಗೆ ಹೆಚ್ಚು ಟೀಕೆ ಇಲ್ಲದೆ ಬೆಂಬಲ ಕೊಟ್ಟಿದ್ದೀರಿ ಎಂದು ನನ್ನ ಭಾವನೆ.

ಕೊನೆಯದಾಗಿ ಕರಪ್ಷನ್ ಇದೆ ಎನ್ನುವುದು, ಇಲ್ಲ ಎಂದು ನಾನು ಹೇಳುವುದಿಲ್ಲ. ಅದನ್ನು ಕಡಿಮೆ ಮಾಡುವುದಕ್ಕೆ ಏನು ಪ್ರಯತ್ನ ಮಾಡಬೇಕೋ ಮಾಡೋಣ ಅದಕ್ಕೆ ಒಂದು ಸ್ಪೆಷಲ್ ಸ್ಕ್ವ್ಯಾಡ್ ಇಟ್ಟು ಕಡಿಮೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಇಲಿಸಿಟ್ ಡಿಸ್ಟಿಲೇಷನ್ ಕೂಡ ಕಡಿಮೆ ಮಾಡುವುದಕ್ಕೆ ಪ್ರಯತ್ನ ಮಾಡೋಣ.

ಇನ್ನು ಕೋಣಂದೂರು ಲಿಂಗಪ್ಪನವರು ಇನ್‌ಫರ್ಮೇಷನ್ ಡಿಪಾರ್ಟ್‌ಮೆಂಟ್ ಬಗ್ಗೆ ಒಂದು ಮಾತು ಹೇಳಿದ್ದಾರೆ. ಅವರು ಹೇಳಿದಂತೆ ಅನೇಕ ವಿಷಯಗಳನ್ನು ನಾನೂ ಒಪ್ಪಿಕೊಳ್ಳುತ್ತೇನೆ. ಈ ಡಿಪಾರ್ಟ್‌ಮೆಂಟ್ ಅಷ್ಟು ಬಲಯುತವಾಗಿ ಮೈಸೂರು ಸರ್ಕಾರದವರು ಮೊದಲಿನಿಂದಲೂ ಮಾಡಿಕೊಂಡು ಬಂದಿಲ್ಲ. ಮೊದಲಿನಿಂದಲೂ ಹೇಗೋ ಕುಂಠಿತವಾಗಿ ಬಂದಿದೆ. ಅನೇಕ ಕಡೆ ಇನ್‌ಫರ್ಮೇಷನ್ ಸೆಂಟರ್‌ಗಳು ಇವೆ. Very much needs to be improved at the centres of Goa and some other places also. ನಮ್ಮಲ್ಲಿ ಸಾಕಷ್ಟು ಇದರ ಬಗ್ಗೆ ಸಾಹಿತ್ಯ ಮತ್ತು ಹ್ಯಾಂಡ್ ಬಿಲ್ಸ್ ಇಲ್ಲ, ಅವುಗಳನ್ನು ಮಾಡಬೇಕಾಗಿವೆ ಮತ್ತು ಹೊರಗಡೆ ಪ್ರಚಾರ ಕೂಡ ಮಾಡಬೇಕಾದ್ದು ಇದೆ. ಈ ಡಿಪಾರ್ಟ್‌ಮೆಂಟ್ ರೀಆರ್ಗನೈಜ್ ಮತ್ತು ರೀಸ್ಟ್ರಕ್ಚರ್ ಮಾಡಬೇಕು ಎಂದು ಇದ್ದೇವೆ. ಇದೂ ಕೂಡ ಸರ್ಕಾರದ ಗಮನದಲ್ಲಿದೆ. ಇದರ ಪೂರ್ಣ ಚಿತ್ರ ಏನು ಎನ್ನುವುದು ಗೊತ್ತಿಲ್ಲ. That is still in the melting pot. ತಕ್ಷಣ ಎಲ್ಲಾ ರೀಆರ್ಗನೈಜ್ ಎಫೆಕ್ಟೀವ್ ಇನ್‌ಫರ್ಮೇಷನ್ ಸೆಂಟರ್ಸ್ ಆಗಿ ಮಾಡಬೇಕು. ಈ ಸೆಂಟರುಗಳಲ್ಲಿ ಮಿನಿಸ್ಟರುಗಳು ಫೋಟೋ ಹಾಕಿಸಿಕೊಳ್ಳುತ್ತಾರೆ ಎಂದು ಹೇಳಿದ್ದಾರೆ. ನನ್ನ ಫೋಟೋ ಹಾಕಿ ಎಂದು ಹೇಳುವುದಕ್ಕೆ ನಾನು ಹೋಗುವುದಿಲ್ಲ. ಅವರು ಆ ರೀತಿ ಹಾಕದಿರುವುದು ಕ್ಷೇಮ. The Information Centres must be voice, eyes and ears. ಆ ರೀತಿ ಸ್ಟ್ರೆಂಗ್ತನ್ ಮಾಡಬೇಕು. ತಾವು ಕೊಟ್ಟಿರುವ ಸಲಹೆಗಳಿಗೆ ಧನ್ಯವಾದಗಳನ್ನರ್ಪಿಸಿ ದಯಮಾಡಿ ಮಾನ್ಯ ಸದಸ್ಯರು ಇದಕ್ಕೆ ಬೆಂಬಲ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಬಿ. ಶಿವಯ್ಯ.—ಪ್ರೊಹಿಬಿಷನ್ ಔಚಿತ್ಯದ ಬಗ್ಗೆ ಸರ್ಕಾರದವರು ತಿಳಿಸುತ್ತಾರೆಯೋ ?

Sri D. DEVARAJ URS.—That we are considering.

† Sri AZEEZ SAIT (Minister for Labour).—Madam Speaker, at the outset I thank the hon. Members Sri Sidddappa and Sri Konandur Lingappa for having spoken something good about me and for cautioning me not to become bad after being good. Let me assure my friends that wherever I am and whatever may be the responsibility that may be given to me, I shall try my level best to discharge my duties with all the sincerity and honesty at my command.

(SRI AZEEZ SAIT)

Some members have spoken about nationalisation and contract carriages and some have said that contract carriages should not be stopped to the inconvenience of the public. They have said that Government must not think only of nationalisation and in the process to deny amenities to the people. Some people have said that no private buses should be allowed to run and that only nationalised buses should run. Both the ideas are not correct. If we are to have complete nationalisation, so many things are required. I may tell you that money does not come in the way of nationalisation, but what comes in the way is the shortage of chassis and that is why we cannot go in for nationalisation now.

Some have said that many permits have been issued. There is some confusion in the minds of the members in this regard. The permits are issued by a semi-judicial body. They are issued by the R.T.A., D.Cs. and the Assistant Transport Authority. While doing so, they take into consideration the needs and requirements of the people. Wherever the M.S.R.T.C. have come forward wich buses, the S.T.A. and the R.T.A. have given permits. Since this is a semi-judicial body there can be no question of exerting influence upon it. If anybody says that after the Minister has come to power he has issued so many permits, I am quite confident of proving that it is wrong. The hon. Member Sri Siddappa was saying why a person who talks of nationalisation and socialism thought of de-nationalisation. Here I would like to explain the position. All that I was doing was just to think aloud as to how to meet the demands of the people. On the one hand there is a cry that there are not sufficient buses on the nationalised routes. In that context, I was just thinking whether it would be better proposition to withdraw the city buses and put them on the mofussil routes in order to avoid the keen competition between State Transport buses and private buses and allow the private bus operators on contract basis to run their buses in the city under our control. When I was told that such an arrangement was there in Delhi, I was just thinking whether we could also adopt the same policy here. The Delhi transport corporation I was told, was hiring some buses for plying in the city and I wanted to study that scheme. Therefore when I visited Delhi I studied the working of that scheme there but I found it was not quite useful. This was the information that appeared in the press and I immediately contacted them and told them that my thinking on the subject was not just what had appeared in the press. Unfortunately my comment was not published in the press. I went to Delhi for attending some conference and myself and the Home Secretary studied the scheme prevailing at Delhi. In fact they were also feeling sorry about it. I have been telling time and again that wherever small pockets are left, they have to be covered with the nationalised transport. We have about 120 schedules. For making the divisions function more

efficiently we have bifurcated the Raichur Division into two, one division for Raichur and another for Gulbarga. Therefore the hon. members can understand that there is no need to think that I am against nationalisation or that I am going back from nationalisation.

Regarding the working of the M.S.R.T.C. many criticisms were made that there was corruption, the buses were untidy, buses were not punctual, sufficient representation is not given to Harijans in the matter of recruitment, effective control not exercised in the matter of purchase of stores, and that many buses were off the road. There have been several interpellations here in this House and I have given replies to them. The M.S.R.T.C. has its own problems. It consists of operational, mechanical, catering and stores department. I do not say that everything is good there. Many defects have been there and they have got to be rectified and I can assure the hon. members that the Board, the members of the Board and the Chairman of the M.S.R.T.C. are seriously thinking of effecting changes and we hope within a few days many improvements will take place. In fact within the last 1½ months many improvements have taken place and if one were to look into the profits earned it will prove that efficiency has increased in the corporation. I do agree that there are many breakdown of buses and it is for the simple reason that we have many old vehicles. Inspite of best arrangements and careful handling these defects are there and we are trying to put new buses on the road. Recently we got 20 buses and we expect to receive another 300 buses. Purchase of chassis other other than Leyland and Mercedes is under consideration. It is also a fact that because of old buses the regional workshops are fully engaged with the repairs work. We are trying our best to put new buses and we propose to purchase a few Dodge, Bedford, Fargo chassis and I can assure the hon. members that we will try to improve the services.

I have been telling that M.S.R.T.C. must be treated as a commercial organisation ; we are putting more money to earn and not for lossing money. But due to acute shortage of new buses there have been this inconvenience. I can assure the House that all steps will be taken to procure new buses and put them on the road.

Regarding representation of Harijans in the M.S.R.T.C. I do not have at present the necessary figures and I am not aware whether 18 per cent reservation is there in this M.S.R.T.C. If there is any lapse, I will see that necessary percentage is reserved for Harijans at least in future, if it is not already done in the past.

Regarding secret cell, this was introduced by the Board in order to get information regarding lapses, pilferage, etc. I have discussed this matter with the Chairman recently and I think the Board might give up this practice. If the hon. members have any information about pilferage of tyres, I request them to give me that information and I will take suitable action. All steps will be taken to improve the working of the corporation and lapses, if any, will be set right.

(SRI AZEEZ SAIT)

As regards inter-state buses, we are thinking of putting buses on the inter-state permit routes subject to the availability of buses.

7-00 P.M.

Regarding Motor Vehicles Department I accept that there is corruption. This corruption has taken birth much earlier than 1942. The age of corruption is more than the independenoe. Now we have to see how best we could cut the roots of corruption and this could be done only if there is co-operation from all quarters. We have taken some decision to eradicate corruption.

Regarding Collection of Taxes there is an All India Automobile Association which collects tax and issues tokens. Likewise, we have approached some Banks to undertake this job. Some of the Banks have come forward and they are sincerely doing this work.

Further the buildings we have for the RTOs offices are not suited to the requirements. It requires a particular type of building so that the officers and other staff of the RTO should not have connections with the public. The office at Mangalore and Bangalore are not suitable ones and there we have many problems. I myself visited these offices and I have also heard complaints from the public. We are very seriously thinking to have proper buildings for these offices. Now we have found out a place at Vasanthanagar to have a building and locate the RTOs office and this might enable us to eradicate lot of corruption and inconvenience to the public.

Regarding harassment by the staff to various vehicles I do not agree fully. We have now three squads, *viz.*, the police squad, the MSRTC squad and Motor Vehicles squad. With the help of these squad, much has improved. Recently about 167 auto-rickshaws were ceased. A number of them had no permits, no meters or having meters which were not in working condition, no fitness certificate etc. So, if vigorous steps and checks are made and the offenders are dealt with severely many of these problems could be solved.

Then hon. members Sri Arumugam stated that the Employment Exchange from KGF has been shifted to Kolar. It is true. At the same time it is likely that it will again be shifted to Robertsonpet. Further I don't agree that these Employment Exchanges have got full powers. They have only limited powers. The Managements of the factories have to notify the vacancies. Unless vacancies are notified and lists called for from the Employment Exchanges, the Employment Exchanges themselves cannot do anything. But in Government of India with regard to public sector and private sector they have made it a point to see that posts carrying below Rs. 500 should be got filled only through the lists of candidates obtained from the local Employmetn Exchanges. By this quite a good number of Mysoreans too have been

Sri AZEEZ SAIT.—I am not referring to particularly hon. member Sri Krishnan. This is a general tendency which I have been noticing. Today if A is not in a convenient position he will say don't hold a ballot; If B is in convenient position he will say hold a ballot. There is no unanimity of views in this matter among the labour leaders.

My friend Sri Krishnan talked about the Code of Discipline. There is no power under it to recognise or derecognise a Union.

Sri M. S. KRISHNAN.—Code of Discipline is accepted by Employers, Employees and the Government.

Sri AZEEZ SAIT.—Suppose they do not accept what can I do; I cannot force them.

My friend Sri Krishnan has made a suggestion that the various Acts should be translated into Kannada. It is a very good idea, I also feel that it should be done, and necessary action will be taken. The idea about the awards to be printed and brought into a consolidated digest is a very good one, and necessary action will be taken by the Government in this behalf so that the workers are benefited. A suggestion was made to provide vehicles to the Assistant Commissioners of Labour. This could not be done on account of economy orders. Immediately the ban on economy orders is removed, action will be taken to get the vehicles. He also suggested certain amendments to Acts. We have to examine whether such amendments are necessary. Of course, Government is thinking of amending certain Acts. After the I.R.C., The States of Bombay, Uttar Pradesh and Bengal are trying to bring in a measure whether the gratuity system should continue or not. Let us wait and see. What is the use of our bringing in the gratuity Act here before that?

With regard to solving the problems of Satyagraha, strikes, etc., I should say that labour machinery is moving fast; there is no delay on the part of the labour machinery and the work is satisfactory. I have instructed my Department to see that labour disputes are settled without delay, and I am satisfied to see the number of agreements entered into and settlements made. I should say that most of our officers have risen to the occasion and they have been doing good work If there are any specific complaints, I am prepared to take action. Of course, a complaint was brought to my notice and I took immediate action.

As far as labour is concerned, I shall not allow any one to exploit labour. I was a labour leader. Labour should not be made a capital for political gains. We have no intention to put down anybody. We are for the sake of workers for the betterment of workers. About the industrial codes, it was pointed out that a case is still pending. I will look into it as to why it is pending and shall see what best could be done.

able to get into the central employment and the number is increasing day by day. Even in Mysore State if anybody speaks Tamil he is not treated as a non-Mysorean, Now for instance in Bangalore Tamilian population is sufficiently good. Any person either by virtue of birth or by domicile is treated as a Mysorean and even while registering their names in the Employment Exchanges great care is taken to see that he is a Mysorean.

Now with regard to these Employment Exchanges I have also heard lot of complaints and my department also feels that there is something wrong. I assure the hon. members that we are seriously thinking as to how best we could set right things in these Employment Exchanges. But we cannot make arrangements for the people who have to wait in long queues to sleep there. We are in search of a suitable building for Bangalore Employment Exchange. We have our Directorate of Labour office in Infantry Road and also we have an Employment Exchange office here. There seems to be no necessity to have two offices here. I will see that proper arrangements are made in this regard.

Regarding the inauguration of rival unions by Ministers to which hon. member Sri Arumugam referred to I would wish to say probably the Ministers might have gone there on an invitation from the concerned Union. Under the existing Act there is no bar to register any number of unions. There can be any number of unions. But at the same time I have always championed the cause that there should be only one union for one industry. This could happen only when the political leaders and parties stop exploiting the labour for their political gains. I have seen that one person comes representing himself as the Leader of an Union to present their problems and by the time I could fix a date to hear him I see another leader coming to me to discuss the demands of the same workers saying that he is their leader. Thus the labour is being exploited by politicians.

SRI M. S. KRISHNAN.—The point is whether you can eliminate the existence of more unions in an industry by introducing election by secret ballot.

SRI AZEEZ SAIT.—Even the Government of India is thinking over this problem. Recently there was a conference also to discuss this problem seriously and to see how best we could try to have one union in one industry. Even at Centre there are unions like the AITUC and INTUC and HMS etc. Instead of looking at Delhi for finding out a solution to this problem I feel why not the seasoned labour leaders in Bangalore meet together and discuss this problem and arrive at a solution in the interest of workers. They should not merely try to exploit the workers for their political cause.

SRI M. S. KRISHNAN.—Why not the hon. Minister bring in a legislation to introduce secret ballot ?

A suggestion was made that an Industrial Tribunal is necessary. Whether it should be a tripartite tribunal or one-man tribunal has got to be considered. However, it is a policy matter and therefore I cannot straightaway say anything in this behalf. I will see that no delay is caused in the Labour Courts in giving awards. We have been insisting on the High Court to send us a panel of names for selection of presiding officers for these Courts.

About the statistics to be published, I should say that the work has been completed and the statistics will be published shortly. About the revision of minimum wages, we also feel that it should be revised. We have been thinking of taking up the matter of wages of Beedi workers at the national level. So, barring beedi workers wages, all the other workers' wages would be revised.

Hon. member Sri Abdul Khuddus Anwar raised a point about non-payment of difference of D. A to some of the employees. I request the hon. member to discuss the matter with me in detail, and I will see that the matter is settled early.

As far as law and order is concerned, I wish to say that it is bounden duty of the Police to maintain law and order. Law should be respected by one and all. I don't see any reason as to why the police should interfere with the peaceful agitation of workers. But, if the agitation goes out of control, naturally the police has to intervene in the interest of maintaining law and order.

With regard to the demonstrations and processions I myself had an opportunity of witnessing one such demonstration, wherein the workers to present their demand to the management took out a huge procession. I think this could have been done by the office-bearers of the Union themselves instead of doing it by a huge procession of workers.

SRI M. S. KRISHNAN.—In fact they tried to present their demands through normal methods, but since they failed they had to resort to demonstration.

SRI AZEEZ SAIT.—The present Government with its changed outlook of socialism is determined to see that the interests of poor and working classes are safeguarded as far as possible.

Regarding the payment of 8-1/3rd bonus, I may inform the Hon. members that we are awaiting a decision, the moment the decision is received, we shall try to implement it here.

With regard to Wage Board recommendations, Sri M. S. Krishnan wants me to convene a bipartite conference. As soon as the Assembly session is over, I shall try to convene such a conference and try to see what best can be done in the matter.

A suggestion has been made for the abolition of contract labour. I may inform the House that an Act is already there for the abolition of the Labour Contract. The only thing remains to be done is to frame rules under the Act. In the meanwhile some difficulty has arisen *i.e.*,

(AZEEZ SAIT)

somebody has challenged this Contract Act either in Gujarath or Rajasthan State. We have to wait for a decision in this respect. Till a decision is taken in this matter, we cannot proceed further in the matter.

Sri M. S. KRISHNAN.—There is a Central Rule *re*: the Contract Labour. These rules will have to be adopted by the State Government. Why should there be a delay for the last 2½ years in just copying those rules and notifying them ?

Sri AZEEZ SAIT.—Under the Labour Abolition Act, I may inform the Hon. Member that the rules have to be framed and notified. I shall take suitable action in this matter.

I request the Hon. Members to support my demand.

† ಶ್ರೀಮತಿ ಇವಾ ವಾಜ್ (ನಿತ್ಯೋಪಯೋಗಿ ಮತ್ತು ಆಹಾರ ಶಾಖೆಗಳ ರಾಜ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಈ ದಿನ ಆಹಾರ ಮತ್ತು ನಿತ್ಯೋಪಯೋಗಿ ಸರಬರಾಜು ಇಲಾಖೆಯ ಪರವಾಗಿ ಮಂಡಿಸಿದ ಬೇಡಿಕೆಗಳ ಮೇಲೆ ನಮ್ಮ ಸದನದ ಸದಸ್ಯರು ಜಾಸ್ತಿ ಪ್ರಸ್ತಾಪ ಮಾಡದಿದ್ದುದನ್ನು ನೋಡಿ ನನಗೆ ಬಹಳ ಸಂತೋಷವಾಗುತ್ತದೆ. ಅದಕ್ಕೆ ಕಾರಣವೇನೆಂದರೆ, ನಮ್ಮ ಸರ್ಕಾರದ ಈ ಇಲಾಖೆಯವರು ಆದಷ್ಟುಮಟ್ಟಿಗೆ ತಮ್ಮ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸುತ್ತಿದ್ದಾರೆ ಎಂಬ ಅಭಿಪ್ರಾಯ ಅವರೆಲ್ಲರಲ್ಲಿಯೂ ಇದೆಯೆಂದು ನಾನು ತಿಳಿದುಕೊಂಡಿದ್ದೇನೆ. ಆದರೂ ಕೆಲವು ತಾರತಮ್ಯಗಳನ್ನು ಮಾಡಿದ್ದಾರೆಂದು ಕೆಲವು ಸದಸ್ಯರು ಒಂದೆರಡು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅದರ ಪರವಾಗಿ ಸ್ವಲ್ಪ ಹೇಳಬೇಕಾಗುತ್ತದೆ. ಮಾನ್ಯ ಪುಟ್ಟರಂಗನಾಥರವರು ಅಧಿಕಾರಿ ವರ್ಗದವರು ಲೆವಿಯನ್ನು ವಸೂಲು ಮಾಡುವಾಗ ಕಿರುಕುಳ ಕೊಡುತ್ತಿದ್ದಾರೆ ಎಂದು ಹೇಳಿದರು. ಇದರ ಬಗ್ಗೆ ಹೇಳುವುದಾದರೆ, ನಾವು ಒಂದು ಲಕ್ಷ ಟನ್ ಭತ್ತವನ್ನು ವಸೂಲು ಮಾಡಬೇಕೆಂದು ನಿರ್ಧಾರ ಕೈಗೊಂಡರೂ ಬರೇ 61,353 ಟನ್ ಭತ್ತ ಮಾತ್ರ ವಸೂಲು ಮಾಡುವುದಕ್ಕೆ ನಮಗೆ ಸಾಧ್ಯವಾಗಿದೆ. ಅದರಲ್ಲಿಯೂ ಜವಾರ್ 30 ಸಾವಿರ ಟನ್ ಪಡೆಯಬೇಕೆಂದು ಮಾಡಿದರೂ ನಮಗೆ 3 ಸಾವಿರ ಟನ್ ಕೂಡ ವಸೂಲು ಮಾಡುವುದಕ್ಕಾಗಲಿಲ್ಲ. ಇದನ್ನು ನೋಡಿದರೆ ನಮ್ಮ ಅಧಿಕಾರಿಗಳು ಇನ್ನೂ ಸ್ಟ್ರಿಕ್ಟಾಗಿ ಸ್ವಲ್ಪ ಹೆಚ್ಚು ಕಿರುಕುಳ ಕೊಟ್ಟಿದ್ದರೆ ಇನ್ನೂ ಹೆಚ್ಚು ವಸೂಲು ಮಾಡಬಹುದಾಗಿತ್ತು ಎಂದು ನನ್ನ ಅಭಿಪ್ರಾಯ. ಆದರೆ ಖಂಡಿತವಾಗಿಯೂ ನಮ್ಮ ಅಧಿಕಾರಿಗಳು ರೈತರಿಗೆ ವಸೂಲಿಯಲ್ಲಿ ಕಿರುಕುಳ ಕೊಟ್ಟಿಲ್ಲ: ಆದ್ದರಿಂದ ಅವರು ಆದಷ್ಟು ಕರುಣೆಯಿಂದ ವರ್ತಿಸಿದ್ದಾರೆಂಬ ಭಾವನೆ ತಮಗೆಲ್ಲರಿಗೂ ಬರಬಹುದು.

ಇನ್ನು ಶ್ರೀಮಾನ್ ಸಿದ್ದಪ್ಪನವರು ಆಹಾರದ ಇಲಾಖೆಯ ಬಗ್ಗೆ ಪ್ರಸ್ತಾಪ ಮಾಡದಿದ್ದರೆ ಸರಿಯಾಗುವುದಿಲ್ಲವೆಂಬ ಒಂದು ವಿಚಾರ ಹೇಳಿದ್ದಾರೆ. ಅದೂ ಅಲ್ಲದೆ ಅವರು ನಮ್ಮ ಪಕ್ಕದ ಜಿಲ್ಲೆಯವರೇ ಆಗಿರುವುದರಿಂದ ಆಸ್ಪತ್ರೆಗಳಿಗೆ ಸಕ್ಕರೆ ಕೊಡುವುದಿಲ್ಲವೆಂದು ಹೇಳಿದ್ದಾರೆ. ಆಸ್ಪತ್ರೆಗಳಿಗೆ ಸಕ್ಕರೆ ಕೊಡಬೇಕೆಂದು ಈಗಾಗಲೇ ನಿರ್ಧಾರ ತೆಗೆದುಕೊಂಡಿದ್ದೇವೆ. ಆದರೆ ಯಾವ ರೀತಿಯಲ್ಲಿ ಕೊಡಬೇಕೆಂಬ ನಿಯಮವನ್ನು ಅನುಸರಿಸುವ ಬಗ್ಗೆ ತೀರ್ಮಾನವನ್ನು ತೆಗೆದುಕೊಳ್ಳುವುದರ ಬಗ್ಗೆ ಸ್ವಲ್ಪ ತಡವಾಗಿದೆ. ನಮ್ಮ ಡೈರೆಕ್ಟರ್ ಸಹ ಪ್ರತೀ ಒಂದು ಬೆಡ್ಡಿಗೆ 500 ಗ್ರಾಮ್ಸ್ ಕೊಡುವ ಏರ್ಪಾಡು ಮಾಡಬಹುದು ಎಂದು ಸಲಹೆ ಮಾಡಿದ್ದಾರೆ. ಅಲ್ಲದೆ, ಎಲ್ಲಾ ಆಸ್ಪತ್ರೆಗಳಿಗೂ ರೀತಿ ನೀತಿಗಳಿಗನುಗುಣವಾಗಿ 500 ಬೆಡ್ ಜಾಸ್ತಿ ಇದ್ದರೆ 4 ಗೋಣಿ ಸಕ್ಕರೆ ಕೊಡಬೇಕೆಂದು ಮಾಡಿದ್ದೇವೆ. 500 ಬೆಡ್ಡಿಗಿಂತ ಕಡಿಮೆ ಇದ್ದರೆ ಎರಡು ಗೋಣಿ ಸಕ್ಕರೆ ಕೊಡಬೇಕೆಂದು ಮಾಡಿದ್ದೇವೆ. ಅಷ್ಟೇ ಅಲ್ಲದೆ ಸರ್ಕಾರೀ ಇಲಾಖೆಗಳಲ್ಲಿ ಎಲ್ಲೆಲ್ಲಿ ಕ್ಯಾಂಟೀನುಗಳು ನಡೆಯುತ್ತಿವೆ, ಅಲ್ಲಿ ಕೂಡ ಜಾಸ್ತಿ ಸಕ್ಕರೆ ಕೊಡಬೇಕೆಂದು ಏರ್ಪಾಡು ಮಾಡಿದ್ದೇವೆ. ವಿಧಾನಸೌಧದ ಹತ್ತಿರವಿರುವ ಕ್ಯಾಂಟೀನಿಗೂ 4 ಮೂಟೆ ಸಕ್ಕರೆ ಕೊಡುವ ಏರ್ಪಾಡು ಮಾಡಿದ್ದೇವೆ. ಇದಲ್ಲದೆ ಪ್ರೈವೇಟ್ ಕಾರ್ಖಾನೆಗಳ ಹತ್ತಿರ ಇರುವ ಕ್ಯಾಂಟೀನುಗಳಿಗೂ ಒಂದೆರಡು ಮೂಟೆ ಕೊಡುವ ಏರ್ಪಾಡು ಮಾಡಿದ್ದೇವೆ.

ಇನ್ನು ಮಾನ್ಯ ಸದಸ್ಯರಾದ ಶ್ರೀ ಶಾಮಣ್ಣನವರು ಸೀಮೆಎಣ್ಣೆ, ಸಕ್ಕರೆ ಮತ್ತು ಟೈಯರುಗಳನ್ನು ಸರಿಯಾಗಿ ವಿತರಣೆ ಮಾಡಬೇಕೆಂದು ಹೇಳಿದ್ದಾರೆ. ಈಗ ಸೀಮೆ ಎಣ್ಣೆ ಸರಿಯಾಗಿ ವಿತರಣೆಯಾಗುತ್ತಾ ಇದೆ. ಆಕಸ್ಮಿಕವಾಗಿ ಒಂದೆರಡು ದಿವಸ ನಮಗೆ ಬರುವಂತಹ ಕೋಟಾ ಕಡಿಮೆ

ಯಾಗಿ ಸ್ವಲ್ಪ ತೊಂದರೆಯಾಯಿತು. ಅದಲ್ಲದೆ ಈ ಸ್ಫೋಟಕ ಇಲಾಖೆಯವರು ಈ ಸೀಮೆ ಎಣ್ಣೆ ಕಳಿಸುವಂತಹ ಟ್ಯಾಂಕರುಗಳಿಗೆ ಏನೊಂದು ಉಪಕರಣವನ್ನು ಅಳವಡಿಸಿಕೊಂಡಿರುತ್ತಾರೆ ಅದರ ಬಗ್ಗೆ ಒಂದು ಕ್ಲಾಸ್ ಎನನ್ನು ಹಾಕಿ ಅದರಲ್ಲಿ ಡೀಪ್ ಆಗಿ ಸೀಮೆ ಎಣ್ಣೆ ತುಂಬಿಸಬಾರದು ಎಂಬ ಕಂಡಿಶನ್ ಹಾಕಿರುವುದರಿಂದ ನಮಗೆ ಬರುವಂತದ್ದು ನಿಧಾನವಾಗಿ ವಿತರಣೆ ಕಷ್ಟ ವಾಯಿತು. ತಮಗೆಲ್ಲರಿಗೂ ಗೊತ್ತಿರುವ ಹಾಗೆ 7ನೇ ಜುಲೈ 72 ರಿಂದ ಹಿಂದೆ ಡಿಸೆಂಬರಿನಲ್ಲಿ ಯಾವ ರೀತಿಯನ್ನು ಅನುಸರಿಸುತ್ತಿದ್ದೆವೋ, ಆ ರೀತಿ ಪುನಃ ಜಾರಿಗೆ ತಂದಿದ್ದೇವೆ. ಬೆಂಗಳೂರು ಕಾರ್ಪೊರೇಷನ್‌ನ್ನು ಮೂರು ವಿಭಾಗಗಳಾಗಿ ಮಾಡಿ ಪ್ರತಿಯೊಂದು ಡಿವಿಜನಿಗೂ ಮೂರು ದಿವಸ ಕ್ಕೊಮ್ಮೆಯಾದರೂ ಬೀದಿ ಬೀದಿಗೆ ಸೀಮೆ ಎಣ್ಣೆಯನ್ನು ಸಾಗಿಸುವ ಏರ್ಪಾಡು ಮಾಡಿದ್ದೇವೆ. ಖಂಡಿತವಾಗಿಯೂ ಇಂಥ ಅಭಾವ ಮುಂದೆ ಬರಲಾರದು ; ಮತ್ತೆ ಬಂದರೆ ಎಲ್ಲಾ ಬಳಕೆದಾರರಿಗೂ ಸಿಗುವಂತೆ ಏರ್ಪಾಡು ಮಾಡುತ್ತೇವೆಂದು ಹೇಳುತ್ತೇನೆ.

ಇನ್ನು ಕೆಲವು ಕಟ್ ಮೋಷನ್ಸ್ ಬಂದಿದೆ. ಯಾವುದೇ ಒಂದು ಅಗತ್ಯವಾದ ಪದಾರ್ಥ ವನ್ನು ರಾಜ್ಯದ ಪ್ರತಿಯೊಂದು ಜಿಲ್ಲೆಗಳಿಗೆ ಜಾಸ್ತಿ ದೊರೆಯುವಂತೆ ಮಾಡುತ್ತೇವೆಂಬ ಭರವಸೆ ಯನ್ನು ಮಾನ್ಯ ಸದಸ್ಯರಿಗೆ ಕೊಡುತ್ತೇನೆ. ಎಲ್ಲಾ ಕಡೆಗಳಲ್ಲಿಯೂ ನೀತಿ ನಿಯಮಗಳನ್ನು ಅನುಸರಿಸಿಕೊಂಡು ರಾಜ್ಯದ ಮೂಲೆ ಮೂಲೆಗೂ ಏನೂ ತಾರತಮ್ಯವಿಲ್ಲದೆ ಆಹಾರ ಪದಾರ್ಥ ಗಳನ್ನು ಮತ್ತಿತರ ಮುಖ್ಯವಾದ ವಸ್ತುಗಳನ್ನು ಒದಗಿಸಿಕೊಡುತ್ತೇವೆಂಬ ಭರವಸೆಯನ್ನು ತಮಗೆ ಕೊಟ್ಟು ಈ ಬೇಡಿಕೆಗಳನ್ನು ಒಪ್ಪಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

MADAM SPEAKER.—Now I will put the Demands to the Vote of the House. The question is :

"That the respective sums not exceeding the amounts shown inclusive of the sums granted "on account" be granted to the Government to defray the charges which will come in course of payment during the financial year for the period ending with 31st day of March 1973" in respect of Demand Nos. 3, 4, 26, 50A, 15 and 53."

The motion was adopted and the demands were granted.

As ordered by the Chair the motion for Demands adopted by the House are reproduced below :—

DEMAND NO. 3.—STATE EXCISE.

10. State Excise Duties.

"That a sum not exceeding Rs. 1,98,00,000 inclusive of the sum granted 'on account', be granted to the Government to defray the charges which will come in course of payment during the financial year for the period ending 31st day of March 1973, in respect of 'State Excise Duties'."

DEMAND NO. 4.—MOTOR VEHICLES ACTS—ADMINISTRATION.

11. Taxes on Vehicles.

"That a sum not exceeding Rs. 42,99,000 inclusive of the sum granted 'on account' be granted to the Government to defray the charges which will come in course of payment during the financial year for the period ending 31st day of March 1973, in respect of 'Taxes on Vehicles'."

(MADAM SPEAKER)

DEMAND No. 26.—LABOUR AND EMPLOYMENT.

38. Labour and Employment.

"That a sum not exceeding Rs. 1,81,00,000, inclusive of the sum granted 'on account', be granted to the Government to defray the charges which will come in course of payment during the financial year for the period ending 31st day of March 1973, in respect of 'Labour and Employment'.".

DEMAND No. 50-A.—CAPITAL OUTLAY ON ROAD AND WATER TRANSPORT SCHEMES.

114. Capital Outlay on Road and Water Transport Schemes.

"That a sum not exceeding Rs. 5,00,000, inclusive of the sum granted 'on account', be granted to the Government to defray the charges which will come in course of payment during the financial year for the period ending 31st day of March 1973, in respect of 'Capital Outlay on Road and Water Transport Schemes'."

DEMAND No. 15.—MISCELLANEOUS DEPARTMENTS.

26. Miscellaneous Departments.

"That a sum not exceeding Rs. 2,52,23,000, inclusive of the sum granted 'on account', be granted to the Government to defray the charges which will come in course of payment during the financial year for the period ending 31st day of March 1973, in respect of "Miscellaneous Departments'."

DEMAND No. 53.—CAPITAL OUTLAY ON SCHEMES OF GOVERNMENT TRADING

124. Capital Outlay on Schemes of Government Trading.

"That a sum not exceeding Rs. 19,73,57,000, inclusive of the sum granted 'on account', be granted to the Government to defray the charges which will come in course of payment during the financial year for the period ending 31st day of March 1973, in respect of 'Capital Outlay on Schemes of Government Trading'."